75/-

ಜೋನಿಬೆಲ್ಲ

ಅರೆಬಾಸೆ ಕತೆಗ



ಕುಂಞೇಟಿ ಶಿವರಾಮ ಗೌಡ (ವ್ಯಾಸ)

ಜೋನಿಬೆಲ್ಲ

ಅರೆಬಾಸೆ ಕತೆಗ

ಕುಂಞೇಟಿ ಶಿವರಾಮ ಗೌಡ

ಪ್ರಕಾಶನ

ವ್ಯಾಸ ಸೇವಾ ಟ್ರಸ್ಟ್ (ರಿ)

II–112– ಕೊಲ್ಲಮೊಗ್ರ ಸುಳ್ಯ ತಾಲೂಕು, ದ.ಕ

Joni Bella: Arebase Stories Writen by Kunhety Shivarama Gowda *(Vyasa).*
Published by Vyasa Seva Trust, Kollamogra, Sullia Tq D.K.

ಜೋನಿಬೆಲ್ಲ

(ಅರೆಬಾಸೆ ಕತೆಗ)

ಲೇಖಕರು : ಕುಂಞೇಟಿ ಶಿವರಾಮ ಗೌಡ
II–112– ಕೊಲ್ಲಮೊಗ್ರ ಗ್ರಾಮ
ಅಂಚೆ: ಕೊಲ್ಲಮೊಗ್ರ, 574218
ದೂರವಾಣಿ: 9187705284

ಪ್ರಕಾಶಕರು: ವ್ಯಾಸ ಸೇವಾ ಟ್ರಸ್ಟ್ (ರಿ)
II–112– ಕೊಲ್ಲಮೊಗ್ರ ಗ್ರಾಮ
ಅಂಚೆ: ಕೊಲ್ಲಮೊಗ್ರ 574218
ಸುಳ್ಯ ತಾಲೂಕು, ದ.ಕ

ಮೊದಲ ಆವೃತಿ : 2016
ಪ್ರತಿ : 1000

ಬೆಲೆ : 75.00

ಲಿಪಿ ಸಂಯೋಜನೆ/ ಮುದ್ರಣ : ಮುಡೂರು ಇನ್‌ಫೋಟೆಕ್ ಪಂಜ 08257 278458



ಅರ್ಪಣೆ

ಹತ್ತ್ ಕುಟುಂಬ ಹದಿನೆಂಟ್ ಗೋತ್ರದ
ಸಮಾಜ ಬಾಂದವುಕೆ

ಬರ್‌ದವ ನಿಮ್ಮ ಜತೆಲಿ

ಅರೆಬಾಸೆ ಒಂದು ಆಡ್ ಮಾತ್. ಸ್ವಂತ ಲಿಪಿ ಇಲ್ಲೆ. ಈ ಬಾಸೆಲಿ ಸಾಹಿತ್ಯ ರಚನೆ ಬಾರಿ ಕಮ್ಮಿ. **ಶ್ರೀಮಾನ್ ಡಿ.ವಿ ಸದಾನಂದ ಗೌಡ್ರು** ಮುಖ್ಯಮಂತ್ರಿ ಆದ ಸಮಯಲಿ ಅಳ್ದ್ ಹೋದ ಸ್ಥಿತಿಗೆ ಮುಟ್ಟಿದ ಅರೆಬಾಸೆ ಸಂಸ್ಕೃತಿ ಮತ್ತೆ ಸಾಹಿತ್ಯನ ಉಳ್ಸಿ ಬೆಳ್ಸಿಕೆ ಒಂದು ಅಕಾಡಮಿ ಸುರು ಆತ್.

ದಕ್ಷಿಣಕನ್ನಡ ಮತ್ತೆ ಕೊಡ್ಗ್ ಜಿಲ್ಲೆಲಿ ಅರೆಬಾಸೆನ ಮನೆ ಮಾತಾಗಿ ಮಾತಾಡ್ವ ಜನಂಗಳ ದೊಡ್ಡ ಸಂಖ್ಯೆ ಉಟ್ಟು. ಹತ್ತ್ ಕುಟುಂಬ ಹದಿನೆಂಟ್ ಗೋತ್ರಕೆ ಸೇರ್ದ ತುಳು ಮಾತಾಡ್ವ ಜನಂಗಳ ಮೂಲ ಬಾಸೆ ಅರೆಬಾಸೆನೆ. ಪರಿಸರ ಮತ್ತೆ ವ್ಯವಹಾರದ ದೃಷ್ಟಿಂದ ಅವುಕೆ ತುಳು ಅಬ್ಬೆಸ ಆತ್ ಅಷ್ಟೆ. ಒಂದು ಬಾಸೆ ಬೆಳೆಕೆ ಆಡ್ ಮಾತ್ ಎಷ್ಟ್ ಮುಖ್ಯನೋ, ಸಾಹಿತ್ಯಕ್ಕೆ ಹನಿಯ ಹೆಚ್ಚಿನ ತೂಕ ಉಟ್ಟು. ಐನೂರು ವರ್ಸಕೆ ಹಿಂದೆ ಇಂಗ್ಲೀಸ್‌ಗೆ ಇಂಗ್ಲೇಂಡಿಲೇ ದೊಡ್ಡ ಮನ್ನಣೆ ಇತ್ಲೆ. ರಾಜಕೀಯ ಸಕ್ತಿ ಮತ್ತೆ ಸಾಹಿತ್ಯಂದಾಗಿ ಪ್ರಪಂಚಲಿ ಇಂಗ್ಲೀಸ್ ಹಬ್ಬುತಾ ಉಟ್ಟು. ಒಂದು ಬಾಸೆ ಬೆಳೆದು ಅಥವಾ ಅಳೆದು ಅದರ ಮನೆ ಮಾತಾಗಿ ಮಾತಾಡ್ವ ಜನರ ಕೈಲಿಟ್ಟು. ಮಾತ್ ಮತ್ತೆ ಸಾಹಿತ್ಯದ ಕೊರತೆಂದ ತುಂಬಾ ಬಾಸೆಗ, ಸಂಸ್ಕೃತಿಗ ಅಳ್ದೇ ಹೋಗೊಳೊ.

ಈಗ ಅರೆಬಾಸೆ ಸಂಸ್ಕೃತಿ ಮತ್ತೆ ಬಾಸೆನ ಬೆಳ್ಸಿಕೆ ಒಂದು ಸುವರ್ಣಾವಕಾಶ ಸಿಕ್ಕಿಟು. ನಾವು ಬೇರೆ ಬೇರೆ ಪ್ರಕಾರದ ಸಾಹಿತ್ಯ ರಚನೆ ಮಾಡ್ರೆ ಮಾತ್ರ ನಮ್ಮ ಸಂಸ್ಕೃತಿ ಬಾಸೆ ಬೆಳ್ದದೆ. ಅಷ್ಟೆ ಅಲ್ಲ ಅನ್ಯ ಬಾಸೆ ಜನಗಳಿಗೂ ತಿಳ್ದದೆ. ಅರೆಬಾಸೆ ಮಾತಿಲಿ ಮಹಾಪ್ರಾಣ ಪ್ರಯೋಗ ಇಲ್ಲೆ. ಹೆಚ್ಚಿನ ಸಬ್ದಗ ಅಲ್ಪಪ್ರಾಣ ಮಾತ್ರ. ಅರೆಬಾಸೆ ಸಾಹಿತ್ಯ ರಚನೆ ಮಾಡ್ಕನ ಸರಿಯಾದ ಸಬ್ದ ಸಿಕ್ಕದಿದ್ದ ಸಂದರ್ಬ ಬೇರೆ ಬಾಸೆ ಸಬ್ದಗಳ ತಕಂಕೆ ಅಂಜಿಕೆ ಮಾಡ್ಕೆ ಬೊತ್ತ್. ಇಂದ್ ಪ್ರಪಂಚದ ಯಾವ ಬಾಸೆನೂ ನೂರಕ್ಕೆ ನೂರು ಸುದ್ದ ಬಾಸೆಂತ ಇಲ್ಲೆ. ಕೊಡ್ದು ತಕಂದು ಬಾಸೆ ಬೆಳವಣಿಗೆಲಿ ಸಹಜ ನಿಯಮ.

ಇಲ್ಲಿ ನಾ ಬರ್ದ ಕತೆಗ ಒಂದು ಸುರುನ ಪ್ರಯತ್ನ. ಕತೆ ನಿರೂಪಣೆ ಮತ್ತೆ ಬಾಸೆನ ಪ್ರಯೋಗಲಿ ತುಂಬಾ ಹೆಚ್ಚಿ ಕಡ್ಮೆ ಉಟ್ಟುಂತ ನಂಗೇ ಗೊತ್ತುಟು. ಈ ಕತೆಗಳ್ಲಿ ಬಾವ ಹೆಸ್ರ್‌ಗ, ಗಟನೆಗ ಮತ್ತೆ ವಿವರಗ ನಮ್ಮ ಬಗ್ಗೆನೇ ಬರ್ದಾಂಗೆ ಕೆಲವುಕೆ ಸಂಸಯ ಬಾಕೆ ಸಾಕ್. ಈ ಕತೆಗಳ್ಲಿ ಬಾವ ಎಲ್ಲಾ ವಿವರಗ ಕೇವಲ ಕಾಲ್ಪನಿಕ. ಆದರೆ ನಮ್ಮ ಜೀವನಕ್ಕೆ ಹಕ್ಕಲೆ ಇರ್ವ ವಿಸಯಗಂತ ನನ್ನ ಅಭಿಪ್ರಾಯ. ಐವತ್ತ್, ಅರ್ವತ್ತ್ ವರ್ಸಕೆ ಹಿಂದೆ ಹಳ್ಳಿ ಜನ ಜೀವನ, ಜನಸಾಮಾನ್ಯರ ರೀತಿ ರಿವಾಜ್‌ಗ ಈಗನ ಯುವ ಜನಾಂಗಕ್ಕೆ ಪರಿಚಯ ಮಾಡ್ವ ಉದ್ದೇಶಂದ ಕೆಲವು ಗಟನೆಗಳ ಸೇರ್ಸಿ ಬರ್ದೊಳೆ. ಇದ್ ನನ್ನ ಮೊದಲ ಬರೆಹ. ಇದರ ತಕಂಡ್ ಓದಿ ತಮ್ಮ ಅಭಿಪ್ರಾಯಗಳನ್ನ ತಿಳ್ಸಿರೆ ನನ್ನ ಮುಂದಿನ ಬರೆಹಕ್ಕೆ ಸಹಾಯ ಆದೆಂತ ಸಾಹಿತ್ಯ ಅಭಿಮಾನಿಗಳಲ್ಲಿ ಕೇಳಿಕೊಂಡನೆ.

ಈ ಕತೆ ಪುಸ್ತಕ ಪ್ರಕಟಣೆ ಮಾಡ್ಕೆ ಹೆಜ್ಜೆ ಹೆಜ್ಜೆಗೆ ಸರಿಯಾದ ಮಾರ್ಗದರ್ಶನ ಮಾಡಿ ಪ್ರೋತ್ಸಾಹದ ಮುನ್ನುಡಿ ಬರ್ದ್ ಹುರುಪು ಕೊಟ್ಟ ಖ್ಯಾತ ಸಾಹಿತಿ ವಿದ್ವಾನ್ ಟಿ.ಜಿ ಮುಡೂರು ಇವುಕೆ, ಕರಡು ಪ್ರತಿನ ಕೂಲಂಕುಶ ಪರಿಶೀಲಿಸಿ ತಪ್ಪುಗಳ ತಿದ್ದಿ ಸಹಕರಿಸಿದ

ನಿವೃತ್ತ ಶಿಕ್ಷಕರಾದ ರುದ್ರಚಾಮುಂಡಿ ಕುಶಾಲಪ್ಪ ಗೌಡ್ರಿಗೆ, ಮುದ್ರಿಸಿಕೆ ಮುಂದೆ ಇದರ ಓದಿ ಪ್ರೋತ್ಸಾಹದ ಅಭಿಪ್ರಾಯ ಕೊಟ್ಟ ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ ಮಡಿಕೇರಿ ಹಾಗೂ ನನ್ನ ಅರೆಬಾಸೆ ಕತೆಗಳ ಓದಿ ಮೆಚ್ಚಿಗೆ ಬರೆದ ಬೆಳ್ಳಾರೆ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಯು. ಸುಬ್ರಾಯ ಗೌಡ ಇವಕ್ಕೆಲ್ಲ ನನ್ನ ಆತ್ಮೀಯ ವಂದನೆಗಳ ಸಲ್ಲಿಸಿನೆ.

ಮುದ್ರಣ ವಿನ್ಯಾಸದಲ್ಲಿ ಅಪೂರ್ವ ಸಾಧನೆಯ ಶ್ರೀ ಸವಿತಾರ ಮುಡೂರು, ಮಾಲಕರು ಮುಡೂರು ಇನ್‌ಫೋಟೆಕ್ ಪಂಜ, ಇವು ಲಿಪಿ ಸಂಯೋಜನೆಯಿಂದ ಮುದ್ರಣದವರೆಗೆ ಆಸಕ್ತಿಯಿಂದ ಕಾರ್ಯ ಪೂರೈಸ್ಯೊಳೊ. ಇವರ ಉಪಕಾರನ ಮನತುಂಬಿ ನೆನೆದನೆ.

– ಕುಂಞೇಟಿ ಶಿವರಾಮ ಗೌಡ

ದಿನಾಂಕ : 08.04.2016
ಯುಗಾದಿ

ಅಚ್ಚಿಗೆ ಹೋವ ಮುಂದೆ ಓದಿ ಕಂಡವರ ಮೆಚ್ಚು ನುಡಿಗ

ಇಲ್ಲಿ ಕಾಂಬ ಹೆಚ್ಚಿನ ಕತೆಗ ಅರೆಬಾಸೆ ಮಾತಾಡುವವರ ಬೊದ್ಕ್‌ನ ಸೂಕ್ಷ್ಮ ಸಂಗ್ತಿಗಳ ತಿಳ್ಸಿವೆ.

– ಯು.ಸಂ.ಗೌ, ಗುತ್ತಿಗಾರು
ಪ್ರಾಂಶುಪಾಲರು,
ಸಂಯುಕ್ತ ಪ.ಪೂ.ಕಾಲೇಜು ಬೆಳ್ಳಾರೆ, ಸುಳ್ಯ

"ಜೋನಿಬೆಲ್ಲ" ಅರೆಬಾಸೆ ಸಂಕಲನ ಒಂದು ಜನಪದ ಹೂನ ಮಾಲೆನಂಗೆ, ಜನಜೀವನದ ರಸದ ಗಂಟ್.

– ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ, ಮಡಿಕೇರಿ
ಕೊಡಗಿನ ಗೌರಮ್ಮ ಪ್ರಶಸ್ತಿ, ಕೊಡಗು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ
ಮತ್ತು ಕಿತ್ತೂರು ರಾಣಿ ಚೆನ್ನಮ್ಮ ರಾಜ್ಯ ಪ್ರಶಸ್ತಿ ಪಡ್ದವು.

ಮುನ್ನುಡಿ

ಗ್ರಾಮೀಣ ಪ್ರದೇಶಗಳಲ್ಲಿ ಬಹುಕಾಲ ಅಧ್ಯಾಪನಾ ವೃತ್ತಿಯಲ್ಲಿದ್ದು ವಿರಮಿಸಿರುವ ಶಿವರಾಮ ಕುಂಞೇಟಿಯವರು ತಮ್ಮ ವಿಶ್ರಾಂತ ಜೀವನದಲ್ಲಿ ತಮ್ಮ ಸಹಜ ಕೃಷಿಯೊಂದಿಗೆ ಸಾಹಿತ್ಯ ಕೃಷಿಯಲ್ಲೂ ಕೈಯಾಡಿಸಿ ಅರೆಬಾಸೆಯ ಜೋನಿಬೆಲ್ಲ ಕಥಾ ಸಂಕಲನವನ್ನು ಓದುಗರ ಮುಂದಿಡುತ್ತಿರುವುದು ಹೆಚ್ಚು ಸಂತೋಷ ತರುತ್ತಿದೆ. ಶಿಕ್ಷಣ ಕ್ಷೇತ್ರವಲ್ಲದೆ ಸಾಹಿತ್ಯ ಸಂಸ್ಕೃತಿ ಜಾನಪದ ಪರಿಸರದ ಸಾಮಾಜಿಕ ವಲಯಗಳಲ್ಲಿ ತೊಡಗಿಸಿಕೊಂಡಿರುವ ಲೇಖಕರ ಸ್ವಾನುಭವ ಈ ಕೃತಿಯಲ್ಲಿ ಮೈ ತಳೆದುಕೊಂಡಿದೆ. ಮೊದಲಾಗಿ ಇಂದು ಅರೆಬಾಸೆಯೆಂದು ಕರ್ನಾಟಕ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯಿಂದ ಪರಿಗಣಿಸಲ್ಪಟ್ಟಿರುವ ಗೌಡ ಅರೆಗನ್ನಡದಲ್ಲಿ ಬರೆದಿರುವ ಅದೇ ತಾಯ್ನುಡಿಯ ಭಾಷಾ ಪರಿಸರದಲ್ಲಿ ಉಸಿರಾಡುತ್ತಿರುವ ಇವರ ಬರೆಹಗಳಲ್ಲಿ ಸಹಜವಾಗಿ ಜೀವಂತಿಕೆಯಿದೆ. ಕೃತಿಯು ಕೃತಿಗಾರನ ಅಂತರಂಗದ ಸೊತ್ತೆಲ್ಲವನ್ನೂ ಪ್ರತಿಬಿಂಬಿಸುವ ಫಲಕ ಎಂದಾದರೆ ಅವೆಲ್ಲವೂ ಇಲ್ಲಿ ಅಕ್ಷರಗಳಲ್ಲಿ ಮೂಡಿಬಂದಿವೆ. ಲೇಖಕರು ಇವನ್ನು ಕತೆಗಳೆನ್ನುತ್ತಾರೆ. ಇವು ಕತೆಗಳೂ ಹೌದು ಜತೆಗೆ ನವಿರಾದ ಲಲಿತ ಪ್ರಬಂಧಗಳೂ ಹೌದೆನ್ನಬಹುದು. ಜೇನುಬೆಲ್ಲದಂತಿರುವ ಜೋನಿಬೆಲ್ಲವು ಗ್ರಾಮೀಣರಾಡುವ ರೂಢಿಯ ಪದಪಾಕವು ಹೌದು

ಇಲ್ಲಿನ ಹದಿನಾಲ್ಕು ಪ್ರಸಂಗಗಳಲ್ಲಿ ಕೊನೆಯ ಪಾಕಿಸ್ತಾನ ಯುದ್ದ ಮತ್ತು ಕನಸಾದ್ರೂ ಸತ್ಯ ಇವೆರಡನ್ನು ಹೊರತುಪಡಿಸಿದರೆ ಗದ್ದೆಗೋರಿಯಿಂದ ಗುಳಿಗನ ಕೋಲದವರೆಗಿನ ಹದಿನೆರಡು ಕಥನಗಳು ಗ್ರಾಮೀಣ ಬದುಕಿನ ಸಹಜ ಚಿತ್ರಣಗಳು – ಪ್ರತಿಯೊಂದೂ ಸರಳ ನಿರೂಪಣೆಯಿಂದ ಮೂಡಿಬಂದಿವೆ. ಇವು ಕವಿಯ ಕಲ್ಪನೆ ಅಲಂಕಾರಗಳಿಂದ ಹೆಣೆದ ಕಟ್ಟುಕತೆಗಳಲ್ಲ. ಕತೆಗಾರನು ಕಂಡುಂಡ ಸ್ವಾನುಭವದ ಗಟ್ಟಿಕತೆಗಳು. ಇವನ್ನು ಓದುತ್ತಿದ್ದಾಗ ಕುವೆಂಪು ಅವರ ಮಲೆನಾಡಿನ ಚಿತ್ರಗಳು, ಗೊರೂರು ಅವರ ನಮ್ಮೂರ ರಸಿಕರು ನೆನಪಾಗಬಹುದು. ಸರಳಸಂಕ್ಷಿಪ್ತ ಚಿಕ್ಕಚೊಕ್ಕವಾಗಿದ್ದು. ಒಂದೇ ಉಸಿರಲ್ಲಿ ಓದಿ ಮುಗಿಸಬಹುದಾದ ಚಿತ್ರಣಗಳಲ್ಲಿ ಕೆಲವೊಂದು ಓದುಗರ ಚಿತ್ತದಲ್ಲಿ ಅಚ್ಚೊತ್ತಾಗಿ ನಿಲ್ಲಬಹುದು

ಇಲ್ಲಿನ ಕೆಲವು ಕತೆಗಳ ಕೊನೆ ತಿರುವು ಪಡೆದುಕೊಳ್ಳುತ್ತಿರುವುದು – ಅಂತ್ಯವನ್ನು ಲೇಖಕರು ಓದುಗರ ಮುಂದಿಡುವುದು ಕಂಡುಬರುತ್ತಿದೆ. ಗದ್ದೆಗೋರಿಯ ಕೊನೆಗೆ ಉಗ್ರಾಣಿ ಆಮೇಲೆ ಅವನ ಮಗನ ಪ್ರವೇಶಗಳು 'ಈಗ ನೀವೇ ಹೇಳಿ ನಿಜಕ್ಕೂ ಕಳ್ಳ ಅಪ್ಪನೊ

ಮಂಜನೋ' ಎಂಬ ಪ್ರಶ್ನೆಗಳು ಓದುಗರಿಗೆ ಇದಿರಾಗುತ್ತವೆ. ಗದ್ದೆಗೋರಿಯಲ್ಲಿ ಉಳುಮೆಗೆ ಬಾರದೆ ಕೆಸರಲ್ಲಿ ಮಲಗಿದ ಕಳ್ಳ ಎತ್ತುಗಳ ಬಾಲದ ಗಂಡೆಗೆ ಕೈ ಹಾಕಿ ಎಬ್ಬಿಸುವ ಚಳಕ– ಎತ್ತಿಗೆ ಕಪ್ಪೆಯಾದಾಗ ಕಾಸಿಡುವ – ಅತಿ ಉಂಡ ಉಬ್ಬೆಸಕ್ಕೆ ಓಡುಕಸಾಯದ ಹಳ್ಳಿ ಔಷಧಗಳು – ಜೋನಿಬೆಲ್ಲದ ಪಾಕದ ಪರಿಣತಿಗಳು ಹೀಗೆ ಹಳ್ಳಿಯ ಹಲವಾರು ಕೌಶಲ್ಯಗಳು ಅಲ್ಲಲ್ಲಿ ಕಂಡು ಬರುತ್ತವೆ. ಅತಿಶಯೋಕ್ತಿ ಅತ್ಯುಕ್ತಿ ಉತ್ಪ್ರೇಕ್ಷೆಗಳಿಂದ ಅಲಂಕರಿಸದೆ ಅರೆಬಾಸೆಯ ಸ್ವಭಾವೋಕ್ತಿಗಳೇ ಇಲ್ಲಿ ಅಧಿಕವಾಗಿವೆ. 'ಮೂಡ ಬುಡಿಕೆ ಮುಂದೆ – ಕಳ್ದ ವರ್ಸ ಮೂರು ಕಂಬ್ಳಿ ಚಳಿ ಇತ್ತಂತ ಜನ ಹೇಳ್ತಿದ್ದೊ' ಎಂಬಂತಹ ಅಲ್ಲಲ್ಲಿ ಬರುವ ಅರೆಬಾಸೆಯ ತನಿ ಬನಿಗಳು ಕೃತಿಯ ಸೊಬಗನ್ನು ಹೆಚ್ಚಿಸುತ್ತವೆ

ಹಿಂದೆ ಆಡುನುಡಿಯಾಗಿ ಮಾತ್ರವಿದ್ದು ಅರೆಮರೆಯಲಿದ್ದ ಅರೆಬಾಸೆಯು ಇಂದು ಸಾಕ್ಷರತೆ ಪಡೆದು ಕನ್ನಡ ಲಿಪಿಗಳನ್ನು ಬಳಸಿ ಬರೆಹಕ್ಕೆ ಮುಂದಾಗಿದೆ. ಅರೆಭಾಷಿಕ ಗೌಡರು ಹಳ್ಳಿಯಿಂದ ಡೆಲ್ಲಿಯವರೆಗೆ ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ತಮ್ಮ ಸಾಧನೆಯ ಗುರುತುಗಳನ್ನು ಎತ್ತಿ ತೋರಿಸುತ್ತಿದ್ದಾರೆ. ಹೊತ್ತಿಗೆ ತಕ್ಕಂತೆ ಮಿಡಿಯುವ ಸಂದರ್ಭಕ್ಕೆ ಸರಿಯಾಗಿ ಸಿಡಿಯುವ ನುಡಿಯಾಗಿ ಅರೆಬಾಸೆ ಬೆಳೆಯಬೇಕಿದೆ. ಹಳ್ಳಿಯ ಗ್ರಾಮೀಣ ಮಣ್ಣ ಮೂರಿಯಲ್ಲಿ ಚಿಗುರೊಡೆದು ಫಲಿಸಿದಂತೆ ಪೇಟೆ ಪಟ್ಟಣ ನಗರಗಳ ಸೊಗಡುಗಳಿಂದ ಕೂಡಿದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅರೆಭಾಷಾ ಕೃತಿಗಳು ಅರಳಿ ಬರಬೇಕಿದೆ. ಈ ನಿಟ್ಟಿನಲ್ಲಿ ಶಿವರಾಮರ ಮೊದಲ ಕೃತಿ ಜೋನಿಬೆಲ್ಲದ ರುಚಿ ಓದುಗರಿಗೆಲ್ಲರಿಗೂ ಮುಟ್ಟಲಿ. ವ್ಯಾಸ ಟ್ರಸ್ಟ್ ಇನ್ನಷ್ಟು ಹೊತ್ತಗೆಗಳನ್ನು ಹೊರತರಲಿ. ಕುಂಞೇಟಿಯವರ ಸಾಹಿತ್ಯ ಸೇವೆ ಸಫಲವಾಗಲಿ ಎಂದು ಮನಸಾ ಹಾರಯಿಸುತ್ತೇನೆ

– ವಿದ್ವಾನ್ ಟಿ.ಜಿ ಮುಡೂರು

ಪರಿವಿಡಿ

ಉಗ್ರಾಣಿ ಸೋಂಪ

ಜಾಳ್ತೆತಿಂಗ ಬಾಕನ ನಮ್ಮ ಊರ್ಲಿ ಚಳಿ ಜೋರು ಸುರು ಆದೆ. ಕಳ್ದ ವರ್ಷ ಮೂರ್ ಕಂಜ್ಯಿ ಚಳಿ ಇತ್ತ್‌ಂತ ಜನ ಹೇಳ್ತಿದ್ರೊ. ಅದೇ ಹೊತ್ತಿಗೆ ಸುಗ್ಗಿ ಗದ್ದೆ ಬೇಸಾಯನೂ ಸುರು ಆದೆ. ಕೋಳಿ ಕೂಂಗ್‌ಕನ ಎದ್ದ್ ಹೂಡ್‌ವ ಎತ್ತ್‌ಗಳಿಗೆ ಮಡ್ಡಿಕೊಟ್ಟು ಹುಲ್ಲು ಹಾಕೊಕು. ಮೂಡ ಬುಡಿಕೆ ಮುಂದೆ ಎತ್ತ್ ಕಟ್ಟಿ ಎರ್ಡ್ ಹೊಳಿ ಹೂಡೊಕು. ಅಂದ್ ಗುಂಡಿಗದ್ದೆ ಗುಡ್ಡಪ್ಪ ಮಾವನ ದೊಡ್ಡ ಗದ್ದೆಗೋರಿ. ಒಂದ್‌ವರೆ ಮುಡಿ ಬಿತ್ತ್ ಹೋವ ಆ ಬೈಲ್‌ಲೇ ದೊಡ್ಡ ಗದ್ದೆ. ಈ ಗದ್ದೆಗೋರಿಗೆ ಕಮ್ಮಿ ಆದ್ರೂ ಹನ್ನೆರಡ್ ಜೊತೆ ಎತ್ತ್ ಬೇಕ್. ಮನೆವು ಎತ್ತ್ ಕಟ್ಟಿ ಆದ ಮೇಲೆ ಬೈಲ್‌ನವು ಒಬ್ಬೊಬ್ಬನೆ ಬಂದ್ ಎತ್ತ್ ಇಳ್ಸ್‌ವೆ. ಹಾಂಗೇನೆ ಮೂಲೆಮನೆ ಮ್ಯಾಲಪ್ಪ ಅಬ್ಬೆಸ ಮಾಡ್‌ಕೆಂತ ಅವನ ಎರ್ಡ್ ಹೊಸ ಹೋರಿಗಳ ಗೋರಿ ಗದ್ದೆಗೆ ತಂದ್ ನೊಗ ನೇಗಲ್ ಕಟ್ಟಿಕೆ ಸುರು ಮಾಡ್ತ್. ಅಬ್ಬೆಸ ಇಲ್ಲದ ಹೋರಿಗ ನೊಗ ನೇಗ್ಲ್ ಹೊತ್ತ್‌ಕಂಡ್ ಪುಣಿ ಮುಟ್ಟದೆ ಆಚೆ ಗದ್ದೆಗೆ ಹಾರ್ದ್ರೊ. ಮ್ಯಾಲಪ್ಪ ಎಷ್ಟ್ ಬೊಬ್ಬೆ ಹಾಕಿರೂ ಹೋರಿಗ ಗೋರಿಗದ್ದೆಗೆ ತಿರ್ಗಿ ಬಾಕೆ ಕೇಳದೆ ಅಲ್ಲೆ ಬಿದ್ದ್‌ಕಂಡೊ. ಬೆನ್ನಿಗೆ ಬೇರಿ ಬೇರಿ ಪೆಟ್ಟ್ ಕೊಟ್ಟರೂ ಹೋರಿಗ ಮಸ್ಗಿಲ್ಲೆ. ಆಗ ಎತ್ತ್ ನಿಲ್ಸಿ ಅಲ್ಲಿಗೆ ಬಂದ ತಿಮ್ಮಪ್ಪಣ್ಣ ಹೋರಿಗಳ ಬೀಲದ ಗೆಂಡೆಗೆ ಕೈ ಹಾಕಿದ ಕೂಡ್ಲೆ ಎದ್ದ್ ನಿತ್ತೊ. ಇಬ್ಬೋರ್ ಸೇರಿ ಅಬ್ಬೆಸ ಇರುವ ಎತ್ತ್‌ಗಳ ನಡುಲಿ ನೇಗ್ಲ್ ನೆಲಕೆ ಮುಟ್ಸದೆ ಎಲ್ಲವರೊಟ್ಟಿಗೆ ಹೊಳಿಗೆ ಎರ್ಡ್ ಸುತ್ತ್ ಬಂದೊ. ಹೊಸ ಹೋರಿಗಳಿಗೆ ಪೆರ್ಚಿ ಹೋಗಿ ಒಟ್ಟಿಗೆ ನಡೆಕೆ ಅಬ್ಬೆಸ ಆತ್. ಒಂದು ಹೊಳಿ ಮುಗೆವ ಹೊತ್ತಿಗೆ ಮ್ಯಾಲಪ್ಪಣ್ಣ ಕುದ್ರೋಳ್‌ನ ಒತ್ತಿ ಹಿಡ್ದ್ ಬಲ, ಬಲಂತ ಹೇಳ್‌ಕನ ಮುಂದೆ ಹೋವ ಎತ್ತ್‌ಗಳಾಂಗೆ ಬಲ್ದಿಗೆ ತಿರ್ಗುವ ಅಬ್ಬೆಸ ಆತ್. ಅಂತೂ ಮದ್ದೇನ ಎತ್ತ್ ಬುಡ್‌ಕಾಕನ ಹೊಸ ಹೋರಿಗ ಹೂಟೆಗೆ ಬಂದೋಂತ ಎಲ್ಲೊವುಕೆ ಕುಸಿ ಆತ್.

ಬಂದ ಹನ್ನೆರ್ಡ್ ಜೊತೆ ಎತ್ತ್‌ಲಿ ನಾಗಪ್ಪ ಸಣಪನ ಎತ್ತ್‌ಗ ಬಾರಿ ಗಟ್ಟಿ ಮುಟ್ಟ್‌ನವು, ಒಂದೇ ಎತ್ತರ, ಕಪ್ಪು ಬೆಳಿ ಬಣ್ಣ, ಬಾಚ ಕೊಂಬು ಹೊಳೆವ ಮೈ ನೋಡ್‌ಕನ ಕೊಂಡಾಟ ಆತಿತ್ತ್. ಆರ್ ಹಲ್ಲಿನ ರಾಮ, ಲಚ್ಚ್ಮಣಂತ ಹೆಸರ್‌ನ ಹೋರಿಗ ಕಣ್ಣ್ ಮುಟ್‌ವಾಂಗೆ ಇದ್ದೊ. ಅವರ ಸಾಂಕಣೆ ಹಂಗೆ ಇತ್ತ್. ಹೂಡಿಕೆ ಸುರು ಮಾಡಿ ಅರ್ಧಗಂಟೆ ಕಳ್ದಿಟು ಅಷ್ಟೆ. ಹೂವಪ್ಪನ ಕುದೋೞ್ ಕೀಲ್ ಅಲ್ಗಿಕೆ ಸುರು ಅತ್. ಕಲ್ಲಿಲಿ ಗುದ್ದಿ ಗಟ್ಟಿಮಾಡ್ತ್. ಗದ್ದೆಗೋರಿಗೆ ಬಾಕನ ಎಲ್ಲವೂ ಸಮ್ದ ಸಣ್ಣ ಸಣ್ಣ ಕುದ್ದೋೞ್‌ನ ತಾವುದೇ ಹೆಚ್ಚಿಗೆ. ಅಷ್ಟೊತ್ತಿಗೂ ಗದ್ದೆ ಒಂದು ಸಾಲ್ ಕೂಡ್ತ್. ಎತ್ತ್ ನಿಲ್ಸಿ ಹೂಡೊವು ಕಾಫಿ ಕುಡೆಕೆ ಕಟ್ಟಪುಣಿಗೆ ಬಂದೊ. ಕೊಸ್‌ಲಕ್ಕಿ ಪುಂಡಿ, ಗದ್ದೆ ಚೆರ್ಗ್ ಸಾರ್ ಎಲ್ಲವೂ ಹೊಟ್ಟೆ ತುಂಬುವಷ್ಟು ತಿಂದೊ. ಜೋನಿ ಬೆಲ್ಲ ಹಾಕಿದ ಕಣ್ಣ ಕಾಫಿ ಕುಡೆವಷ್ಟು ಇತ್ತ್. ಎಲಾಡಿಕೆ ತಿಂದ್ ಕೈಲಿದ್ದ ಸುಣ್ಣನ ಅಲ್ಲೇ ಇದ್ದ ಚಾಳೆಗೆ ತಿಕ್ಕಿ ಗದ್ದೆಗೆ ಇೞ್ದೊ. ಮುಂದೆ ಹೊಡೆವ ಎತ್ತ್‌ಗ ಒೞ್ಳೆ ಅಬ್ಬೆಸ ಇದ್ದೊವು. ಗೋರಿ ಗದ್ದೆಲಿ ಒಸಿ ನೀರ್ ಕಟ್ಟಿದ್ ಹೆಚ್ಚಾದ್ರೂ ಅಂದಾಜಿಗೆ ಹೊೞಿ ತಪ್ಪದೆ ಹೋತಿದ್ದೊ. ನಾಗಪ್ಪ ಸಣಪನ ಎತ್ತ್‌ಗ ಮಾತ್ರ ಆ ಬೈಲ್‌ಲಿ ಗದ್ದೆಗೋರಿಗೆ ಯಾಗೋಳು ಮುಂದೆ ಹೊಡೆಕೆ ಅವರ ಎತ್ತುಗಳೇ ಆಕುಂತ ಎಲ್ಲವೂ ಹಟ ಹಿಡೆತಿದ್ದೊ.

ಗದ್ದೆಗೋರಿ ಮುಗೆಕೆ ಒಸಿ ಹೊತ್ತ್ ಇರ್ಕನ ಸೋಮಣ್ಣ ಗೌಡ್ರ ಬಾಲ ತುಂಡಾದ ಕೆಂಪಯ ಎತ್ತ್ ಯಾಕೋ ನಿದಾನ ನಡ್ದದೆ. ಕರೆಲಿ ನಿಲ್ಸಿ ನೋಡ್‌ಕನ ಹೊಟ್ಟೆ ಉಬ್ಬಿಕಂಡ್ ಕಂಡದೆ. ಗದ್ದೆ ಪುಣಿ ಇಸ್‌ತಿದ್ದ ದುಗ್ಗಣ್ಣ ಅಜ್ಜ ಹಕ್ಕಲೆ ಬಂದ್ ಹೊಟ್ಟೆಗೆ ಬಡ್ದ್ ನೋಡ್ಕನ ಎತ್ತಿಗೆ ಕಪ್ಪೆ ಆವುಟ್‌ಂತ್ ಹೇೞ್ದೊ. ಎತ್ತಿನ ನೊಗ ಬಿಚ್ಚಿ ಕರೆಲಿ ಕಟ್ಟಿದೊ. ಮಡ್ಕೆ ಓಡ್‌ಲಿ ಕೆಂಡ ಹಾಕಿ ಒಂದು ಕಬ್ಬಿಣದ ಸರೞ್‌ನ ಕಾಸಿ ಕೆಂಪ್ ಕೆಂಪ್ ಆಕನ ಎತ್ತ್‌ನ ಬೆನ್ನ್ ಮೇಲೆ ಸುೞಿ ಇರುವ ಜಾಗೆಗೆ ಕಾಸಿ ಇಸಿದೊ. ಒಮ್ಮೆ ಚುೞ್ಳಿ ಹಾರ್ದ ಎತ್ತ್ ಮತ್ತೆ ಸುಮ್ಮನೆ ನಿತ್ತತ್. ಅಷ್ಟೊತ್ತಿಗೆ ಕುಕ್ಕಪ್ಪನ ನೇಗ್ಲ್‌ಗೆ ಹೊಡ್ದ ಪುಣ್ಣೊಳು ಜಾರಿ ಚೋೞು ಗದ್ದೆಲಿ ಬಿದ್ದ್ ಹೋತ್. ಎಷ್ಟ್ ಹುಡ್ಕಿರೂ ಪುಣ್ಣೋೞ್ ಸಿಕ್ಕಿತಿಲ್ಲೆ. ಅದರ ಆಸೆ ಬುಟ್ಟ್ ಬರಿ ನೇಗಲ್‌ಲೇ ಎತ್ತ್ ಬುಡ್‌ಕನ ಮುಟ್ಟ ಹೂಡ್ದೊ.

ಮಾಮೂಲ್‌ನಾಂಗೆ ಗದ್ದೆಗೋರಿ ಆಗಿ ಹಲೆಗೆ ಮೆಟ್ಟಿಕೆ ನಾಗಪ್ಪ ಸಣಪನ ಎತ್ತ್‌ಗಳೇ ಒೞ್ಳೆದ್‌ಂತ ಅವುಕ್ಕೇ ಹಲೆಗೆ ಕಟ್ಟಿದೊ. ಅಲ್ಲಿದ್ದ ಸಾಂತಪ್ಪ ಹೈದ ನಾನೇ ಹಲೆಗೆ ಮೆಟ್ಟಿನೆಂತ ಬಾರಿ ಉಮೇದ್‌ಲಿ ಬಾತ್. ಹಲೆಗೆ ಮೇಲೆ ಕಾಲ್ ಇಸಿ ಎತ್ತ್‌ಗಳ ಬಾಲ ಹಿಡ್ದ್ ಬೆನ್ನಿಗೆ ಕೋಲ್ ತಾಂಗಿದೇ, ಏನಾತೋ ಗೊತ್ತಿಲ್ಲೆ, ಎಲ್ಲವೂ ನೋಡ್ತಾ ಇದ್ದಂಗೆ ಜೀಲ ಕುತ್ತ ಮಾಡಿ ಗುತ್ತ್ ತೆಗ್‌ದ್ ಓಡಿಕೆ ಸುರು ಮಾಡ್ದೊ. ಸಣಪ ಓಡಿಕಂಡ್ ಬಂದರೂ ಎತ್ತ್‌ಗ ಗದ್ದೆ ತಲೆಗೆ ಎತ್ತಿ ಕಟ್ಟಪುಣಿ ಹಾರಿಕೆ ಜೊತ್ತದೆ ಹಿಂದೆ ತಿರ್ಗಿ ಓಡಿಕೆ ನೋಡ್‌ವೆ. ಅಷ್ಟೋತ್ತಿಗೆ ಹಲೆಗೆ ಕಟ್ಟೆಪುಣಿಗೆ ತಾಂಗಿ ಜಾರ್‌ಕನ ಸಾಂತಪ್ಪ ಹೈದ ಕಾಲ್ ತಪ್ಪಿ ಹೋಗಿ ಗದ್ದೆ ಚೋೞ್‌ಲಿ ಅಂಗಾತನೆ ಬೀತ್. ಸಾಂತಪ್ಪ ಎದ್ದ್ ಬಾಕನ ಎತ್ತ್‌ಗ ಇನ್ನೊಂದ್ ತಲೆಗೆ ಎತ್ತಿ ಕೆಬಿ ನಿಮೊರ್ಸಿಗಂಡ್ ಅತ್ತ ಇತ್ತ ನೋಡ್‌ವೆ. ಸಣಪ ಬಂದ್ ಬೆನ್ನ್ ತಟ್ಟಿ ಸಮಾದಾನ ಮಾಡ್ದ ಮೇಲೆ ಎತ್ತ್‌ಗ ಸುಮ್ಮನೆ ನಿತ್ತೊ. ಸಾಂತಪ್ಪಂಗೆ ಮತ್ತೆ ಹಲೆಗೆ ಮೆಟ್ಟಿಕೆ ಧೈರ ಬಾತಿಲೆ. ಬಿದ್ದ ಬರಕ್ಕೆ ಅವನ ಎಡ್ದಕಾಲಿನ ಉಂಗುಷ್ಟಕ್ಕೆ ಯಾವುದೊ ಕಾಡ್ ಕಣೆ ತಾಂಗಿ ಉಗ್‌ರ್ ಕಿತ್ತ್ ಹೋವುಟ್. ಹೈದಂಗೆ ಕಾಲ್ ಊರಿ ನಡೆಕೆ ಕಷ್ಟ ಆತ್. ಬೇಗ ಬೇಗ ಕೈ

ಕಾಲ್ ತೊಳ್ದ್ ಕಟ್ಟ ಪುಣಿಲಿದ್ದ ಕೆಂದ ಜಾಳೆಗೆ ಒರ್ಗಿ ಕುದ್ದತ್. ಹೂಡೊವು ಹಕ್ಕಲೆ ಬಂದ್ ಏನಾತಂತ ವಿಚಾರ್ಸಿರೆ ಬಾಯಿ ಬುಡದೆ ಚಪ್ಪೆ ಮೋರೆ ಮಾಡಿಕಂಡ್ ಕುದ್ದತ್. ಸಣಪಂಗೆ ಹಲೆಗೆ ಮೆಟ್ಟಿ ಆಕನ ಗಂಟೆ ಎರಡ್ ಆವುಟ್. ಹೂಡೊವ್‌ಕೆ ಹೊಟ್ಟೆ ಹಸ್ದ್ ತಡೆಕೇ ಬೊತ್ತ್. ಬೇಗ ಬೇಗ ಎತ್ತ್‌ಗಳ ಮೈ ತೊಳ್ದ್ ಮೊಣ್ಕಾಲ್ ಉದ್ದ ನೀರ್‌ಲಿ ಮಿಂದ್ ಎದ್ದೊ. ಮನೆಂದ ಉಂಬಕ್ಕೆ ಬರೊಕುಂತ ಕರೆದು ಕೇಳ್ತ್. ಉಂಬಕ್ಕೆ ಎಲ್ಲವೂ ಹೋಕನ ಸಾಂತಪ್ಪನೂ ಹಿಂದೆಂದ ಕಾಲ್ ಚೊಟ್ಟ ಹಾಕಿಕಂಡ್ ನಿದಾನಲಿ ಹೋತ್.

ಗದ್ದೆಗೋರಿಗೆ ಎತ್ತ್ ತಂದೊವು, ಪುಣಿ ಇಸೊವು, ನೇಜಿ ತೆಗೆವು ಎಲ್ಲಾ ಸೇರಿ ಊಟಕ್ಕೆ ಹದಿನೆಂಟ್ ಜನ ಕುದ್ದೊಳೊ. ಅಲ್ಲಿದ್ದ ಮೂರು ಜನ ಹೆಣ್ಮಕ ಒಂದು ಕರೆಲಿ ಕುದ್ದೊ. ಗದ್ದೆ ಗೋರಿಗೆ ಊಟ ಹನಿಯ ಗಡ್‌ದ್‌ಲೇ ಮಾಡ್ಯೊಳೊ. ಹುಗ್ಗಿ ಇಕ್ಕಿದ ಮೇಲೆ ಎಲಸಂಡೆ ಪಲ್ಯ, ಸೋಂತೆ ಗೈಪು, ಬದನೆ ಪೊಜ್ಜಿ, ಕಡ್ಲೆ ಗಸಿ, ಮ್ಯಾನಮಿಡಿ ಉಪ್ಪನಕಾಯಿಂತ ಹೇಳಿ ಐದಾರ್ ಬಗೆ ಇತ್ತ್. ಮಜ್ಜಿಗೆ ಕುಡಿವೊಸ್ಟ್ ಕೊಟ್ಟೊ. ಎರಡ್ ಮೂರ್ ಜನ ಕಾರ ಕಮ್ಮಿಂತ ಹೇಳಿ ಕಾಯಿ ಮೆಣ್ಸ್ ಕಚ್ಚಿಕಂಡ್ ಉಂಬೊದ್ ಕಾಣ್‌ತಿತ್ತ್. ಹತ್ತ್ ಸೇರ್ ಹುಗ್ಗಿ ಮುಗ್ದ್ ಮನೆವುಕೆ ಬೇರೆ ಗಂಜಿಗೆ ನೀರ್ ಇಸಿದೊ. ಹಿಂದೆನವು ಊಟಲಿ ಮುಂದೆ ಇದ್ದಂಗೆ ಕೆಲ್ಸಲಿ ಅಷ್ಟೆ ಗಟ್ಟಿಗರ್. ಹಿಂದೆ ಒಬ್ಬನ ಕೆಲ್ಸ ಈಗನ ಮೂರ್ ಜನ ಸೇರಿರೂ ಮಾಡಿಕೆ ಆಕಿಲ್ಲೆ.

ಊಟ ಮುಗ್ಸಿ ಎಲಾಡಿಕೆ ತಿಂದ್ ಒಂದೊಂದು ಕಡೆ ಗೋಡೆಗೆ ಒರ್ಗಿ ಕುದ್ದು ಪಟ್ಟಾಂಗ ಸುರು ಮಾಡ್ದೊ. ಊರ್‌ನ ಸುದ್ದಿ, ಮಳೆ, ಬೆಳೆ, ದನಕರ್, ಕಾಡ್ ಪ್ರಾಣಿಗಳ ಉಪದ್ರ ಎಲ್ಲಾ ಮುಗ್ದ್ ಎದ್ರಿಕಾಕನ ಮೇಯಕೆ ಬುಟ್ಟ ಎತ್ತ್‌ಗ ಹೊಟ್ಟೆ ತುಂಬಿ ಅಲ್ಲಲ್ಲಿ ಮರದ ನೆರಳ್‌ಲಿ ಮಲ್ಗಿ ಮೇಕಡ್ಡವೆ. ಗಂಟೆ ಮೂರು ದಾಟಿಕೆ ಆವುಟ್. ಎಲ್ಲವೂ ಎದ್ದ್ ಹೊರ್ಡಿಕೆ ನೋಡ್‌ಕನ ಪಟೇಲ್‌ರ ಉಗ್ರಾಣಿ ಯಾವುದೂ ಕೆಲ್ಸಲಿ ಅಲ್ಲಿಗೆ ಬಾತ್. ಊರ್‌ನ ಹೊಸ ಹೊಸ ಸುದ್ದಿಗ ಅಂವಂಗೆ ಮುಂದೇ ಗೊತ್ತಾದೆ. ಬಿಸ್‌ಲಿಗೆ ನಡ್ಕಂಡ್ ಬಂದ ಸೋಂಪ ಉಗ್ರಾಣಿ ಒಂದು ಚೊಂಬು ನೀರ್ ಕೇಳಿ ಗಟ ಗಟಂತ ಕುಡ್ದ್ ಮಾತ್ ಸುರುಮಾಡ್ತ್. ಮರಾಯರ್‍ರೇ, "ನೀವುಗೆ ಒಂದ್ ಕತೆ ಗೊತ್ತ್‌ಟಾಂತ" ಪೀಟಿಕೆ ಹಾಕಿತ್. ಎಲ್ಲವೂ ಉಗ್ರಾಣಿನ ಮಾತ್ ಕೇಳ್‌ಕೆ ಅವನ ಸುತ್ತ ಸೇರ್ದೊ. ಅಂವ ಬಾರಿ ಚಲಾಕ್ ಮೊನ್ಸ. ಎಲಿ ಹೋತ್‌ಂತ ಇದ್ದರೆ ಹುಲಿ ಹೋತ್‌ಂತ ರಂಗ್ ಮಾಡಿ ಹೇಳ್‌ತಿತ್ತ್. ಉಗ್ರಾಣಿ ಕೆಲ್ಸಕೆ ಸೇರ್ಕೆ ಮುಂದೆ ಅಂವ ಆಟದ ಮೇಳಲಿ ಸಾಮಾನ್ ಪೆಟ್ಟಿಗೆ ಹೊರ್‌ವ ಕೆಲ್ಸಲಿ ಇತ್ತ್‌ಗಡ. ವೇಸದಾರಿಗಳ ಮಾತ್ ಕೇಳಿ ಕೇಳಿ ಅವರ ಕೆಲವು ಮಾತ್‌ಗಳ ನೆನ್‌ಪಿಲಿ ಇಸಿಕಂಡ್ ಊರ್‌ಲಿ ಕತೆಕಟ್ಟಿ ಸುಳ್ಳ್‌ನ ಸತ್ಯದ ಅಪ್ಪನಾಂಗೆ ಸತ್ಯನ ಸುಳ್ಳ್‌ನಾಂಗೆ ಜನ ನಂಬುವಾಂಗೆ ನಾಲಿಗೆ ಎಳೆತಿತ್ತ್. ಅವನ ಗುಣ ಗೊತ್ತಿದ್ದರೂ ಜನಂಗ ಅವನ ರಂಗ್‌ನ ಮಾತಿಗೆ ತಲೆ ಬೀಸ್‌ತಿದ್ದೊ.

ಸೋಂಪಣ್ಣ ಬೇಗ ಹೇಳ್ ಏನ್ ಕತೆಂತ ಒತ್ತಾಯ ಮಾಡ್ದೊ. ಎಲಾಡಿಕೆ ತಿಂದ್ ಅದರೊಟ್ಟಿಗೆ ಬೆರಳ್‌ಗಂಟ್ ಉದ್ದದ ಕುಣಿಯಹೊಸೇಪು ತುಂಡ್ ಮಾಡಿ ಬಾಯಿಗೆ ಹಾಕಿ ಎರ್ಡ್ ಸರ್ತಿ ಕೆಮ್ಮಿ ಎಲ್ಲವೊರ ಮೋರೆ ನೋಡ್ತ್. ಎಲ್ಲವೂ ಕೆಬಿ ನೆಟ್ಟಂಗೆ ಮಾಡಿ ಸುದ್ದಿ ಸದ್ದ್ ಇಲ್ಲದೆ ಅವನ ಸುತ್ತ ಕುದ್ದೊ. ಮಾರಾಯರ್‍ರೇ ವಿಸಯ ಗೊತ್ತುಟಾ, ಇಂದಿಗೆ ಇಪ್ಪತ್ತೊಂದನೇ ದಿನ ಮಂಗಳವಾರ ಏಕಾದಸಿ ದಿನ ರಾತ್ರೆ ಸರಿ ಹನ್ನೆರಡ್ ಗಂಟೆಗೆ ಭೂಕಂಪ ಆಗಿ ಎಲ್ಲವೂ ಸತ್ತವೆಂತ ಪಟೇಲ್‌ರ ಮನೆಲಿರುವ ರೇಡಿಯೊಲಿ ಬಂದುಟುಂತ

ಕತೆ ಸುರು ಮಾಡ್ತ್. ಆ ಕಾಲಲಿ ಇಪ್ಪತ್ ಮೈಲ್ ಸುತ್ತಳತೆಲಿ ಪಟೇಲರ ಮನೆಲಿ ಮಾತ್ರ ಒಂದು ಫಿಲಿಪ್ಸ್ ರೇಡಿಯೋ ಇತ್ತ್. ರೇಡಿಯೊಲಿ ಬಂದರೆ ಖಂಡಿತ ಹಂಗೆ ಆದೆಂತ ನಂಬುವ ದಿನ.

ಅದ್ಕೆ ಏನ್ ಮಾಡ್ದುಂತ ಎಲ್ಲವೂ ಮೋರೆ ಮೋರೆ ನೋಡ್‌ಕೆ ಸುರು ಮಾಡ್ದೊ. ವಿಸಯ ಮುಂದರ್ಸಿದ ಸೋಂಪ ನಾವು ಇನ್ ಹೆಚ್ಚು ದಿನ ಬದ್ಕ್‌ಕಿಲ್ಲೆ ಆದರ್‌ಂದ ಅಷ್ಟ್ ದಿನ ತಿಂದ್ ಉಂಡ್ ಗಮ್ಮತ್ ಮಾಡೊಕು. ನಿಮ್ಮಲ್ಲಿರುವ ಬಟ್ಟೆಬರೆ, ಚೆಂಬು ಪಾತ್ರೆ, ದವಸ ಧಾನ್ಯ ಎಲ್ಲಾ ಮನೆ ಬಾಮಿಗೆ ಹಾಕಿ ಮಣ್ಣ್ ಮುಚ್ಚೋಕು. ಕೋಳಿ ಹಂದಿಗಳ ಕೊಂದ್ ತಿನೋಕು. ಚಿನ್ನ, ಬೆಳ್ಳಿ, ದುಡ್ಡ್‌ನೆಲ್ಲಾ ಹೊಂಡ ತೆಗ್ದ್ ಮಣ್ಣಡಿಲಿ ಹಾಕೊಕು. ದನ ಕರ್‌ಗಳ ಕಾಡಿಗೆ ಅಟ್ಟೊಕು. ಹಿಂಗೆ ಎಲ್ಲವೂ ಇನ್ನ್ ಹತ್ತ್ ದಿನ ಊರಿನ ದೇವಸ್ಥಾನಕ್ಕೆ ಹೋಗಿ ಸತ್ತರೆ ಸ್ವರ್ಗ ಸಿಕ್ಕೊಕುಂತ ಸತ್ಯನಾರಾಯಣ ಪೂಜೆ, ಮೃತ್ಯುಂಜಯ ಹೋಮ, ರುದ್ರಾಬಿಷೇಕ, ಮಂಗಳಾರಾರ್ತಿ, ಹಣ್ಣುಕ್ಯಾ ಮಾಡ್ಸಿ ಭಕ್ತಿಂದ ಸುದ್ದಲಿ ಎಲ್ಲವೂ ಇರೊಕುಂತ ಹೇಳ್ತ್. ಅಕೇರಿ ದಿನ ನಾ ದೇವಸ್ಥಾನಕ್ಕೆ ಬನ್ನೆ. ಹೆಚ್ಚಿಕಡ್‌ಮೆ ಇದ್ದರೆ ತಿಳ್ಸಿನೆಂತ ಹೇಳಿ, ಕಾಫಿ ಕುಡೆಕೂ ನಿಲ್ಲದೆ ಎದ್ದ್ ಹೋತ್.

ಅಲ್ಲಿದ್ದ ಒಂದೆರಡ್ ಬೆಳ್ದ ಹುಡುಗರಿಗೆ ಸೋಂಪನ ಮಾತ್‌ಲಿ ನಂಬಿಕೆ ಬಾತಿಲ್ಲೆ. ಇದರ್ಲಿ ಏನೊ ದಗಲ್‌ಬಾಜಿ ಉಟ್ಟುಂತ ಸಂಸಯ ಬಾತ್. ಕೆಲವು ಸೊಂಪ ಹೇಳ್ದಂಗೆ ಮಾಡ್ದೊ. ಮನೆಲಿರುವ ಚಿನ್ನ, ಬೆಳ್ಳಿ ದುಡ್ಡ್‌ನೆಲ್ಲಾ ಮನೆ ಎದ್‌ರ್ ಅಂಗಳಲಿ ಗುಂಡಿ ತೆಗೆದ್ ಚೊಂಬಿನ ಪಾತ್ರಲಿ ತುಂಬಿ ಹುಗ್‌ದ್ ಮೊಣ್ಣ್ ಮುಚ್ಚಿ ಅದರ ಮೇಲೆ ತೊಳ್ಸಿದೈ ನೆಟ್ಟ್ ಬುಟ್ಟೊ. ಅಕೇರಿ ದಿನ ಬಾತ್ ಜನಂಗೆಲ್ಲ ದೇವಸ್ಥಾನಲಿ ಸೇರ್‌ಯೊಳೊ ಪೂಜೆ, ಹೋಮ ನಡೆತ ಉಟ್ಟು. ಮಹಾಪೂಜೆ ಸಮಯ ಆದ್ರೂ ಸೋಂಪನ ಪತ್ತೆ ಇಲ್ಲೆ. ಕಾದ್ ಕಾದ್ ಜನಂಗೆಲ್ಲ ದೇವ್ರ ಪುಸ್ರಾದ ತಕಂಡ್ ಅವರವರ ಮನೆಗೆ ಹೊರ್‌ಟ್ ಹೋದೊ. ಮನೆಗೆ ಹೋಗಿ ನೋಡ್ಕನ ಎಲ್ಲವರ ಮನೆ ಅಂಗಳಲಿ ನಟ್ಟ ತೊಳ್ಸಿದೈ ಮಾಯ ಆವುಟು. ಮಣ್ಣಡಿಲಿ ಇಸಿದ ಚಿನ್ನ, ಬೆಳ್ಳಿ, ದುಡ್ಡ್ ಹುಡ್‌ಕ್‌ಕೆ ಸುರುಮಾಡ್ದೊ. ಎಲ್ಲ ಕಾಣೆ ಆವುಟ್. ಜನಂಗಳಿಗೆ ತಲೆಗೆ ಮರ ಬಿದ್ದಂಗಾತ್. ಯಾರ್ ಮೇಲೆ ದೂರು ಕೊಡ್ದ್? ಎಲ್ಲ ಕುದ್ದ್ ಮಾತಾಡ್ಕನ ಉಗ್ರಾಣಿ ಸೊಂಪನ ಮೇಲೆ ಸಂಸಯ ಹುಟ್ಟಿತ್.

ಮಾರ್ನೆ ದಿನ ಸೊಂಪನ ಹುಡ್‌ಕಿಕಂಡ್ ಅವನ ಮನೆಗೆ ಹೋಕನ ಮೈಸೂರ್‌ಲಿ ಪೋಲಿಸ್ ಕೆಲ್ಸಲಿರುವರ ಸೊಂಪನ, ಮಂಜ ಮಾಧವ ಮನೆಲಿ ಸಿಕ್ಕಿತ್. ಅಯ್ಯೋ ಮಾರಾಯರ್ರೇ, ನೀವು ನನ್ನ ಅಪ್ಪನ ಮೇಲೆ ಯಾಕೆ ಅಪವಾದ ಹೊರ್ಸಿರೆ, ಅವು ಚಿನ್ನದಂತ ಮೊನ್ಸ. ಅವುಕ್ಕೆ ಕ್ಯಾನ್ಸರ್ ಕಾಯಿಲೆ ಬಂದ್ ಹನ್ನೆರ್ಡ್‌ನೇ ತಾರೀಕಿಗೆ ಬೆಂಗಳೂರು ಆಸ್ಪತ್ರೆಗೆ ದಾಖಲ್ ಆಗೊಳೊ. ನೋಡಿ ಇಲ್ಲಿ ಆಸ್ಪತ್ರೆ ಚೀಟ್‌ಂತ ತೆಗ್‌ದ್ ತೋರ್ಸಿತ್. ನಾ ಮನೆಗೆ ಮುಟ್ಟಿ ಅರ್ಧ ಗಂಟೆ ಆತ್ ಅಷ್ಟೆಂತ ಬೇಜಾರ್ಲಿ ಹೇಳ್ತ್. ಕದ್ದಂವ ಅಪ್ಪನೋ, ಮಂಜನೊಂತ ನಿಗಂಟ್ ಮಾಡಿಕೆ ಆಗದೆ ಪೋಲಿಸ್ ಕೇಸ್ ಕೊಡ್‌ಕೆ ದೈರ ಬಾತ್ಲೆ. ಈಗ ನೀವೆ ಹೇಳಿ ನಿಜಕ್ಕೂ ಕಳ್ಳ ಅಪ್ಪನೊ? ಮಂಜನೋ?!

ಹೊಸ್ತ್ ಉಂಬೊದು

ಹತ್ತ್ ನಲ್ವತ್ ವರ್ಸಕೆ ಹಿಂದೆ ನಮ್ಮ ಊರ್ಲಿ ಎಲ್ಲವೂ ಗದ್ದೆ ಬೇಸಾಯ ಮಾಡ್ತಿದ್ದೊ. ಬೈಲ್ ಗದ್ದೆಲಿ ಎರ್‌ಡ್ ಬೆಳೆ ಬಾತಿತ್. . ಮಜಲ್ ಗದ್ದೆಲಿ ಏಣೇಲ್ ಬೆಳೆ ಮಾತ್ರ. ಇದ್ ಮಳೆ ನೀರ್‌ಲಿ ಬೆಳೇದು. ಕಾರ್ತಿಂಗಲ್ಲಿ ಬಿತ್ತಿರೆ ನಿಡ್ನಾಲತಿಂಗ ಬಾಕನ ಬೆಳೆ ಕ್ಯೊಲಿಗೆ ಬಾತಿತ್. ಬೆಳೆ ಕದರ್ ಹೋಗಿ ಕಾಯಿಕಟ್ಟುವ ಸಮಯಲಿ ಗದ್ದೆ ಪುಣಿಲಿ ಹೋದರೆ ಮೂಂಗಿಗೆ ಬಾರಿ ಪರಿಮಳ ಹೊಡೆದು. ಅಂತ ಭಾಗ್ಯ ಈಗನವುಕೆ ಕೋಟಿ ಕರ್ಚಿ ಮಾಡ್ರೂ ಸಿಕ್ಕಿಕಿಲ್ಲೆ.

ಹಳ್ಳಿ ಜನಗ ಗದ್ದೆ ಬೇಸಾಯ ಮಾಡಿ ಉಂಬಕೆ ಬೇಕಾದ ಅಕ್ಕಿ ಇಸಿಕಂಡ್ ಹೆಚ್ಚಿಗೆ ಇದ್ದರೆ ಮಾರಾಟ ಮಾಡ್‌ವ ಬದ್ಲ್‌ಗೆ ಮುಡಿಕಟ್ಟಿ ಹೊಗೆ ಅಟ್ಟಲಿ ಇಸ್‌ತಿದ್ದೊ. ಒಂದೊಂದು ವರ್ಸ ಮಳೆ ಹಚ್ಚಿಗೆ ಬಂದ್ ಬೆಳೆ ಕರ್ಗಿಹೋತಿತ್, ಒಮ್ಮೊಮ್ಮೆ ಮಳೆ ಕಡ್ಮೆ ಬಿದ್ದ್ ಬತ್ತದ ಬೆಳೆ ಒಣಗಿ ಹೋತಿತ್ತ್. ಕಷ್ಟಕಾಲಕ್ಕೆ ಅಟ್ಟಲಿ ಮುಡಿಕಟ್ಟಿಯಿಸಿರೆ ಉಂಬಕೆ ಹೆದ್ರಿಕೆ ಇಲ್ಲೆ.

ಬೆಳೆ ಕ್ಯೊಲಿಗೆ ಬಾಕನ ಜನಗ ಒಬ್ಬಂದೊಬ್ಬ ಕೂಡ್ಯಾಡಿ ಗದ್ದೆ ಕೆಲ್ಸ ಮಾಡ್ತಿದ್ದೊ. ಒಳ್ಳೆದಿನ ನೋಡಿ ಗದ್ದೆಗೆ ಹಾಲ್ ಇಸಿ ದೇವರ ಪ್ರಾರ್ಥನೆ ಮಾಡಿ ಕ್ಯೊಲಿಗೆ ಸುರು ಮಾಡ್ತಿದ್ದೊ. ಮೂರ್ತದ ದಿನ ಒಂದೆರಡ್ ಮುಂಡಿ ಹಿಡೆವಷ್ಟ್ ಕದರ್ ಕ್ಯೊದ್ ಮನೆಗೆ ತಾವುದು. ಹಿಂದೆಂದ ನಡ್ದ್ ಬಂದ ಸಂಪ್ರದಾಯ. ಎಲ್ಲಾ ಮನೆವು ತಲಕಾವೇರಿ ಸಂಕ್ರಮಣಕ್ಕೆ ಮುಂದೇನೆ ಹೊಸ್ತ್ ಊಟ ಮಾಡಿ ಮುಗ್ಸೊಕು. ಬಲೀಂದ್ರ ಹಬ್ಬದವರೇಗೆ ಹಬ್ಬ ಮಾಡ್‌ಕನ ಮುಟ್ಟ ಮನೆಗಲ್ಲಿ ಹೊಸ ಅಕ್ಕಿ ಊಟ ಮಾಡ್‌ಕೆ ಜೊತ್ತ್. ಹೊಸ ಅವಲಕ್ಕಿ ಕೂಡಾ ತಿಂಬೊಕೆ ಜೊತ್ತ್‌ಂತ ಪದ್ದತಿ ಇತ್ತ್. ದೆವ್ವಗಳ ಪೂಜಾರ್ಮೆ ಮಾಡ್ವ ಪೂಜಾರಿಗ ಹೊಸಲಕ್ಕಿ,

ಹೊಸ ಅವಲಕ್ಕಿ ಮತ್ತೆ ಎಲಾಡಿಕೆ ತಿಂಬಕನ ಹೊಸ ಅಡಿಕೆ ಮುಟ್ಟಿಕೆ ಬೊತ್ತ್. ಎಲ್ಲವು ಕಾವೇರಿ ಸಂಕ್ರಮಣಕೆ ಮುಂದೆ ಮನೆ ತುಂಬ್ಸಿ ಹೊಸ್ತ್ ಊಟ ಮಾಡೋಕು. ಸೂತಕ ಪಾತಕ ಬಂದೊವು ಹಬ್ಬ ಹೊಸ್ತ್ ಎಲ್ಲಾ ಮುಂದೆನ ವರ್ಸ ಮಾಡೊಕು.

ನಮ್ಮ ಬೈಲ್‌ಲಿ ಆಗ ಇದ್ದದ್ ಒಂಭತ್ತ್ ಮನೆಗ ಮಾತ್ರ. ಊರು ಗೌಡ್ರು, ಬುದ್ದಿವಂತ, ಸೀರಾಡಿ ದೆವ್ವದ ಪೂಜಾರಿ ಮೇದಪ್ಪಂದ್. ಒಳ್ದವರ್ಲಿ ನಾಲ್ಕ್ ಮನೆ ವರ್ಗದಾರರ್ದ್, ಮೂರು ಮನೆ ಚಿಪ್ಪೊಕ್ಲ್ (ಗೇಣಿ) ಕಾವೇರಿ ಸಂಕ್ರಮಣಕ್ಕೆ ಹದಿನೈದ್ ದಿನಕೆ ಮುಂದೆ ಒಂದೊಂದೇ ಮನೆಗಳ್‌ಲಿ ಹೊಸ್ತ್ ಊಟ ನಡ್ದದೆ. ಮನೆ ಯೆಜಮಾನ, ಅವನ ಮಂಜ ಬೆಳಿಗ್ಗೆ ಬೇಗ ಕೋಳಿ ಕೂಂಗ್‌ಕೆ ಮುಂದೆ ಎದ್ದ್ ತಲೆ ಮೈ ಮೀದ್ ದೇವ್ರ ದೀಪಕ್ಕೆ ಕೈ ಮುಗ್ದ್ ಹೊಸ ಬತ್ತ ತಾಕೆ ಗದ್ದೆಗೆ ಹೋತಿದ್ದೊ. ಅವರವರ ಗದ್ದೆಗೆ ಹೋಗಿ ಕೈ ಕ್ಯೊದ್ ತಲೆಲಿ ಹೊತ್ತ್‌ಕಂಡ್ ಪೊಲಿ ಪೊಲಿಯೇ ಮನೆ ತುಂಬು-ತುಂಬುಂತ ಹೇಳಿಕಂಡ್ ಮನೆ ಎದ್‌ರ್ ತೊಳ್ಸಿ ಕಟ್ಟೆಗೆ ಸುತ್ತ್ ಬಂದ್ ಮನೆ ಒಳಗೆ ದೇವ್ರ ಪಟ ಇರುವಲ್ಲಿ ಒಂದ್ ಬೆಂಡ್ ಕುಕ್ಕೆಲಿ ಇಸಿ ದೇವ್ರ್‌ಗೆ ಅಡ್ಡ ಬಿದ್ದವೆ. ಗಂದದ ಬೊಟ್ಟು ಹಾಕಿಕಂಡ ಮೇಲೆ ಕದ್‌ರ್ ಕಟ್ಟಿಕೆ ಸುರು ಮಾಡ್ವೆ. ಗದ್ದೆಂದ ಕದರ್ ತಾಕನ ಬೇರೆವರ ಗದ್ದೆಂದಳೂ ಕದರ್ ಕದ್ದ್ ತಾವ ಕೆಟ್ಟ ಸಂಪ್ರದಾಯ ಯಾಕೆ ಸುರು ಆತ್‌ಂತ ಗೊತ್ತಿಲ್ಲೆ. ಆದ್ರೂ ಹೆಚ್ಚಿನವು ಈ ಕೆಟ್ಟ ಕ್ರಮನ ಬುಡದೇ ಮುಂದುವರ್‌ಸ್ತಾ ಒಳೊ. ಇದರ ಎಡೆಲಿ ಅಣ್ಣ ತಮ್ಮಂದರ್ ಕದರ್ ತಾಕೆ ಹೋದಲ್ಲಿ ನಡ್ದ ಒಂದು ಗಟನೆ ಜನರ ಬಾಯಿಂದ ಬಾಯಿಗೆ ಹೋತಾವುಟ್ಟು. ಕೊಡಗ್‌ಲಿ ಒಮ್ಮೆ ಅಣ್ಣನೂ ತಮ್ಮನೂ ಸೇರಿ ಬೆಳಿಗ್ಗೆನ ಜಾವಲಿ ಕದರ್ ತಾಕೆ ಗದ್ದೆಗೆ ಹೋದವೆ. ಕೊಡಗಿನ ಪದ್ದತಿ ಪ್ರಕಾರ ಮನೆ ಕೋವಿನ ತಕಂಡ್ ಹೋಗಿ ಕದರ್ ತೆಗೆಕೆ ಸುರು ಮಾಡ್ಕನ ಗಾಳಿಗೆ ಗುಂಡು ಹೊಡ್ದವೆ. ಮನೆಂದ ಹೊರ್ಡ್‌ಕನ ತಮ್ಮನ ಕೈಲಿ ಕೋವಿ ಕೊಟ್ಟು ಕದರ್ ತೆಗೆಕನ ಗುಂಡ್ ಹೊಡೆಕುಂತ ಅಣ್ಣ ಹೇಳ್ತ್. ತಮ್ಮ ಹನಿಯ ಬೋಳ, ಅಣ್ಣನ ಮಾತಿನ ಮನ್ಸ್‌ಲಿ ಗಟ್ಟಿ ಮಾಡಿಕಂಡ್ ಹೋತ್. ಅಣ್ಣ ಗದ್ದೆಗೆ ಇಳ್ದ್ ಕತ್ತಿ ಹಾಕಿಟು ಅಷ್ಟೆ, ಅಷ್ಟೊತ್ತಿಗೆ ಹಿಂದೆ ಇದ್ದ ತಮ್ಮ ಅಣ್ಣಂಗೆ ಗುಂಡ್ ಹೊಡ್ತ್. ಅಣ್ಣನ ಹೆಣ ಬಿದ್ದದ್ ನೋಡಿ ತಮ್ಮನೂ ಸೊಯತಪ್ಪಿ ಬಿದ್ದೋತ್. ಮನೆವು ಬಂದ್ ನೋಡ್ಕನ ಅಣ್ಣ ತಮ್ಮ ಗದ್ದೆಲಿ ಬಿದ್ದೊಳೊ. ಇದ್ ಬುದ್ದಿವಂತರ ಕಟ್ಟ್ ಕತೆ ಆಗಿಕ್ಕೊ ಸಾಕ್.

ಹೊಸ್ತ್ ದಿನ ಗದ್ದೆಂದ ಕದ್ರ್ ತಂದ್ ಅದರೊಟ್ಟಿಗೆ ಮಾಯಿನ ಸೊಪ್ಪು, ಹಲ್ಸಿನ ಸೊಪ್ಪು, ಅರಳಿ ಸೊಪ್ಪುಗಳ ಸೇರ್ಸಿ ಮನೆಲಿರುವ ಕನ್ನೆ ಗಂಬಕೆ ಮುಂದೆ ಕದರ್ ಕಟ್ಟೊಕು. ಮನೆ ಏಣಿ, ದೇವರ ಕೋಣೆಗೆ, ಬಾಗಿಲ್‌ಗೆ, ಕಿಡ್‌ಕೆಗೆ, ಬಾಮಿಗೆ, ಬಾಳೆಗೆ, ಚಾಳೆಗೆ, ಕಮ್ಮಿಗೆ, ಹಟ್ಟಿಗೆ ಮಕ್ಕ ಹೆಣ್ಮಕ್ಕ ಸೇರಿ ಕಟ್ಟ್‌ವೆ. ಕೆಲವು ಮನೆಗಳ್‌ಲಿ ಮನೆ ತುಂಬ್ಸಿದ ದಿನವೇ ಹೊಸ್ತ್ ಮಾಡ್‌ವ ಕ್ರಮ ಉಟ್ಟು. ಹೊಸ್ತ್ ಊಟಕ್ಕೆ ನೆರೆಕರೆ ಮನೆಗಳಿಗೆ ಹೋದುಂತೆಳ್ರೆ ಬಾರಿ ಕುಸಿಲಿ ಹೋಗಿ ಬಾತಿದ್ದೊ.

ಹೊಸಕ್ಕಿ ಮಡ್ಕೆ ಹೊಸ್ತಿನ ದಿನ ಮಾತ್ರ ಕಾಯಿ ಗಂಜಿ ಮಾಡಿಕೆ ಉಪಯೋಗ ಆತಿತ್ತ್. ಬೇರೆ ದಿನಗಳ್ಲಿ ಅದರ ಮುಟ್ಟಿಕಿಲ್ಲೆ. ನಾಕ್ ಐದ್ ಸೇರ್ ಅಕ್ಕಿ ಬೇಯುವಂತ ಮಡ್ಕೆನ

ಕುಂಬಾರನೊಟ್ಟಿಗೆ ಹೇಳಿ ಮಾಡ್ಸ್ತಿದ್ದೊ. ಮಡ್ಕೆನ ಕಂಟದ ಸುತ್ತ ನಕ್ಷತ್ರ, ಸೂರ್ಯ, ಚಂದ್ರರ ಚಿತ್ರ ಇರ್ವ ಮಡ್ಕೆ ಮಾಡ್ಸಿತಿದ್ದೊ. ಹೊಸ್ತ್‌ಗೆ ಕಾಯಿ ಗಂಜಿ ಮಾಡ್‌ವ ಮಡ್ಕೆ ಸುತ್ತ ಕಾಡ್‌ಲಿ ಬೆಳೆವ ಕೌಂಟೆ ಕಾಯಿ ಬೊಳ್ಳಿನ ಕಟ್ಟೊಕು. ಮಡ್ಕೆಗೆ ಗಂಧದ ಬೊಟ್ಟ್ ಹಾಕಿ ತಲೆ ಮ್ಯೆ ಮಿೊದ್ ಮೂಡಕ್ಕೆ ಕೈ ಮುಗ್ಗ್ ಹಿರಿಯ ಹೆಣ್ಮಕ ಹೊಸಕ್ಕಿಗೆ ನೀರ್ ಇಸ್ತಿದ್ದೊ.

ಅಂದ್ ಚಿಪೊಕ್ಲ್ ಚಿನ್ನಪ್ಪಣ್ಣನ ಮನೆಲಿ ಹೊಸ್ತ್ ಕಾರ್ಯಕ್ರಮ. ಸ್ವಂತ ಭೂಮಿ ಅವಂಗೆ ಇಲ್ಲೆ. ಊರ್‌ನ ಬುದ್ದಿವಂತ ಸೋಮಣ್ಣ ಗೌಡ್ರ ಐವತ್ತ್ ಸೇರ್ ಬಿತ್ತ್ ಹೋವ ಒಂದು ಬೊಳ್ಳಿ ಗದ್ದೆನ ಗೇಣಿಗೆ ಬೇಸಾಯ ಮಾಡ್ತಿತ್. ಅವನ ಹೆಣ್ಣ್ ರಾಮಕ್ಕ, ಪ್ರಾಯಕ್ಕೆ ಬಂದ ಗೂಡೆ ನೀಲ, ಗಂಡ್ ಹೈದ ಮೋನಪ್ಪ, ಸಣ್ಣ ಮಕ್ಕ ಬಾಲ ಮತ್ತೆ ಜಾಗಿ ಒಟ್ಟು ನಾಕ್ ಮಕ್ಕ ಎರ್ಡ್ ದೊಡ್ಡೊವು. ಗಂಡ ಹೆಣ್ಣ್ ಗದ್ದೆ ಬೇಸಾಯ ಮಾಡಿ ಮಕ್ಕಳ ಸಾಂಕ್‌ತಿದ್ದೊ. ದೊಡ್ಡ ಮಂಜ ಸಾಲೆಗೆ ಸೇರಿ ಮಾಸ್ಟ್ರ ಪೈಲ್ ಮಾಡ್ದೊಂತ ಮೂರ್ನೆ ಕ್ಲಾಸಿಲೇ ಸಾಲೆ ಬುಟ್ಟಿತ್. ಮತ್ತೆ ಸಾಲೆ ಕಡೆ ತಲೆ ಹಾಕಿತ್ಲೆ. ಸಣ್ಣ ಮಕ್ಕ ಹಬ್ಬಕ್ಕೊಮ್ಮೆ, ಹುಣ್ಣಿಮೆಗೊಮ್ಮೆ ಸಾಲೆಗೆ ಹೋದು ಬಾದು ಅಷ್ಟೆ. ಮಕ್ಕ ಮನೆಲಿ ಕೆಲ್ಸ ಮಾಡಿಕೆ ಒಳ್ಳೆದ್‌ಂತ ನಂಬುವ ದಿನ. ವಿದ್ಯೆ ಕಲ್ತ್ ಏನ್ ಇವು ಗವರ್ನರ್ ಆದವೆನೊಂತ ಕೇಳ್‌ವ ದಿನ. ಚಿಪೊಕ್ಲ್ ಚಿನ್ನಪ್ಪನಲ್ಲಿ ನಿಡ್ನಾಲ ತಿಂಗ ಎಂಟಕ್ಕೆ ಸೋಮಾರ ಹೊಸ್ತ್‌ಂತ ನಿಗಂಟ್ ಆವುಟು. ಒಂದಿನಕ್ಕೆ ಮುಂದೆ ಮನೆ ಮನೆ ಹೋಗಿ ಹೊಸ್ತಿಗೆ ಬರೊಕುಂತ ಚಿನ್ನಪ್ಪನೇ ಹೇಳಿಬಂದುಟು.

ಹೊಸ್ತ್‌ನ ಅಡಿಗೆ ಮಾಡ್ಕೆ ಚಿನ್ನಪ್ಪನ ಹೆಣ್ಣ್‌ನ ಅಕೇರಿ ತಂಗೆ ವಾರಿಜ ದಿನಕ್ಕೆ ಮುಂದೆ ಬಂದುಟು. ಹೆಣ್ಮಕ ಬೆಳಿಗ್ಗೆ ನಾಕ್ ಗಂಟೆಗೆ ಎದ್ದ್ ಗೈಪಿಗೆ ಕೊಯ್ಯೊದು, ಕಾಯಿಕಡೆದು ಸುರು ಮಾಡ್ಯಲೊ. ತಲೆ ಮ್ಯೆ ಮಿದ್ ಮೂಡಕ್ಕೆ ಕೈ ಮುಗ್ಗ್ ಎಂಟ್ ಗಂಟೆ ಆಕನ ಹೊಸಕ್ಕಿಗೆ ನೀರ್ ಇಸಿ ಆವುಟು. ಹೊಸ್ತ್ ಆಗದೊವು ಬಂದರೆ ಬೇರೆ ಕಾಯಿಗಂಜಿ ಬೇಯುತಾ ಉಟ್ಟು. ಹೊಸ್ತ್‌ನ ಊಟಕೆ ಹತ್ತ್ ಹನ್ನೆರ್ಡ್ ಬಗೆ ಗೈಪು ಮಾಡ್ತಿದ್ದೊ. ಗೈಪುಗೆ ಬೇಕಾದ ನಟ್ಟಿಕಾಯಿ ಮನೆಗಳ್‌ಲಿ ಬೆಳೆತಿದ್ದೊ. ನೀರ್‌ಸೊಂತೆ ಪಚ್ಚಡಿ, ಹೀರೆಕ್ಕಾ ಪಲ್ಯ, ಹರ್ವೆ ಮತ್ತೆ ಕೆಸದಂಡ್ ಸಾರ್ ಗೈಪು, ಕಡ್ಲೆ–ಬೀಜದ ಬೆಂಡ್ ಗಸಿ, ಅಲಸಂಡೆ ಪಲ್ಯ, ಕೆಂಬುಡೆ ಕಾಯಿ ಗೈಪು, ಮಾಯಿನ ಮಿಡಿ ಉಪ್ಪನಕಾಯಿ, ಉಪ್ಪುಸುಂಟೆಂತ ತರತರದ ಅಡಿಗೆ ಮಾಡ್ವೆ, ಅಡಿಗೆ ಕೋಣೆಲಿ ಗುರುಕಾರ್ಣೊರಿಗೆ ಅಗಲ್ ಹಾಕಿ ಕೈ ಮುಗ್ದ್ ಕುಲದೇವರಾದ ತಿರ್‌ಪತಿ ವೆಂಕಟ್ರಮಣ ದೇವ್ರ ಮುಡ್‌ಪಿಗೆ ದುಡ್ಡು ಹಾಕಿ ದೇವ್ರುಗೆ ಅಡ್ಡ ಬಿದ್ದವೆ. ಎಲ್ಲೊವೂ ಕೈ ಮುಗ್ದ್ ಆದಮೇಲೆ ಮನೆ ಯಜ್‌ಮಾನ ಸರ್ವರೂ ಊಟಕ್ಕೆ ಎದ್ರೊಕುಂತ ನೀರ್‌ಚೊಂಬು ಎತ್ತಿ ಹಿಡ್ದ್ ಕೇಳಿಕಂಡವೆ. ಜಗಲ್‌ಲಿ ಹಾಸಿದ ಮೊಂದ್ರಲಿ ಎಲ್ಲವು ಊಟಕ್ಕೆ ಕುದ್ದವೆ. ಬಾಳಲೆಗೆ ನೀರ್ ಹಾಕಿ ಉಜ್ಜಿದ ಮೇಲೆ ಸುರುಗೆ ಉಪ್ಪುಸುಂಟಿ ಇಕ್ಕಕೆ ಸುರುಮಾಡ್ವೆ, ಹೊಸಕ್ಕಿ ಕಾಯಿಗಂಜಿ ದೊಡ್ಡ ಸೆಡೆಲಿ ಎರ್‌ಡೆರ್ಡ್ ಇಕ್‌ವೆ. ಉಪ್ಪುಸುಂಟಿ, ಪಲ್ಯ, ಗಸಿ, ಸಾಂಬಾರ್, ಹೊರ್ದ್ ಗೈಪು ಆದ ಮೇಲೆ ತುಪ್ಪ ಇಕ್ಕುವೆ. ಎಲ್ಲವುಕೂ ಇಕ್ಕಿ ಎತ್ತಿದ ಕೂಡ್ಲೆ ಸರ್ವರೂ ಊಟ ಮಾಡಿಂತ ಯಜಮಾನ ಹೇಳ್ದಮೇಲೆ ದೇವರಪ್ಪಣೆಂತ ಹೇಳಿ ಊಟಕ್ಕೆ ಸುರು ಮಾಡ್ವೆ

ಒಮ್ಮೊಮ್ಮ ಕಾಯಿಗಂಜಿ ಉಂಬೊದರ್ಲ್ಲಿ ಪಂತ ಸುರ್ ಆದೆ. ಅದ್ ಹೆಚ್ಚಾಗಿ ನಡೆದು ಬಾವನಣ್ಣಂಗಳೊಳಗೆ. ಯಾರ್ ಹೆಚ್ಚ್ ಕಾಯಿ ಗಂಜಿ ಉಂಡತೋ ಆಂವ ಗೆದ್ದತ್‌ಂತ ಲೆಕ್ಕ. ಚಿಪೊಕ್ಲ್ ಚಿನ್ನಪ್ಪನಲ್ಲಿ ಅಂತ ಒಂದು ಜೊತೆ ಬಾವನಣ್ಣ ಎದ್‌ರ್ ಬದರ್ ಊಟಕ್ಕೆ ಕುದ್ದಿದ್ದೊ. ಒಟ್ಟಿಗೆ ಊಟ ಮಾಡ್ತಿದ್ದ ಕೆಲವು ಅವುಕೆ ಗಾಳಿ ಹಾಕಿ ಪಂತಕೆ ತಯಾರ್ ಮಾಡ್ದೊ. ಎಲ್ಲವರಂಗೆ ನಾಕ್ ಸರ್ತಿ ಕಾಯಿಗಂಜಿ ಹಂತಿಲಿ ಬಾತ್. ಇಬ್ರೊರು ಸಮ ಸಮ ಉಂಡೊ. ಇಪ್ಪತ್ತನಾಕ್ ವರ್ಸದ ಹೊನ್ನಪ್ಪ ಮತ್ತೊಬ್ಬ ಅವನ ಬಾವ ಮರಿಯಪ್ಪ. ಮರಿಯಪ್ಪಂಗೆ ಇಪ್ಪತ್ತಾರ್ ದಾಟಿಕಿಲ್ಲೆ. ನಿಧಾನಕ್ಕೆ ಊಟ ಸುರುಮಾಡ್ದೊವು ಆಗಳೇ ಹತ್ತ್ ಹತ್ತ್ ಸೆಡೆ ಕಾಯಿ ಗಂಜಿ ಮುಗ್ಸಿಯೊಳೊ. ಇಕ್ಕವ ನಾರಾಯಣ ದೊಡ್ಡಕಾವಂಗಲಿ ಕಾಯಿಗಂಜಿ ತಂದ್ ಅವರ ಹಕ್ಕಲೆ ಕುದ್ದ್ ಕಾಲಿ ಆದಾಂಗೆ ಗೋಂಚಿ ಗೋಂಚಿ ಇಕ್ಕ್‌ತಿತ್ತ್. ಊಟಕ್ಕೆ ಕುದ್ದ್ ಹಕ್ಕಲೆ ಹಕ್ಕಲೆ ಮುಕ್ಕಾಲ್‌ಗಂಟೆ ಕಳ್ದುಟು. ಬೇರೆವೆಲ್ಲ ಕೈ ತೊಳ್ದ್ ಎಲಾಡಿಕೆ ತಿಂದ್ ಪಟ್ಟಾಂಗ ಹೊಡೆತಾವ್ರೊಳೊ. ಆದ್ರೂ ಸೋಲು ಗೆಲ್ ಆತಿಲ್ಲೆ. ಕಾಯಿಗಂಜಿ ಉಂಬೊದು ನೀರ್ ಕುಡ್ಯೋದು ಮಾತ್ರ. ಅವರ ಹೊಟ್ಟೆ ಈಗ ಒಡ್ದದೆ ಮತ್ತೆ ಒಡ್ದ್‌ದೆಂತ ಕಂಡದೆ. ಸಣ್ಣ ಸಣ್ಣ ಮಕ್ಕ ಇವರ ಸುತ್ತ ಸೇರಿ ಕಣ್ ಕಣ್ ಬುಡ್ತಿದ್ದೊ. ಅಕೇರಿಗೆ ಲೆಕ್ಕ ನೋಡ್ಕನ ಹೊನ್ನಪ್ಪ ಅರ್ದ ಸೆಡೆ ಹೆಚ್ಚಿಗೆ ಉಂಡ್ ಪಂತಲಿ ಗೆದ್ದತ್. ಗೆದ್ದರೂ ಕುದ್ದಲ್ಲಿಂದ ಎದ್ರಿಕೆ ಆತಿಲ್ಲೆ. ಇಕ್ಕುವ ನಾರಾಯಣ ಕೈ ಹಿಡ್ದ್ ಎದ್ರ್‌ಸಿತ್.

ಹೊನ್ನಪ್ಪನ ಕಷ್ಟ ಅಲ್ಲಿಂದ ಸುರ್ ಆತ್. ಹೊಸ್ತ್‌ಗೆ ಬಂದವು ಹೆಚ್ಚಿನವು ಹೋಗಿ ಆವುಟು. ಹೊನ್ನಪ್ಪಂಗೆ ಕುದ್ರಿಕೆ ಅಲ್ಲ ನಿಲ್ಲಿಕೆ ಅಲ್ಲದಂಗೆ ಆತ್. ಬಾರಿ ಗರ್ವದ ಹೈದ ಅಂವ. ಅಂತೂ ಬಾರಿ ಕಷ್ಟಲಿ ಒಂದು ಪರ್ಲಾಂಗ್ ದೂರಲಿರ್ವ ಅವನ ಮನೆಗೆ ಹೋಗಿ ಮುಟ್ಟಿತ್. ಮನೆ ಮುಟ್ಟಿದವಂಗೆ ಸಂಕಟ ಮರ್ಕ ಸುರ್ ಆತ್. ಅತ್ತ ಇತ್ತ ತಿರ್‌ಗಾಡ್ರೂ ಹೊಟ್ಟೆ ಬೇನೆ ಕಮ್ಮಿ ಆತ್ಲೆ. ಹೊಟ್ಟೆ ಉಬ್ಬಸ್ರಿ ಕಂಡ್ ಬಾತಾ ಉಟ್ಟು. ಒಮ್ಮೊಮ್ಮ ಹುಳಿ ತೇಗ್ ಬಾಕೆ ಸುರು ಆದೆ. ಕಾಯಿ ಗಂಜಿ ತಿಂದದ್ ಹೊಟ್ಟೆಲಿ ಉಟ್ಟು. ಈಗ ಇದರ್‌ಂದ ಬಚಾವು ಆವುದು ಹೇಂಗೆಂತ ಪೇಚಾಡ್ತ ಉಟ್ಟು. ಹೊತ್ತ್ ಹೋದಾಂಗೆ ಇವಂಗೆ ಉಸ್‌ರ್ ತೆಗೆಕೆ ಬೊತ್ತದಂಗೆ ಆಕೆ ಸುರು ಆತ್. ಈ ಸರ್ತಿ ಮೇಲೆ ಬೀಳ್ದು ಕಷ್ಟಂತ ಅವಂಗೆ ಆತ್. ರಾತ್ರೆ ಹನ್ನೆರ್ಡ್ ಗಂಟೆ ಹೊಡೆಕನ ಹೊನ್ನಪ್ಪಂಗೆ ಜಾಡ್ಸೆ ಸುರು ಆತ್. ಎಂಟ್ ಹತ್ತ್ ಸರ್ತಿ ಹೊರಗೆ ಹೋಗಿ ಬಾತ್. ಅಕೇರಿಗೆ ಎದ್ದ್ ನಿಲ್ಲ್‌ಕೆ ಸಕ್ತಿ ಇಲ್ಲದಂಗಾತ್. ಅಷ್ಟೊತ್ತಿಗೆ ಇವನ ಅವಸ್ಥೆ ಮನೆವುಕೆ ಗೊತ್ತಾತ್. ಹೊನ್ನಪ್ಪನ ಅಜ್ಜಿ ಕಟ್ರ್ ಆವುಟುಂತ ಓಡ್‌ಕಸಾಯ ಮಾಡಿ ಕುಡ್ಸಿತ್. ಆದ್ರೂ ಹೊನ್ನಪ್ಪ ಬೆಳಿಗ್ಗೆ ಮೊಂದ್ರಿಂದ ಎದ್ರಿಕಾಗದೆ ನರ್ಕ್‌ತಾ ಇತ್ತ್. ಮತ್ತೆ ಒತ್ತಾಯ ಮಾಡಿ ಇಚಾರ್ಲ್‌ಕನ ಹೊಸ್ತ್ ಊಟದ ಗುಟ್ಟು ಹೊರಗೆ ಬಾತ್. ಎಲ್ಲವರ ಕೈಲಿ ಬೈಸಿಕಂಡ್ ಹೊನ್ನಪ್ಪಂಗೆ ಬುದ್ದಿಬಾತ್. ಇನ್ನ್ ಹೊಸ್ತಿನ ಮನೆಗೆ ಊಟಕ್ಕೆ ಹೋಕ್ಕೊ ಬೇಡನೊಂತ ಆಲೋಚನೆಲಿ ಬಿದ್ದುಟು.

ಕಬ್ಬಿನಾಲೆ ಮತ್ತೆ ಜೋನಿಬೆಲ್ಲ

ನಮ್ಮೂರ ವಿಸಯ ಹೇಳಿ ಮುಂದೆ ಹೋವುದ್ ಒಳ್ಳೆದ್. ಕನ್ನಡ ಜಿಲ್ಲೆಲಿ ಬಾರಿ ದೊಡ್ಡದಾಗಿದ್ದ ಪುತ್ತೂರು ತಾಲೂಕಿಗೆ ಸೇರಿದ್ದ ನಮ್ಮ ಊರು ತಾಲೂಕು ಕಚೇರಿಗೆ ಅರ್ವತ್ ಮೈಲ್ ನಡ್ದ್ ಹೋವದಿನ. ಆಮೇಲೆ ಪುತ್ತೂರು ತಾಲೋಕಿನ ಒಡ್ಡ್ ಬೆಳ್ತಂಗಡಿ ಮತ್ತೆ ಸುಳ್ಯಂತ ಬೇರೆ ಹೊಸ ತಾಲೂಕು ಆತ್. ಸುಮಾರ್ ಸಾವಿರದ ಒಂಬೈನೂರ ನಲ್ವತ್ತರ ಸಮಯಲಿ ಬಾರಿ ಹೆಸ್ರ್‌ವಾಸಿ ಆಗಿದ್ದ ಕೋಟ ಶಿವರಾಮ ಕಾರಂತರ್ ನಮ್ಮೂರಿಗೆ ಬಂದ್ ಕೆಲವು ದಿನ ಇಲ್ಲೆ ನಿತ್ತ್ ಬೆಟ್ಟದ ಜೀವಂತೇಳುವ ಒಂದು ಕಾದಂಬರಿ ಬರ್ದೊಳೊ. ಅದ್ ಮತ್ತೆ ಸಿನೆಮಾ ಕೂಡ ಆವುಟುಂತ ಕಂಡದೆ. ಊರುನ ಪರಿಸ್ಥಿತಿ ತುಂಬಾ ಕಷ್ಟ. ಮಲೆನಾಡ್ ಆದ ಕಾರಣ ಕಾಯಿಲೆ ಜಾಸ್ತಿ. ಆಗ ಈ ಪ್ರದೇಶದ ಹೆಚ್ಚಿನವುಕೆ ಮಲೇರಿಯಾ ಜ್ವರದ ಕಾಯಿಲೆ. ಹೊಟ್ಟೆಲಿ ಗೆಡ್ಡೆ ಗಟ್ಟಿಕಂಡ್ ಇದ್ದರೆ ಮಲೇರಿಯಾ ಉಟ್ಟುಂತ ಸುಲಭಲಿ ಕಂಡ್ ಹಿಡೆತಿದ್ದೊ. ಕೊಯಿನ್ ಮಾತ್ರೆಂತೇಳುವ ಒಂದೇ ಒಂದು ಮೊದ್ದ್ ಆಗನ ಕಾಲಲಿ ಕೊಡ್‌ತಿದ್ದೊ. ಅದರ ರುಚಿ ಮಾತ್ರ ಕಾಯರ ಕಾಯಿಂದಲೂ ಹೆಚ್ಚಿ ಕಂಯಿ. ಜನಸಂಕೆಯೂ ಬಾರಿ ಕಮ್ಮಿ. ಸುತ್ತ ಮುತ್ತ ಬೆದ್ರ್ ಕಾಡ್. ಊರಿಂದ ಹೊರಗೆ ಹೋಕೆ ಗಾಡಿ ದಾರಿ ಮಾತ್ರ ಇತ್ತ್. ಸುಬ್ರಹ್ಮಣ್ಯಂದ ಕೊಡಗ್ ಜಿಲ್ಲೆನ ಮಡಿಕೇರಿಗೆ ಹೋವ ಕಾಲ್‌ದಾರಿ ನಮ್ಮ ಊರಿನ ಮದ್ಯಲೇ ಹೋದೆ. ಎಲ್ಲವೂ ಈಗ ನಮ್ಮ ಊರಿನ ಕಾಡ್‌ಮೊಗ್ರಂತ ಕರ್ದ್‌ವೆ.

ಊರಿನ ಎಲ್ಲವುಕೂ ಗದ್ದೆ ಬೇಸಾಯ ಇತ್ತ್. ಬೇಸಾಯ ಕಳ್ದ ಮೇಲೇ ಕೆಲ್ಸ ಕಮ್ಮಿ. ಕಾಡ್ ಪ್ರಾಣಿ ಬೇಟೆ, ಕೋಳಿಕಟ್ಟ, ಮೀನ್ ಒಡೆದು ಪುರ್‌ಸರ ಕಟ್ಟಿ ಮನೆ ಮನೆ ಕುಣಿತಾ ಹೋದು ನಡೆತಿತ್ತ್.

ಜನಗಳಿಗೆ ಬೇಕಾದ ದವಸ ದಾನ್ಯ ಎಲ್ಲವೂ ಬೆಳ್ಸ್‌ತಿದ್ದೊ. ಈಗನಾಂಗೆ ಯಾರೂ ದುಡ್ಡ್ ಕೊಟ್ಟು ಅಂಗಡಿಂದ ಅಕ್ಕಿ, ಬತ್ತ ತಾವು ಇತ್ಲೆ. ಊಟಕ್ಕೆ ಗಂಧಸಾಲೆ, ರಾಜಕಯ್ಮೆ, ಮಸ್ಕತ್ತಿ, ಅಲ್ಲದೆ ಬೇರೆ ಜಾತಿನ ರುಚಿ ರುಚಿ ಬತ್ತದ ಬೇಸಾಯ ನಡೆತಿತ್ತ್. ಮನೆ ಕರ್ಚಿಗೆ ಬೇಕಾದ ನಟ್ಟಿಕಾಯಿ, ಎಣ್ಣೆಗೆ ಬೇಕಾದ ಎಳ್ಳ್, ಅಲಸಂಡೆ, ಹೆಸ್ರ್, ಕುಡು ಎಲ್ಲಾ ಗದ್ದೆಲಿ ಬೆಳೆತಿತ್ತ್. ಇಷ್ಟಲ್ಲದೆ ಕರ್ಚಿಗೆ ಬೇಕಾದ ಬೆಲ್ಲಕೆ ಎಲ್ಲವು ಕಬ್ಬು ಬೆಳ್ಸ್‌ತಿದ್ದೊ. ಚಿಮಣಿ ಎಣ್ಣೆ ಮತ್ತೆ ಉಪ್ಪು ಮಾತ್ರ ಅಂಗಡಿಂದ ದುಡ್ಡ್ ಕೊಟ್ಟು ತಾತಿದ್ದೊ. ಬೇರೆ ಸೊತ್ತುಗ, ಬಟ್ಟೆಬರೆ ವರ್ಸಕ್ಕೊಮ್ಮೆ ಸುಬ್ರಹ್ಮಣ್ಯ ಜಾತ್ರೆಂದ ತಪ್ಪಿರೆ ಕಂದ್ರಪಾಡಿ ಜಾತ್ರೆಂದ ತಕಂಡ್ ಬಾತಿದ್ದೊ. ಕಾಸರ್‌ಗೋಡಿಂದ ಕೈ ಮಗ್ಗದ ಪಾಲ್ಘಾಟ್ ಸೀರೆಗಳ ಮನೆ ಮನೆ ತಂದ್ ಮಾರೊವು ಇದ್ದೊ. ಮಣ್ಣಿನ ಮಡ್ಕೆ ಮನೆ ಬಾಗಿಲಿಗೆ ತಲೆ ಹೊರೆಲಿ ಹೊತ್ತ್ ತಂದ್ ಕುಂಬಾರಂಗ ಮಾರಿ ಹೋತಿದ್ದೊ. ಆಗ ದುಡ್ಡಿನ ಬದ್ಲ್ ಬತ್ತ ಕೊಟ್ಟರೆ ಅವುಕೆ ಬಾರಿ ಸಂತೋಸ್ ಆತಿತ್ತ್. ಪುತ್ತೂರ್ ಪೇಟೆ ನೊಡ್ದೊವು ಬಾರಿ ಕಮ್ಮಿ ಜನ. ಕೋರ್ಟ್ ಕೇಸ್ ಇದ್ದರೆ ಮಾತ್ರ ಪುತ್ತೂರಿಗೆ ಹೋಕಾತ್. ಹೆಚ್ಚಿನವು ನಡ್ದ್‌ದೇ ಹೋತಿದ್ದೊ. ತಪ್ಪಿರೆ ಎತ್ತಿನ ಗಾಡಿ ಮಾತ್ರ. ಸುಳ್ಯಂದ ಇತ್ತ ಅರ್ಕಿಲ್ ಮಾತ್ರ ಮರ ಸಾಗ್‌ಸುವ ಲೋರಿಗ ಮತ್ತೆ ಮಂಗ್ಳೂರಿಂದ ವಾರಕ್ಕೊಮ್ಮೆ ಸಾಮಾನ್ ತಾತಿದ್ದ ಶಂಭಟ್ರ ಗೂಡ್ಸ್ ಲೋರಿ ಮಾತ್ರ.

ವಿದ್ಯಾಭ್ಯಾಸ ಕಮ್ಮಿ. ಹೆಚ್ಚಿನವು ಊರ್‍ಲಿ ಬೇಸಾಯ ಮಾಡಿ ಜೀವನ ನಡ್ಸ್‌ತಿದ್ದೊ. ಅಜ್ಜ, ಅಜ್ಜಿ, ಅಪ್ಪ, ಮಕ್ಕ, ಅಣ್ಣ ತಮ್ಮಂದರ್ ಸೇರಿ ಏನಿಲ್ಲೆಂತಾದ್ರೂ ಹತ್ತ್ ಹನ್ನೆರಡ್ ಜನ ಮನೆಲಿ ಒಟ್ಟಿಗೆ ಇರ್‌ತಿದ್ದೊ. ಎಲ್ಲಾ ಕೆಲ್ಸಗ ನೆರೆಕರೆವು ಕೂಡ್ಯಾಡಿ ಮಾಡ್‌ತಿದ್ದೊ. ಗದ್ದೆ ಗೋರಿ, ಪುಂಡಿಬಿತ್ತ್, ಗೊಬ್ಬರ ಹೊರ್‌ದು, ಕಬ್ಬಿನಾಲೆ ಎಲ್ಲಾ ಈಗನ ಸ್ವಸಾಯ ಗುಂಪುನ ಕೆಲ್ಸಂದ ಹತ್ತ್ ಪಾಲ್ ಲ್ಯಾಕ್‌ಲಿ ಆತಿತ್ತ್. ಬೆಲ್ಲದ ಉಪಯೋಗ ಹೆಚ್ಚಿಗೆ ಇದ್ದ ಕಾರಣ ಕಾಫಿಗೆ, ಪ್ಯಾಸಕ್ಕೆ, ಪಾನಕಕ್ಕೆ ಬೇರೆ ಬೇರೆ ತಿಂಡಿಗಳ ಮಾಡ್‌ಕನ ಕಬ್ಬಿನ ಬೆಲ್ಲವೆ ಬೇಕ್. ಬಿಸಿಲಿಗೆ ಮನೆಗೆ ಬಂದೊವುಕೆ ಬೆಲ್ಲದ ಪಾನಕ ಮಾಡಿ ಕುಡ್ಯಕ್ಕೆ ಕೊಡ್‌ತಿದ್ದೊ. ಅಳುವ ಸಣ್ಣ ಮಕ್ಕಳಿಗೆ ತಿಂಬಕೆ ಜೋನಿಬೆಲ್ಲವೇ ಬೇಕು. ಈಗನಂಗೆ ಅಂಗಡಿ ತಿಂಡಿಗ ಆ ಕಾಲಲಿ ಇತ್ಲೆ. ಸುಕ್ರುಂಡೆ, ಜಿಲ್ಬಿ, ಚಕ್ಕುಲಿ ಮನೆಲೇ ಮಾಡಿ ತಿಂಬೊವು ಇದ್ದೊ.

ಕಬ್ಬಿನ ಬೆಲ್ಲ ತಯಾರ್ ಮಾಡ್ದು ಸುಲಭ. ಆದರೆ ಕೃಷಿ ಮಾಡ್ದು ಬಾರಿ ಕಷ್ಟದ ಕೆಲ್ಸ. ನೀರ್ ಒತ್ತಾಯ ಇರ್‌ವ ಮಜಲ್‌ಗದ್ದೆಲಿ ಕಬ್ಬು ಬೆಳ್ಸ್‌ತಿದ್ದೊ. ಒಂದು ಮೊಳ ಗುಂಡಿ ಇರುವಂಗೆ ಉದ್ದಕೆ ಸಾಲ್ ಮಾಡಿ ಕಬ್ಬಿನ ಕುಳೆನ ನಡೊಕು. ನಟ್ಟ್ ಒಮ್ಮೆ ನೀರ್ ಬುಟ್ಟರೆ ಮತ್ತೆ ಸುಳಿ ಮೇಲೆ ಬಾಕನ ಇನ್ನೊಮ್ಮೆ ನೀರ್ ಬುಟ್ಟರೆ ಬೆಳವಣಿಗೆ ಬೇಗ ಆದೆ. ಒಂದು ತಿಂಗ ಕಳ್ದ್ ಗೊಬ್ಬರ ಕೊಟ್ಟು ಮಣ್ಣ್ ಹಾಕಿರೆ ಆರ್ ತಿಂಗಳ್ಲಿ ಕಬ್ಬು ಹೂ ಬೋವ ಸಮಯಲಿ ಕಡ್ದ್ ಆಲೆ ಮಾಡ್ರೆ ಒಳ್ಳೆ ಬೆಲ್ಲ ಸಿಕ್ಕ್‌ತಿತ್ತ್. ಬಯಲ್‌ಲಿನ ಹತ್ತ್ ಹದಿನೈದ್ ಮನೆಯವರ ಕಬ್ಬು ಆಲೆ ಮಾಡಿ ಬೆಲ್ಲ ಮನೆಗೆ ಎತ್ತಕಾರೆ ಕಮ್ಮಿಂತೇಳ್ರೂ ಒಂದು ತಿಂಗ ಬೇಕಾತಿತ್ತ್. ಕಬ್ಬಿಗೆ ಉಪದ್ರ ಕೊಡ್‌ವ ಕುದ್ಕಂಗ, ಕಾಡ್ ಹಂದಿಗಳಂದ ಕಬ್ಬು ಒಳ್ಸಿಕಂಕೆ

ಬಾರಿ ಕಷ್ಟ ಆತಿತ್.

ಕಬ್ಬು ಕಡೆವ ದಿನ ಗಣ್ಮಕ, ಹೆಣ್ಮಕ ಎಲ್ಲವೂ ಕೆಲ್ಸ ಮಾಡ್‌ವೆ. ಗಂಡ್‌ಗ ಕಬ್ಬುನ ಬುಡಂದ ಕಡ್ದ್ ಕೊಡಿ ತುಂಡು ಮಾಡಿ ಹಾಕಿದರ ಹೆಣ್ಮಕ್ಕ ಸೋಗೆ ಬುಡ್ಸಿ ಹೊರೆ ಕಟ್ಟಿ ಆಲೆ ಮಾಡ್‌ವ ಜಾಗಕೆ ಹೊತ್ತ್ ಹಾಕ್‌ತಿದ್ದೊ. ಕಬ್ಬಿನಾಲೆ ಮಾಡ್‌ವ ಜಾಗೆ ಹೆಚ್ಚಾಗಿ ಹಳ್ಳದ ಕರೆಲಿ ಇರ್ತಿತ್. ಕಬ್ಬುನ ಗಾಣಕ್ಕೆ ಕೊಡ್‌ಕೆ ಮುಂದೆ ಅದರ ಗಂಟ್‌ನ ಕೀಸಿ ಸರಿ ಮಾಡೊಕು. ಗಾಣದ ಹಕ್ಕಲೆ ರಾಶಿ ಹಾಕಿ ಗಾಣಕ್ಕೆ ಕೊಡೊಕು. ಒಂದೆಡ್ರಂದ ಹೆಚ್ಚ್ ಕಬ್ಬು ಗಾಣಕ್ಕೆ ಕೊಟ್ಟರೆ ತಿರ್ಗಿಸಿಕೆ ಬಂಗ ಆದೆ. ಗಾಣ ದೂಡ್‌ಕೆ ಜೊತ್ತದ ಪ್ರಾಯದೊವು ಕಬ್ಬು ಕೊಡ್‌ಕೆ ಕುದ್ದವೆ. ಕತ್ತಲೆ ಆಕನ ದೀಪ ಹೊತ್ಸಿ ಗಾಣದ ಹಕ್ಕಲೆ ಇಸೊಕು. ಒಮ್ಮೆ ಜೊಮ್ಮಕ್ಕ ಅಜ್ಜಿ ರಾತ್ರೆ ಹನ್ನೊಂದು ಗಂಟೆ ಮುಟ್ಟ ಕಬ್ಬು ಕೊಡ್ತಾ ಇದ್ದೊ. ಕುದ್ದ್ ಕುದ್ದ್ ಆಗಾಗ ಕಣ್ ತೂಗಿಕಂಡ್ ಬಾತಿತ್. ಒಮ್ಮೆ ಅರೆ ನಿದ್ದೆ ಮೊತ್ತಿಲಿ ಗೊತ್ತಾಗದೆ ಕಬ್ಬಿನೊಟ್ಟಿಗೆ ಅಜ್ಜಿನ ಕೈ ಗಾಣಕ್ಕೆ ಸಿಕ್ಕಿ ಹೋತ್. ಗಾಣ ದೂಡ್‌ವರ ಶಬ್ದಲಿ ಅಜ್ಜಿನ ಬೊಬ್ಬೆ ಗೊತ್ತಾತ್ಲೆ. ಜೋರ್ ಆರ್ಬಟೆ ಕೇಳ್ಕನ ಅಪಾಯದ ಅಂದಾಜಿ ಮಾಡಿ ಮೂರ್‌ನಾಕ್ ಜನ ಸೇರಿ ಬೀಸ್‌ಮರ ಯಳ್ದ್-ಹಿಡ್ದ್ ನಿಲ್ಸಿದೊ. ಅಷ್ಟೊತ್ತಿಗೆ ಅಜ್ಜಿನ ಕಿಣಿ ಬೆರಳ್ ಬುಟ್ಟು ನಾಕ್ ಬೆರ್ಲ್ ಪೊಡಿ ಪೊಡಿ ಆಗಿ ನೆತ್ತರ್ ಅರ್ದದೆ. ಎರಡ್ ಜನ ಕೂಡಿ ಅಜ್ಜಿನ ಎದ್ರಿಸಿ ಕರೆಲಿ ಕುದ್ರಿಸಿದೊ. ಕಾಡ್‌ಸೊಪ್ಪುನ ರಸದ ಮೊದ್ದ್ ಕಟ್ಟಿದೊ. ಅಂತೂ ಅಜ್ಜಿಗೆ ಗಡಿ ಗುಣಆಕೆ ಆರ್‌ತಿಂಗ ಹಿಡ್ತ್. ಆದ್ರೂ ನಡುನ ಎರಡ್ ಬೆರಳ್‌ಗ ಮುರುಂಟಿ ಹೋತ್. ಆ ಮೇಲೆ ರಾತ್ರೆ ಹೊತ್ತಿಲಿ ಕಬ್ಬು ಕೊಡ್‌ಕೆ ಹನಿಯ ಉಸಾರ್‌ನವರ ಕುದ್ರ್‌ಸ್‌ತಿದ್ದೊ.

ಕಬ್ಬಿನಆಲೆ ಮಾಡ್‌ವಲ್ಲಿ ಯಾರೂ ಹೊರಗೆನವು ಬಂದರೆ ಕಾಯಿಮೆಣ್ಸ್, ಸುಂಠಿ ಸೇರ್ಸಿದ ಕಬ್ಬಿನ ನೀರ್ ಕುಡೆಕೆ ಕೊಡ್ತಿದ್ದೊ. ಇಡೀ ರಾತ್ರೆ ಗಾಣ ಮಾಡಿ ಬೆಳಿಗ್ಗೆ ಆಕನ ಬೆಲ್ಲ ಮಾಡ್‌ಕೆ ದೊಡ್ಡ ತಾಮ್ರದ ಕಡಾಯಲಿ ಕಬ್ಬಿನ ನೀರ್ ಹಾಕಿ ಮೂರ್ ಅಡಿ ಎತ್ತರದ ದೊಡ್ಡ ಒಲೆ ಮೇಲೆ ಇಸೊಕು. ದೊಡ್ಡ ದೊಡ್ಡ ಕುಂಟೆ ಹಾಕಿ ಕಿಚ್ಚಿ ಹೊತ್ತಿಸಿ ಮೂರ್ ನಾಕ್ ಗಂಟೆ ಕಾಸಿದ ಮೇಲೆ ಬೆಲ್ಲ ತಯಾರಾದೆ. ಕಡಾಯಲಿ ಕಬ್ಬಿನ ನೀರ್ ಕೊದೆಕೆ ಸುರು ಆಕನ ಒಬ್ಬ ದಾಣೆಲಿ ಮೊಗ್ಚ್‌ತ್ತಾ ಇರೊಕು. ಹನಿಯ ಹೆಚ್ಚಿಕಡ್ಮೆ ಆದರೆ ಅಡಿ ಹಿಡ್ದ್ ಒಮ್ಮೆನ ಇಡಿ ಪಾಕ ಹಾಳಾದೆ. ಕಬ್ಬಿನ ನೀರ್ ಗಟ್ಟಿ ಆಕಂಡ್ ಬಾಕನ ಅದ್‌ಕೆ ರವೆಂತ ಕರ್ದ್‌ವೆ. ಆಗನ ಕಾಲಲಿ ಬೆಲ್ಲದ ರವೆ ಕುಡೆದರ್ಲಿ ಹುಡುಗರ್ ಪಂತ ಕಟ್ಟುತ್ತಿದ್ದೊ. ಆಚೆ ಬೈಲಿನ ಮುಡೆಂಕ್‌ಲಂತೇಳವ ಕುದ್ದಲ್ಲಿಂದ ಎದ್ರಿಕೆ ಮುಂದೆಬಂದು ಕಾವಂಗ ರವೆ ಕುಡೆತಿತ್. ಆವಂಗೆ ಅಷ್ಟ್ ಸಾಮರ್ಥ್ಯ ಇತ್ತ್. ಸುಮಾರ್‌ನವು ಒಂದ್ ಗ್ಲಾಸ್ ರವೆ ಕುಡ್ದರೆ ತಲೆ ತಿರ್ಗಿ ಬೀಳ್‌ತಿದ್ದೊ. ಬೆಲ್ಲ ಪಾಕಕೆ ಬಾತ್‌ಂತ ಅಂದಾಜಿ ಆದ ಕೂಡ್ಲೆ ಒಂದ್ ಹಾಳೆಕಿಳ್ಳಿಗೆ ನೀರ್ ಹೊಯ್ದ್ ಅದ್ಕ್ಕೆ ಬೆಲ್ಲದ ರವೆನ ಅರ್ದ ಚಮಚದಷ್ಟ್ ಹಾಕಿ ಬೆಲ್ಲದ ಪಾಕ ಅಂದಾಜಿ ಮಾಡ್ತಿದ್ದೊ. ರವೆ, ನೀರ್‌ಲಿ ಗಟ್ಟಿ ಆದರೆ ಹದ ಬಂದುಂಟುಂತ ಲೆಕ್ಕ. ಬೆಲ್ಲದ ಹದ ನೋಡ್ವರ್ಲಿ ಕಾಗಡೆ ಮನೆ ಕುಕ್ಕಣಜ್ಜ ಹೆಸ್ರ್ ಹೋದವು. ಅವು ಪಾಕ ನೋಡ್ರೆ ಬೇರೆವು

ತಿರ್ಗಿನೋಡ್ದು ಬೇಡ.

ಕಡಾಯಂದ ಬಿಸಿ ಬಿಸಿ ಬೆಲ್ಲನ ಉದ್ದದ ಮರದ ಮರ್ಗಿಲಿಗೆ ಹಾಕಿ ಓಂಬೊತು ಮುಟ್ಟ ಗಟ್ಟಿ ಆಕೆ ಬುಡೊಕು. ಕಡಾಯದ ನಾಕ್ ಕೈಗಳಿಗೆ ಬಡಿಗೆ ಹಾಕಿ ಎತ್ತಿ ನೆಲಲಿ ಇಸಿದ ಮೇಲೆ ಮರ್ಗಿಲಿಗೆ ಮೊಗ್ಚುದು ಬಾರಿ ಜಾಗ್ರತೆ ಆಕು. ಮೂರು ವರ್ಸಕೆ ಓಂದೆ ಒಮ್ಮೆ ಬಿಸಿಬೆಲ್ಲ ಮರ್ಗಿಲಿಗೆ ಹಾಕ್ಕನ ಒಬ್ಬನ ಕಾಲ್‌ಗೆ ಬಿದ್ದ್ ಮೊಣ್ಕಾಲ್‌ಂದ ಕಾಗಡೆ ಚೋಲಿ ಹೋಗಿತ್ತ್. ಸುಟ್ಟ ಹೋದ ಕಾಲ್‌ಲಿ ಗುರ್ತ್ ಈಗಳೂ ಕಂಡದೆ.

ಅಂದ್‌ನ ದಿನ ಮಳೆ ಬಾವ ಸಮಯನೇ ಅಲ್ಲ. ಮರ್ಗಿಲ್‌ಗೆ ಬೆಲ್ಲ ಹಾಕಿ ಅರ್ಧ ಗಂಟೆ ಕೂಡಾ ಆತಿಲ್ಲೆ. ಸರಿ ಜೆಲ್ಲ ಗಟ್ಟಿ ಆಗಿ ಮಡ್ಕೆಗೆ ತುಂಬುಸ್‌ಕೆ ಅರ್ಧ ದಿನ ಬೇಕು. ಏನ್ ಗ್ರಾಚಾರಂತ ಗೊತ್ತಿಲ್ಲೆ. ಹನಿಯ ಹೊತ್ತಿಲಿ ಸುತ್ತ ಮೋಡ ಬಂದ್ ಮುಚ್ಚಿ ಹೋತ್. ಪಟ ಪಟಂತ ದೂರ ದೂರ ಮಳೆಹನಿ ಬೀಳ್ಕೆ ಸುರು ಆತ್. ಜೋರ್ ಮಳೆ ಬಂದರೆ ಬೆಲ್ಲ ಹಾಳಾದೆಂತ ಅಲ್ಲಿದ್ದ ಮೋನಪ್ಪ ಮತ್ತೆ ರಾಮಣ್ಣ ಮೋರೆ ಮೋರೆ ನೋಡ್‌ಕೆ ಸುರು ಮಾಡ್ದೊ. ಮಳೆ ಹನಿ ಜೋರ್ ಜೋರ್ ಬೀಳ್‌ಕೆ ಸುರು ಆತ್. ಒಟ್ಟಿಗೆ ಗುಡ್‌ಗ್ ಎದ್ದತ್. ಉಪಾಯ ಇಲ್ಲದೆ ಮೋನಪ್ಪ ಬೆಲ್ಲ ತುಂಬಿದ ಮರ್ಗಿಲ್‌ನ ರಾಮಣ್ಣನ ತಲೆಗೆ ಹೊರ್ಸಿಕೆ ಅಂದಾಜಿ ಮಾಡ್ತ್. ಮರ್ಗಿಲ್‌ನ ಹಕ್ಕಲೆ ಮನೆ ಸುಂದರಣ್ಣನ ಕೊಟೆಗೆಗೆ ತಕಂಡ್ ಹೋಗಿ ಇಸಿರೆ ತೊಂದರೆ ಆಕಿಲ್ಲೆಂತ ಅವರ ಅಂದಾಜಿ. ಗಡಿಬಿಡಿಲಿ ಬೆಲ್ಲದ ಮರ್ಗಿಲ್‌ನ ತಲೆಗೆ ಇಸಿದ ರಾಮಣ್ಣ ಬಾರ ಹೆಚ್ಚು ಕಮಿ ಆಗಿ ಮರ್ಗಿಲ್ ಓಂದೆಗೆ ಬೊಗ್ಗಿ ಬಿಸಿ ಜೋನಿ ಬೆಲ್ಲ ನೆಲಕ್ಕೆ ಬೀತ್. ತಲೆ ಬಾರನ ಸರಿ ಮಾಡ್ಕೆ ಪ್ರಯತ್ನ ಮಾಡ್‌ಕನ ಮರ್ಗಿಲ್ ಎದ್ರ್‌ಗೆ ಬೊಗ್ಗಿ ಇನ್ ಅರ್ಧ ಭಾಗ ಬೆಲ್ಲ ನೆಲಕ್ಕೆ ಬೀತ್. ಅಕೇರಿಗೆ ಮರ್ಗಿಲ್‌ಲಿ ಒಂದು ಪಂಚೇರ್‌ನಷ್ಟ್ ಬೆಲ್ಲ ಒಳ್ತ್. ಅಷ್ಟೊತ್ತಿಗೆ ಅಲ್ಲಿಗೆ ಸೀರಾಡಿ ದೆವ್ವದ ಪೂಜಾರಿ ಬಾಲಣ್ಣ ಬಾತ್. ಬೆಲ್ಲ ಬಿದ್ದದರ ನೋಡಿ ಅವಂಗೆ ಪಾಪನೆಂತ ಆತ್. ಇಷ್ಟೆಲ್ಲ ಆಕನ ಮಳೆ ನಿತ್ತ್ ಒಮ್ಮೆಗೆ ಪಳ ಪಳಂತ ಬಿಸ್‌ಲ್ ಬಾತ್. ಇದರ ನೋಡಿ ಪೂಜಾರಿ ಹೇಳ್ತ್, ನೀವು ಒಂದು ತಪ್ಪು ಮಾಡ್ಯೊಳರಿ ಎನ್‌ಂತೇಳ್ರೆ ನಮ್ಮೂರಿನ ಸೀರಾಡಿ ದೆವ್ವಕೆ ನೀವು ಬೆಲ್ಲದ ರವೆ ಇಸದ ಕಾರಣ ದೆವ್ವದ ಕಾರ್ಣಿಕ ಕಾಣ್ಸಿತ್. ಕೂಡ್ಲೆ ಒಂದು ಕೊಡಿ ಬಾಳೆಲೆಲಿ ಹನಿಯ ಬೆಲ್ಲ ಹಾಕಿ ಹಲ್ಸಿನ ಮರದ ಬುಡಲಿ ಇಸಿ ಕೈ ಮುಗೆನಿಂತ ಹೇಳ್ತ್. ಎಲ್ಲವು ಸೇರಿ ದೆವ್ವಕೆ ಕೈ ಮುಗ್ದೊ. ಆಮೇಲೆ ಇಂತ ತೊಂದರೆ ನಡ್ತಿಲ್ಲೆ. ನಂಬಿದವಂಗೆ ಇಂಬುಕೊಡ್‌ವ ಒಂದ್ ಕಾರ್ಣಿಕ ಉಟ್ಟ್‌ಂತ ಎಲ್ಲವು ಹೇಳ್ಕೆ ಸುರು ಮಾಡ್ದೊ. ದೆವ್ವದ ಸಕ್ತಿನ ನೋಡಿ ಎಲ್ಲವಕೂ ದೆವ್ವದ ಮೇಲೆ ಭಕ್ತಿ ಹೆಚ್ಚಾತ್.

ಪಾಲ್ ಪಂಚಾತಿಗೆ

ನಮ್ಮ ಊರ್ಲಿ ಮೇದಪ್ಪ ಗೌಡ್ರು ದೊಡ್ಡ ದನಿಕ. ಬಾರಿ ಕಾರ್ ಬಾರಿ. ಅರ್ವತ್ತ್ ವರ್ಸಕೆ ಹಿಂದೆ ಹತ್ತ್‌ಕಂಡಿ ಅಡಿಕೆ ಬಾತಿತ್ತ್. ಇಪ್ಪತ್ತೈದ್ ಮುಡಿ ಎರ್ಡ್ ಬೆಳೆ ಬಾವ ಬೈಲ್ ಗದ್ದೆ. ಕಾನಬಾಣೆ ಸೇರಿ ಹಕ್ಕಲೆ ಹಕ್ಕಲೆ ಎಪ್ಪತ್ತ್ ಎಕ್ರೆ ಭೂಮಿಗೆ ಹಕ್ಕ್‌ದಾರ. ಅಷ್ಟ್ ದೊಡ್ಡ ಶ್ರೀಮಂತ ಸುತ್ತ ಮುತ್ತ ಯಾರೂ ಇತ್ಲೆ. ಮೇದಪ್ಪ ಗೌಡ್ರ ಅಪ್ಪ ಲಿಂಗಪ್ಪ ಗೌಡ್ರು ಗಟ್ಟಿ ಕುಳವಾರ್. ಮೇದಪ್ಪ ಗೌಡ್ರು ಗಂಡ್‌ಲಿ, ಹೆಣ್ಣ್‌ಲಿ ಒಬ್ಬನೇ ಮಂಜ. ಹಿಂದೆನ ನಾಲ್ಕನೇ ಕ್ಲಾಸ್ ಕಲ್ತೊಳೊ. ಬರೆಕೆ ಓದ್‌ಕೆ ಸರಾಗ ಬಂದದೆ. ತಾಳ ಮದ್ದಳೆಲಿ ರಾವಣ, ಬಕಾಸುರ, ಬೀಮನ ಅರ್ತ ಹೇಳ್‌ತಿದ್ದೊ. ಊರ್ಲಿ ನಾಕ್ ಜನಕೆ ಬೇಕಾದ ಸಬ್ಯ ಮೊನ್ಸ. ಆಗನ ಕಾಲಲಿ ಗ್ರಾಮಕೆ ಬಂದ ಪೋಲಿಸ್ ಪೇದೆಗ, ಮಣೆಗಾರ್, ಸರ್ವೇರವ್ರು ಎಲ್ಲಾ ಇವರ ಮನೆಲಿ ಊಟ ಮಾಡಿ ಹೋತಿದ್ದೊ. ಒಮ್ಮೆ ಮಂಗ್ಳೂರಿಂದ ಊರಿಗೆ ಬಂದ ಕಲೆಕ್ಟ್ರಿಗೂ ಮಧ್ಯಾಹ್ನದ ಊಟ ಗೌಡ್ರ ಮನೆಲಿ ನಡ್ತ್. ಊರ್ಲಿ ನಡೆವ ಸಣ್ಣ ಸಣ್ಣ ವಾದ ವಿವಾದಗಳ ಆಸ್ತಿ ಪಾಲ್ ಎಲ್ಲದ್‌ಕೂ ತೀರ್ಮಾನ ಮಾಡಿಕೆ ಮೇದಪ್ಪ ಗೌಡ್ರು ಬೇಕೇ ಬೇಕು.

ಗೌಡ್ರುಗೆ ನಾಕ್ ಜನ ಗಂಡ್, ಎರ್ಡ್ ಹೆಣ್ಣ್ ಒಟ್ಟು ಆರ್ ಮಕ್ಕ. ಸಾಲೆಗೆ ಕಳ್ಸಿರೂ ಯಾರೂ ಓದುವರ್ಲಿ ಮುಂದೆ ಹೋತಿಲ್ಲೆ. ಕಡೇ ಮಂಜ ಗೋಪಾಲ ಆರ್‌ನೇ ಕ್ಲಾಸ್ ಪಾಸಾವುಟು. ಮತ್ತೆಲ್ಲವೂ ಎರಡ್, ಮೂರ್ ಕ್ಲಾಸಿಲಿ ಸಾಲೆ ಬುಟ್ಟೊಳೊ. ಮನೆಲಿ ಗದ್ದೆ ಬೇಸಾಯ ತೋಟದ ಕೆಲ್ಸ ಎಲ್ಲಾ ಒಟ್ಟಿಗೆ ಮಾಡ್ತಿದ್ದೊ. ಎರಡ್ನೆ ಮಂಜ ಮುತ್ತಪ್ಪಂಗೆ ಕೋಳಿ ಕಟ್ಟದ ಹುಚ್ಚು. ಕಂದ್ರಪಾಡಿ, ಅಯ್ಯನಕಟ್ಟೆ, ಕಾಣಿಯೂರ್, ಸುಳ್ಯ ಜಾತ್ರೆ ಕಳ್ದ್ ನಡೆವ ಕೋಳಿ ಕಟ್ಟಕೆ ನಾಲ್ಕೈದ್ ಜನ ಕಟ್ಟಕಂಡ್ ವರ್ಸ ವರ್ಸ ಹೋತಿತ್ತ್. ಕೊಟೆಗೆಲಿ ಕೆಮ್ಮೈರ, ಬೆಳ್ಳೆ, ಕಾವ, ಕಕ್ಕೆ, ಮೈಪ ಅಲ್ಲದೆ ಬೇರೆ ಬೇರೆ ಜಾತಿನ ಹತ್ತ್ ಹನ್ನೆರ್ಡ್ ಕೋಳಿಗಳ ಕಟ್ಟಿ ಹಾಕಿ ಸಾಂಕ್‌ತಿದ್ದೊ. ಅವರಲ್ಲಿ ಒಂದು ಕಾವ ಕೋಳಿಗೆ ದಿನಂಪ್ರತಿ

ಮೂವತ್ತ್ ಜೀಜದ ಸಾರಾಯಿ ಕುಡ್ಸಿ ಅಬ್ಬೆಸ ಮಾಡೆಳೊಂತ ಸುದ್ದಿ ಇತ್ತ್. ದೊಡ್ಡ ಮಂಜ ಕೃಷ್ಣಪ್ಪಂಗೆ ಸಿಕಾರಿ ಹುಚ್ಚು ಹನಿಯ ಜಾಸ್ತಿ. ಕೆಡ್ಡಸ ಬೇಟೆಲಿ ಹಂದಿ, ಕಡ್ವೆ ಹೊಡ್ದ್ ಒಳ್ಳೆ ಈಡ್‌ಗಾರಂತ ಹೆಸ್ರ್ ಇತ್ತ್. ಮೂರ್ನೆ ಮಂಜ ಚಂದ್ರ ಹನಿಯ ನಸಲೆ. ಹೆಚ್ಚಾಗಿ ಮನೆ ಬುಟ್ಟು ಅಂವ ಹೊರಗೆ ಹೊತಿತ್ಲೆ. ಗದ್ದೆಗೆ ಬತ್ತ ತಿಂಬಕೆ ಬಾವ ಹಂದಿಗಳ ಕೋವಿ ಕಟ್ಟಿ ಹೊಡ್ದ್ ಬೀಳ್ಸುದರ್ಲಿ ಕೃಷ್ಣಪ್ಪ ಹೆಸ್ರ್ ವಾಸಿ. ಕೋವಿಕಟ್ಟಿ ಹಂದಿ, ಕಡ್ವೆಗಳ ಹೊಡೆದು ಸುಲಭದ ಕೆಲ್ಸ ಅಲ್ಲ. ಎಲ್ಲವುಕೂ ಅದರ ಹಿಡ್ತ ಇಲ್ಲೆ. ಆದರೆ ಕೃಷ್ಣಪ್ಪ ಸಣ್ಣ ಪ್ರಾಯಲೇ ಗುಂಡು ಹೊಡೆವ ಅಬ್ಬೆಸ ಮಾಡಿ ಈಡ್‌ಲಿ ಗಟ್ಟಿಗ ಆಗಿತ್ತ್. ಶಿಕಾರಿಗೆ ಹೋಗಿ ಪ್ರಾಣಿಗಳ ಹೊಡೆದು ಎಲ್ಲವೂ ಮಾಡ್ತಿದ್ದೊ. ರಾತ್ರೆ ಗದ್ದೆಗೆ ಬತ್ತ ತಿಂಬಕೆ ಬಾವ ಕಾಡ್ ಹಂದಿಗಳ ಕೋವಿ ಕಟ್ಟಿ ಹೊಡೆದು ಸೂಕ್ಷ್ಮದ ಕೆಲ್ಸ. ಹನಿಯ ಹೆಚ್ಚಿಕಮ್ಮಿ ಆದರೆ ಈಡ್ ಗುರಿಗೆ ತಪ್ಪಿ ಹೋದೇ ಹೆಚ್ಚ್. ಸಾಮಾನ್ಯ ಹಂದಿಗ ರಾತ್ರೆ ಹೊತ್ತ್ ದೊಡ್ಡ ಕಾಡಿಂದ ಗದ್ದೆಗೆ ಬಂದ್ ಬತ್ತ ತಿಂದ್ ಹಾಳ್ ಮಾಡ್ತಿದ್ದೊ. ರಾತ್ರೆ ಕಾದ್ ಕುದ್ದ್ ಗುಂಡ್ ಹೊಡೆದು ಬಾರಿ ಕಷ್ಟ. ಅದರ ಬದ್ಲ್ ಹಂದಿ ಗದ್ದೆಗ ಬಾವ ಕಂಡಿಲಿ ಕೋವಿನ ಮೊಣ್ಕಾಲ್ ಪೊಳ್ಳದಷ್ಟ್ ಎತ್ತರಲಿ ಎರ್ಡ್ ಗೂಟಕೆ ಕಟ್ಟ ಕೋವಿನ ಕಳ್ಳಂಗೆ ಒಂದು ಸಪೂರದ ಬೊಳ್ಳಿನಕಟ್ಟಿ ಮೂರ್ ಮಾರ್ ದೂರಕೆ ಒಂದು ಗೂಟಕೆ ಕಟ್ಟೋಕು. ಆಮೇಲೆ ಕುದ್ರೆ ಎಳ್ದ್ ಇಸಿ ಬರೂಕು. ರಾತ್ರೆ ಗದ್ದೆಗೆ ಬಾವ ಹಂದಿಗ ಬಂದ್ ಉದ್ದಕೆ ಕಟ್ಟಿದ ಬೊಳ್ಳಿಗೆ ತಾಂಗ್‌ಕನ ಕಳ್ಳ ಎಳ್ದಂಗೆ ಆಗಿ ಗುಂಡ್ ಹಾರ್ದ್. ಈ ಕ್ರಮಲಿ ಗುರಿ ತಪ್ಪುದು ಬಾರಿ ಕಡ್ಮೆ. ಒಮ್ಮೆ ಹೀಂಗೆ ಕೋವಿ ಕಟ್ಟ ಅರೆ ಪೆಟ್ಟಾಗಿ ಹೋದ ಹಂದಿನ ಬೆಳಿಗ್ಗೆ ನಾಯಿಗಳ ಕರ್ಕಂಡ್ ಹೋಗಿ ಒಂದು ಪರ್ಲಾಂಗ್ ದೂರಲಿ ಬಲ್ಲೆಲಿದ್ದ ಹಂದಿಗೆ ಗುಂಡ್ ಹೊಡ್ದ್ ತಂದಳೊ. ಆ ಹಂದಿ ಬರಾಬರಿ ನಾಲ್ಕು ಜನಕೆ ನಿಗ್ರ ಇತ್ತ್. ಅದರ ಕೋರೆ ಹಲ್ಲ್‌ಗ ಹೊರಗೆ ಆರ್ ಇಂಚ್ ಉದ್ದ ಕಾಂಬೊತಿತ್ತ್.

ಗಂಡ್ ಮಕ್ಕಳಿಗೆ ಪ್ರಾಯ ಬಂದಾಂಗೆ ಮೊದ್ವೆ ಮಾಡ್ದೊ. ಅಕೇರಿ ಇಬ್ಬರಿಗೆ ಒಂದೇ ಚಪ್ಪರಲಿ ಒಟ್ಟಿಗೆ ಮೊದ್ವೆ ನಡ್ತ್. ನಾಕ್ ಜನ ಅಣ್ಣ ತಮ್ಮಂದರ್ ತಂದ ಗೂಡೆಗ ಎಲ್ಲ ಸೇರಿ ಹತ್ತ್ ಜನರ ಸಂಸಾರ. ಒಂದೆರ್ಡ್ ವರ್ಸ ಏನೂ ಕಟಿಪಿಟಿ ಇಲ್ಲದೆ ಸುಕಲಿ ಇದ್ದೊ. ದೊಡ್ಡ ಮಂಜನ ಗೂಡೆ ಒಂಭತ್ತನೇ ಕ್ಲಾಸ್ ಮುಟ್ಟ ಕಲ್ತುಟು. ಬಾಕಿಯವುಕೆ ಓದಿಕೆ ಬರೆಕೆ ತಕ್ಕ ವಿದ್ಯೆ ಇತ್ತ್. ಮಕ್ಕಳಿಗೆ ಮಕ್ಕ ಆದೂ. ನಾಲ್ಕ್ ವರ್ಸಲಿ ಎಂಟ್ ಸಣ್ಣ ಸಣ್ಣ ಮಕ್ಕ ಮನೆಲಿ ಹುಟ್ಟಿದೊ. ಮೇದಪ್ಪ ಗೌಡ್ರಿಗೆ ಎಪ್ಪತ್ ದಾಟಿಟು. ಬೀಡಿ ಎಳೆವ ಚಟ ಇದ್ದಕಾರ್ಣ ಸಣ್ಣ ಕೆಮ್ಮುಲ್ ಸುರ್ ಆವುಟು. ಮಂಗಳೂರಿಗೆ ಹೋಗಿ ಪರೀಕ್ಷೆ ಮಾಡ್ಸ್‌ಕನ ಟಿ.ಬಿ ಲಕ್ಷಣ ಉಟ್ಟುಂತ ಹೇಳಿ ಡಾಕ್ಟರ್ ಮೊದ್ದ್ ಕೊಟ್ಟ್ ಕಳ್ಸಿದೊ. ಅಷ್ಟರವರೆಗೆ ಹೊಂದಾಣಿಕೆಲಿದ್ದ ಗಂಡ್ ಮಕ್ಕ ಅವರ ಹೆಣ್ಮಕಳ ಮಾತ್ ಕೇಳಿ ಆಗಾಗ ಸಣ್ಣ ಪುಟ್ಟ ಜಗಳ ಆತಿತ್ತ್. ಮೇದಪ್ಪ ಗೌಡ್ರು ಇರ್‌ವ ವರೇಗೆ ಎಲ್ಲಾ ಸರಿ ಹೋತ್ತಿತ್ತ್. ಉಸಾರ್ ಇದ್ದ ಮೇದಪ್ಪ ಗೌಡ್ರು ಬಿಸು ಸಂಕ್ರಮಣಕೆ ಹಿಂದೆನ ರಾತ್ರೆ ಮಲ್ಗಿದೊವು ಬೆಳಿಗ್ಗೆ ನೋಡ್‌ಕನ ನಿದ್ದೆಲೆ ಜೀವ ಹೋವುಟು. ಮನೆವ್ರುಕೆ ದುಃಖ ಆದ್ರೂ ಊರ್‌ನವ್ರು ಬಂದ್ ಇದ್ ಸುಕ ಮರಣಂತ ಹೇಳಿ ಸಮ್ದಾನ ಮಾಡ್ದೊ.

ಅಪ್ಪನ ಹದಿನಾರರ ಕಾರ್ಯ ಮುಗ್ದ್ ಒಂದ್ ತಿಂಗ ಆಕನ ಅಣ್ಣ ತಮ್ಮಂದರ ಒಳಗೆ ಸಮ ಬಾರದೆ ಆಸ್ತಿ ಪಾಲ್ ಆಕುಂತ ಅಭಿಪ್ರಾಯ ಬಾತ್. ಮೇದಪ್ಪ ಗೌಡ್ರ ಹೆಣ್ಣ್ ಜಾಕಮ್ಮಂಗೆ ಅರ್ವತ್ತು ದಾಟುದು ಅಷ್ಟೆ. ಮನೆ ಒಳಗೆ ಕೆಲ್ಸ ಗೂಡೆಗಳಂಗ ಮಾಡ್ತಿದ್ದೊ. ಊರ್‌ನ ಗ್ರಾಸ್ತರ ಸೇರ್ಸಿ ಪಾಲ್ ಪಂಚಾತಿಗೆ ಮಾಡ್ವಂತ ನಿಗಂಟ್ ಆತ್. ದೂರಲಿ ದೊಡಪ ಅವ ಮಾಲಿಂಗ

ಗೌಡ್ರ ಬಾಕೆ ಹೇಳ್ದೊ. ಅವರೊಟ್ಟಿಗೆ ವೆಂಕಪ್ಪ ಗೌಡ್ರು ಪಂಚಾತಿಗೆ ಕಳಕೆ ಬಂದ್ ಸೇರ್ದೊ. ಹಿಂದೆನ ಕಾಲಲಿ ಮೊದ್‌ವೆ ಮಾಡಿ ಕೊಟ್ಟ ಹೆಣ್ಣ್ ಮಕ್ಕಳಿಗೆ ಆಸ್ತಿ ಪಾಲ್ ಕೊಡ್‌ವ ಕಾನೂನು ಇತ್ಲೆ. ಹಾಂಗೆ ಮೇದಪ್ಪ ಗೌಡ್ರ ನಾಕ್ ಗಂಡ್ ಮಕ್ಕಳಿಗೆ ಭೂಮಿ ಸಮಪಾಲ ಆತ್. ಒಬ್ರೊಬ್ಬಂಗೆ ಆರ್ ಮುಡಿಬೈಲ್ ಗದ್ದೆ, ಕಾನಬಾಣೆ ಸೇರಿ ಹನ್ನೆರ್ಡ್ ಎಕ್ರೆ ಪಾಲಿಗೆ ಬಾತ್. ಪದ್ದತಿನಾಂಗೆ ಅಕೇರಿ ಮಂಜ ಚಂದ್ರಂಗೆ ಒಂದು ಪಾಲ್ ತಕಂತ ಗ್ರಾಸ್ಥರ್ ಸೂಚನೆ ಕೊಟ್ರೊ. ಒಂದು ಪಾಲ್‌ಲಿ ಹತ್ತ್ ಸೆಂಟ್ಸ್ ಜಾಗೆ ಹೆಚ್ಚಿಗೆ ಉಟ್ಟು. ಸಣ್ಣ ಮಂಜ ಮುತ್ತಪ್ಪ ಆ ಪಾಲ್‌ನ ನಂಗೇ ಬೇಕುಂತ ಹಟ ಮಾಡ್ತ್. ಮನೆಲಿ ಸರಿ ಕೆಲ್ಸ ಮಾಡದೆ ಕೋಳಿ ಕಟ್ಟಲಿ ತಿರ್‍ಗಿರೂ ಪಾಲ್ ದೊಡ್ಡದ್ ಬೇಕುಂತ ಆಸೆ. ದೊಡ್ಡ ಮಂಜ ಕೃಷ್ಣಪ್ಪ ಅವ್ವನ ಸಾಂಕವ ನಾ ಆದ ಕಾರಣ ದೊಡ್ಡಪಾಲ್ ನಂಗೇ ಸಿಕ್ಕೊಕ್ಕುಂತ ಒತ್ತಾಯ ಮಾಡ್ತ್. ಗ್ರಾಸ್ಥರ ಮಾತಿಗೆ ಒಪ್ಪೊವು ಯಾರೂ ಕಾಂಬೊದಿಲ್ಲೆ. ಎಷ್ಟೆ ಬುದ್ದಿ ಹೇಳ್ರೂ ಒಮ್ಮತಕ್ಕೆ ಬಾರದ ಅಣ್ಣ ತಮ್ಮಂದರ ಆಸ್ತಿ ಪಾಲ್ ಮಾಡಿಕೆ ದೇವರೇ ಬರಕುಂತ ಗ್ರಾಸ್ಥರ್ ಹೇಳ್ದೊ. ಸಿಟ್ಟ್ ಬಂದ್ ನಿಮ್ಮ ಮನೆಗೆ ಸಿವಿಲ್ ವ್ಯಾಜ್ಯ ಬೀಳಲಿಂತ ಬೇಜಾರ್ಲಿ ಹೇಳಿ ನೀರ್ ಮುಟ್ಟದೆ ಹೊರ್‍ಟ್ ಹೋದೊ.

ಅಣ್ಣ ತಮ್ಮಂದರ ಆಸ್ತಿ ಪಾಲ್ ಮಾಡಿಕೆ ಎರ್ಡ್ ಮೂರ್ ಸರ್ತಿ ಪಂಚಾತಿಗೆ ನಡ್ದರೂ ಯಾವುದೇ ಅಕೇರಿ ತೀರ್ಮಾನಕೆ ಬಾಕೆ ಸಾಧ್ಯ ಆತಿಲ್ಲೆ. ಒಬ್ರೊಬ್ಬ ಒಂದೊಂದು ವಿಸಯಲಿ ಹಟ ಹಿಡಿಯೊದು ನಡೆತಾ ಇತ್ತ್. ಬೇರೆ ದಾರಿ ಇಲ್ಲದೆ ಅಣ್ಣ ತಮ್ಮಂದರ್ ಪುತ್ತೂರು ಸಿವಿಲ್ ಕೋರ್ಟ್‌ಲಿ ವ್ಯಾಜ್ಯ ದಾಕಲ್ ಮಾಡ್ದೊ. ಹೆಸರ್ ಹೋದ ದೊಡ್ಡ ವಕೀಲ್‌ರ ಹಿಡ್ದ್, ಅವು ಹೇಳ್ದಷ್ಟೆ ಪೀಸ್ ಕೊಟ್ಟು ತಿಂಗ ತಿಂಗ ಕೋರ್ಟ್‌ಗೆ ಹಾಜರಾತಿದ್ದೊ. ಒಂದೇ ಮನೆಲಿ ನಾಕ್ ಕಡೆ ಹೊಗೆ ಹೋಕೆ ಸುರ್‌ಆತ್. ಗದ್ದೆ ತೋಟದ ಫಸಲ್‌ಲಿ ಜಗಳ ಆಗಿ ಒಂದೇರ್ಡ್ ಸರ್ತಿ ಸ್ಟೇಶನಿಗೂ ದೂರು ಕೊಟ್ರೊಳೊ. ಒಂದೇ ಅಪ್ಪನ ನಾಕ್ ಮಕ್ಕ ಆಸ್ತಿ ಪಾಲ್ ನಂಗೆ ಹೆಚ್ಚಿಗೆ ನಂಗೆ ಹೆಚ್ಚಿಗೆ ಬೇಕುಂತ ವಾದ ನಡೆತಾ ಇತ್ತ್. ಪ್ರಪಂಚದ ಜನಗ ಭೂಮಿ ನನ್ನದ್ ನನ್ನದ್‌ಂತ ಜಗಳ ಮಾಡ್ದರ ನೋಡಿ ದೇವ್ರ್ ನೆಗಾಡ್‌ವೆಗಡ. ಇಡೀ ಭೂಮಂಡಲವೇ ನನ್ನದಾರ್‍ಗಿಕನ ಈ ಹುಚ್ಚರ ಮಾತಿಗೆ ದೇವ್ರ್‌ಗೆ ನಗೆ ಬಂದದೆ ಅಷ್ಟೆ.

ಪುತ್ತೂರ್ ಕೋರ್ಟ್‌ಲಿ ಕೇಸ್ ಸುಮಾರ್ ಒಂಭತ್ತ್ ವರ್ಸ ನಡ್ತ್. ಆದ್ರೂ ತೀರ್ಪು ಬಾತಿಲ್ಲೆ. ಸುರು ಸುರು ಬಾರಿ ದೈರ ಹೇಳ್ತಿದ್ದ ಲಾಯರ್‌ಗ ವರ್ಸ ಹೋದಾಂಗೆ ವಾಯಿದೆಗೆ ಹಾಜರಾವುದೇ ಕಮ್ಮಿ ಆತ್. ಫೀಸ್ ಮುಂದೇ ವಸೂಲ್ ಆದ ಕಾರಣ ಲಾಯರ್‌ಗೆ ತಲೆ ಬಿಸಿ ಇಲ್ಲೆ. ಅಂತೂ ಹನ್ನೊಂದ್ ವರ್ಸ ಮೂರ್‌ತಿಂಗ ಆಕನ ಕೋರ್ಟ್ ತೀರ್ಪು ಬಾತ್. ತೀರ್ಪು ಯಾರಿಗೂ ಸಮಾಧಾನ ಆತಿಲ್ಲೆ. ಹನಿಯ ದಿನಲೇ ಎರ್ಡ್‌ನೇ ಮಂಜ ಮಂಗ್ಳೂರ್ ದೊಡ್ಡ ಕೋರ್ಟ್‌ಗೆ ಅಫೀಲ್ ಮಾಡ್ತ್. ಹಿರಿಯವು ಹೇಳ್ತಿದ್ದ ಒಂದು ಗಾದೆ ನೆನ್‌ಪು ಆದೆ. 'ಕೋರ್ಟ್ ಕೇಸ್‌ಲಿ ಗೆದ್ದಂವ ಸೋತ, ಸೋತವ ಸತ್ತಂತ'. ಈ ಮಾತ್ ಯಾಗೋಳ್ ಸತ್ಯ. ಈ ಅಣ್ಣ ತಮ್ಮಂದರಿಗೆ ಅಕೇರಿಗೆ ಗಾದೆ ಮಾತ್‌ನಂಗೆ ಆತ್. ಐದ್ ವರ್ಸ ಕೇಸ್ ನಡ್ದ್ ತೀರ್ಪುಬಾತ್. ಅಫೀಲ್ ಮಾಡ್ದ ಮುತ್ತಪ್ಪಂಗೆ ಲಾಯರ್ ಪೀಸ್ ಕೊಡ್‌ಕೆ ದುಡ್ಡಿಲ್ಲದೆ ಕೋರ್ಟ್‌ಲಿ ಭೂಮಿ ಐದ್ ಪಾಲ್ ಆತ್. ಅಣ್ಣ ತಮ್ಮಂದರಂಗೆ ಲಾಯರಿಗೂ ಒಂದು ಪಾಲ್ ಸಿಕ್ಕಿತ್. ಕೋರ್ಟ್‌ವುಟ್ಟು, ಲಾಯರ್‌ಗ ಒಳೊ. ಮುತ್ತಪ್ಪನ ಕೋರ್ಟ್ ಕೇಸ್ ಇನ್ನೂ ಮುಗ್ತಿಲ್ಲೆ.

ಮೊದ್ವೆ ದಿಬ್ಬಣ

ಹತ್ತ್ ಕುಟುಂಬ ಹದಿನೆಂಟ್ ಗೋತ್ರಕೆ ಸೇರ್‍ದ ಗೌಡ ಜಾತಿಲಿ ಮೊದ್ವೆಗೆ ತುಂಬಾ ಪ್ರಾಮುಖ್ಯತೆ ಉಟ್ಟು. ಮೊದ್ವೆ ಮಾಡಿ ನೋಡು, ಮನೆ ಕಟ್ಟಿ ನೋಡ್‌ಂತ ಗಾದೆ ನಮ್ಮ ಅರೆಬಾಸೆಲೂ ಹೇಳ್ವೆ. ಇದರ ಅರ್ಥ ಮೊದ್ವೆ ಮಾಡ್ದು ಮತ್ತೆ ಮನೆ ಕಟ್ಟುದು ಒಬ್ಬಂದ ಆವ ಕೆಲ್ಸ ಅಲ್ಲ. ಮನೆವರ, ನೆರೆಕರೆವರ, ನೆಂಟ್ರುಗಳ, ಸ್ನೇಹಿತರ ಸಾಯ ಬೇಕೇ ಬೇಕ್. ಎಷ್ಟೇ ದುಡ್ಡ್ ಇದ್ರೂ ಜನ ಸಾಯ ಇಲ್ಲದೆ ಈ ಕೆಲ್ಸ ನಡೆಕಿಲ್ಲೆ.

ನಮ್ಮ ಗುಡ್ಡೆಮನೆ ಗುಡ್ಡಪ್ಪ ಗೌಡ್ರು ಹೆಸ್ರ್ ಆಗನ ಕಾಲಲಿ ತಾಲೂಕು ದಾಟಿ ಮಂಗ್ಳೂರು ವರೇಗೆ ಮುಟ್ಟಿತ್ತ್. ಅವರಪ್ಪ ನಾಣು ಗೌಡ್ರು ಅಪ್ಪಂಗೆ ಒಬ್ಬನೇ ಮಂಜ ಹಾಂಗೆ ಗುಡ್ಡಪ್ಪ ಗೌಡ್ರಿಗೆ ಒಂದು ನೂರ್ ಎಕ್ರೆಂದ ಹೆಚ್ಚಿಗೆ ಪಟ್ಟಾ ಬೂಮಿ, ಐವತ್ ಎಕ್ರೆಂದ ಜಾಸ್ತಿ ಕಾನಬಾಣೆ ಇತ್ತ್. ಪ್ರಾಯಕ್ಕೆ ಬಂದ ಗುಡ್ಡಪ್ಪ ಗೌಡ್ರಿಗೆ ಅವರಷ್ಟ್ ಶ್ರೀಮಂತರ್ ಅಲ್ಲದ್ರೂ ಪುತ್ತೂರು ತಾಲೋಕಿನ ಬಲ್ನಾಡ್‌ಂದ ಒಳ್ಳೆ ಮನೆಂದ ನೆಂಟಸ್ತಿಕೆ ಆತ್. ಗೂಡೆ ಜಾತಕದ ಹೆಸ್ರ್ ಲಕ್ಷ್ಮಿಂತ. ಮನೇಲಿ ಕರೆದು ಲಚ್ಚಿಂತ. ಗುಡ್ಡಪ್ಪ ಗೌಡ್ರು ಸುಳ್ಯ ತಾಲೂಕಿಗೆ ಸೇರ್‍ದ ಅರೆಬಾಸೆವು. ಪುತ್ತೂರ್ ತಾಲೋಕಿಲಿ ಗೌಡ್ರ ಮನೆ ಮಾತ್ ತುಳು. ಮೂಲಲಿ ಎಲ್ಲವೂ ಅರೆಬಾಸೆ ಮಾತಾಡ್‌ವ ಗೌಡ್ರೇ ಆಗಿದ್ದೊ. ಪುತ್ತೂರು ಕಡೆ ಹೆಚ್ಚಿನ ತುಳು ಮಾತೋಡವು ಇರ್‌ವ ಕಾರಣ ಆ ಊರ್‌ನ ಬಾಸೆ ತುಳುನ ಗೌಡ್ರುಗ ಕಲ್ತ್ ಮನೆ ಮಾತ್ ಆತ್. ವ್ಯವಹಾರಕ್ಕೆ ಕಲ್ತ್ ಬಾಸೆ ಮತ್ತೆ ಸ್ವಂತ ಬಾಸೆ ಆತ್.

ಜಾತಿ ಸಂಪ್ರದಾಯದ ಪ್ರಕಾರ ಒಂದು ಒಳ್ಳೆದಿನ ನೋಡಿ ಗುಡ್ಡಪ್ಪ ಗೌಡ್ರು ಸೋದರ ಮಾವನ ಕರ್ಕಂಡ್ ಪುತ್ತೂರು ಪೇಟೆಂದ ಹನಿಯ ದೂರಲಿರ್ವ ಬಲ್ನಾಡ್‌ಗೆ ಗೂಡೆ ನೋಡ್‌ಕೆ ಹೋದೊ. ಗೌಡ್ರಿಗೆ ಆಗ ಇಪ್ಪತ್ತಾರ ವರ್ಸ ಪ್ರಾಯ. ಗುಡ್ಡಪ್ಪ ಗೌಡ್ರು ಪುತ್ತೂರ್ ಬೋರ್ಡ್

ಹೈಸ್ಕೂಲಿ ಎಸ್.ಎಸ್.ಎಲ್.ಸಿ ಪಾಸಾಗಿ ಇಂಟರ್ ಮೀಡಿಯಟ್‌ಗೆ ಸೇರುದುಂತ ನಿಗಂಟ್ ಆತ್. ಹೈಸ್ಕೂಲ್‌ಗೆ ಸೇರ್‍ವವರೇಗೆ ಗೌಡ್ರಿಗೆ ಉದ್ದ ಕೂದಲ್ ಇತ್ತ್. ಕಟ್ಟ ಬಿಚ್ಚಿರೆ ಮೊಣ್ಕಾಲ್‌ವರೆಗೆ ಇಳಿತಿತ್ತ್. ಪುತ್ತೂರ್ಲಿ ಸಾಲೆಗೆ ಸೇರಿ ಒಂದು ವಾರಲಿ ಗೌಡ್ರು ಜುಟ್ಟು ಕತ್ತ್‌ರ್ಸಿ ತಲೆ ನಡುಬಾಗಲಿ ಬಗ್‌ತಲೆ ತೆಗ್‌ದ್ ಕುರೋಪು ಸುರು ಮಾಡ್ದೊ. ಅವರ ಮೋರೆಗೆ ಕುರೋಪು ಲಾಯಕ್‌ಲಿ ಒಪ್ಪುತಿತ್ತ್. ಗೌಡ್ರ್ ಜುಟ್ಟು ಕತ್ರಿಸಿದ್‌ಕೆ ಕಾರಣ ಒಂದು ಕತೆನೇ ಉಟ್ಟು.

ಗುಡ್ಡಪ್ಪ ಗೌಡ್ರು ಗೂಡೆ ನೋಡಿ ಮನೆಗೆ ಬಂದ್ ಎತ್ತಿಕನ ಮನೆವು, ನಂಟ್ರ್ಗ, ನೆರೆಕರೆವು ದಾರಿಗೆ ಅಡ್ಡನಿತ್ತ್ ಗೂಡೆ ಹೇಂಗುಟ್‌ಂತ ಇಚಾರ್ಸಿಕೆ ಸುರು ಮಾಡ್ದೊ. ಏನೂ ನಿಂಗಂಟ್ ಮಾಡ್ತಿಲ್ಲೆಂತ ಹಾರ್ಸಿ ಹೇಳ್‌ತಿದ್ದೊ. ಹೋಗಿ ಬಂದ್ ಒಂದು ತಿಂಗ ಹಕ್ಕಲೆ ಆತ್. ಗೂಡೆ ಮನೆವು ನಿಮ್ಮ ಅಭಿಪ್ರಾಯ ತಿಳ್ಸೊಕುಂತ ಬರ್ದ್ ಕವರ್ ಟಪ್ಪಾಲಿ ಬಂದ್ ಮುಟ್ಟ್‌ಕನ ಹತ್ತ್ ದಿನ ಆವುಟ್. ಗುಡ್ಡಪ್ಪ ಗೌಡ್ರ್ ಆಗನ ಕಾಲಲಿ ಇಂಟಮೀಡಿಯಟ್ ಪೈಲ್ ಅವು ಮಡಿಕೇರಿ ಕಾಲೇಜಿಗೆ ಹೊತಿದ್ದೊ. ದುಡ್ಡ್‌ನವರ ಮಂಜ ಆದ ಕಾರ್ಣ ಕರ್ಚೆ ಮಾಡಿಕೆ ದುಡ್ಡಿನ ಹೆದ್ರಿಕೆ ಇತ್ಲೆ. ಚಳಿ ಊರಾದ್ರೂ ಸಾಲೆಗೆ ಹೋಕನ ಸರಾಯಿ, ಬ್ರಾಂಡಿ ಮುಟ್ಟಿನೋಡ್ತಿಲ್ಲೆ.

ಗೂಡೆ ಮನೆಂದ ಅಪ್ಪನ ಹೆಸ್ರಿಗೆ ಬಂದ ಕಾಗದನ ಒಡ್ದ್ ಗೊತ್ತಾಗದಾಂಗೆ ಓದಿ ಹಿಂದಕೆ ಅಂಟಿಸಿ ಅಪ್ಪನಕೈಗೆ ಕೊಟ್ಟೊ. ಕಾಗದ ಓದಿ ಅಪ್ಪ ಮಂಜನ ಇಚಾರ್ಸ್‌ಕನ ಗೂಡೆ ಆದುಂತ ಒಪ್ಪಿಗೆ ಉಟ್ಟುಂತ ಹೇಳ್ದೊ. ತಿಳೆಕನ ಗೂಡೆ ಗುಂಡಾರ್ ಬಳಿದ್‌ಂತ ಗೊತ್ತಾತ್. ಗುಂಡಾರ್ ಬಳಿಂತ ಗೊತ್ತಾದ ಕೂಡ್ಲೆ ಹುಡ್‌ಗನ ಅಜ್ಜಿ, ಅವ್ವ ಈ ನೆಂಟಸ್ತಿಕೆ ಬೇಡಾಂತ ಪುಕಾರ್ ತೆಗ್‌ದೊ. ಗುಂಡಾರ್ ಬಳಿ ಗೂಡೆನ ತಂದರೆ ನಮ್ಮ ಮನೆ ಗುಂಡಾಂತ್ರ ಆದೆಂತ ಆಗನ ಕಾಲದ ಗಟ್ಟಿ ನಂಬಿಕೆ. ನೂರ್ ವರ್ಸದಾಟಿರೂ ಈಗಳೂ ಕೆಲವು ಜನ ಗುಂಡಾರ್ ಬಳಿಂತೇಳ್ರೆ ಮುಸುಂಡ್ ಓರೆ ಮಾಡ್ವೆ. ಇತ್ತೀಚೆಗೆ ಈ ಅಭಿಪ್ರಾಯ ಬಿದ್ದ್ ಹೋಗಿ ಗುಂಡಾರ ಬಳಿನ ಗೂಡೆನೇ ಬೇಕುಂತ ಹಟ ಹಿಡ್ದ್ ಈಗ ಮೊದ್ವೆ ಆಕೆ ಸುರು ಆವುಟ್. ಒಂದ್ ಕಾಲಲಿ ಬೇಡಂತ ಹೇಳುವ ಅಭಿಪ್ರಾಯ ಕಾಲದ ಮಹಿಮೆಂದ ಈಗ ಸರಿಂತ ಒಪ್ಪುಕೆ ಸುರ್ ಮಾಡ್ಯಳೊ. ಕಾಲದೊಟ್ಟಿಗೆ ಹೊಂದಾಣಿಕೆ ಮಾಡಿಕಂಡ್ ಮುಂದೆ ಹೋವ ಗುಣಂದಾಗಿ ನಮ್ಮ ದೇಸದ ಮೂಲ ಸಂಪ್ರದಾಯನ ಬುಡದೆ ಮುಂದೆ ಹೋದವೆ. ವಿಶೇಷಂತೇಳ್ರೆ ಗುಂಡರಬಳಿ ಗಂಡ್‌ಗೆ ಬೇರೆ ಬಳಿ ಗೂಡೆನ ಮೊದ್‌ವೆಗೆ ಯಾವ ಅಡ್ಡಿ ಇಲ್ಲೆ. ಹೆಣ್ಣಿಗೊಂದ್ ನ್ಯಾಯ ಗಂಡಿಗೊಂದು ನ್ಯಾಯ. ತಿಳುವಳಿಕೆ ಹೆಚ್ಚಿದಾಂಗೆ ತೂಕ ಇಲ್ಲದ ವಿಸಯಗ ಬಿದ್ದ್ ಹೋದವೆ. ಇದ್ ಪ್ರಕೃತಿ ನಿಯಮ.

ಹುಡ್‌ಗ ಗೂಡೆನ ಆವುದಂತ ಹೇಳ್ದೆ. ಗೂಡೆಗೂ ಮನ್ಸ್‌ಟ್ಟು. ಗೂಡೆ ಹೈದ ಒಪ್ಪಿರೆ ದೊಡ್ಡವರ ಆಕ್ಷೇಪ ಇಲ್ಲೆ. ಆಗ ಹೈದನ ಸೋದರ ಮಾಂವ ನೇಮಣ್ಣ ಗೌಡ್ರು, ಅದೇ ಊರ್‌ಲಿ ಗುಂಡಾರ ಬಳಿ ಗೂಡೆನ ತಂದ ವಿಸಯನ ಹೇಳ್ದೊ. ನಮ್ಮ ನೆರೆಮನೆ ಚರ್ಮಣ್ಣ ಗೌಡ್ರ ಮಂಜಂಗೆ ಗುಂಡಾರಬಳಿ ಗೂಡೆನ ತಂದ್ ಇಂದಿಗೆ ಹದಿನೈದ್ ವರ್ಸ ಆತ್. ದೇವ್‌ರ್ ಕೊಟ್ಟ ಮೂರ್ ಮಕ್ಕ ಸಾಲೆಗೆ ಹೋದವೆ. ಗೂಡೆ ಬಂದ್ ಹತ್ತಿದ ಮನೆ ಮುಂದೆಂದ ಹತ್ತ್ ಪಾಲ್ ಒಳ್ಳೆದಾವುಟು. ಗುಂಡಾರ ಬಳಿ ಗೂಡೆನ ತಂದರೆ ತೊಂದರೆ ಆದೆಂತ ಹೇಳ್ದ್ರ್ಲಿ ಸತ್ಯ ಇಲ್ಲೆಂತ ಉದಾಹರಣೆ ಕೊಟ್ಟು ಹೇಳ್‌ಕನ ಎಲ್ಲವೂ ಮೊದ್ವೆಗೆ

ಒಪ್ಪಿಗೆ ಕೊಟ್ಟೊ. ಎರ್ಡ್ ಕಡೆವು ಸೇರಿ ಮಾಲಿಂಗೇಶ್ವರ ದೇವಸ್ಥಾನಲಿ ಹೂ ತೆಗ್ಗಿ ನೋಡಕನ ಸಾಲುವಳಿ ಕೂಡಿ ಬಂದದೆಂತ ಬಟ್ರು ಹೇಳ್ದೊ. ದೇವ್ರ್‌ಗೆ ಮಂಗಳಾರ್ತಿ ಮಾಡ್ಸಿ ಪುರ್ಸಾದ ತಕಂಡ್ ಸೀದಾ ಮನೆಗೆ ಬಂದೊ. ಆಗ ಪುತ್ತೂರಿಗೆ ಹೋಕೆ ಎರ್ಡ್ ದಿನ ಬೇಕು. ಈಗ ದಿನಕ್ಕೆ ಎರ್ಡ್ ಸರ್ತಿ ಹೋಗಿ ಬಾವ ಸೌಕರ್ಯ ಉಟ್ಟು. ಗುತ್ತಿಗಾರ್, ಜಾಲ್ಸೂರು, ಕಾವು ದಾರಿಲಿ ಮುಂದೆನವು ನಡ್ಡ್ ಹೋತಿದ್ದೊ. ಆನೆಗುಂಡಿ ಕಾಡಿಲಿ ಕೆಲವು ಪುಂಡರ್ ನಡ್ದ್ ಹೋವ ಜನಗಳ ಹೆದ್‌ರ್ಸಿ ದುಡ್ಡ್, ಚಿನ್ನ ದರೋಡೆ ಮಾಡ್‌ವ ಪ್ರಯತ್ನ ಮಾಡ್ತಿದ್ದೊ. ಮೂರ್‌ನಾಕ್ ಜನಕ್ಕೆ ಕಮ್ಮಿ ನಡ್ಡ್ ಹೋಕೆ ಯಾರಿಗೂ ದೈರ ಬಾತಿತ್ಲೆ.

ಸೋಣ ಸಂಕ್ರಮಣ ಕಳ್ದ್ ನಾಕರ್ಲಿ ಪೀಳ್ಯ ಸಾಸ್ತ್ರಕ್ಕೆ ದಿನ ನಿಗಂಟ್ ಆತ್. ಅದರ ಒಳೆಗೆ ಗೂಡೆ ಕಡೆವು ಮನೆ ನೋಡಿಕೆ ಬರುವ ಕ್ರಮ ಮುಗೆಕುಂತ ಎಲ್ಲಾ ವಿವರ ತಿಳ್ಸಿ ಗುಡ್ಡಪ್ಪ ಗೌಡ್ರು ಗೂಡೆ ಮನೆಗೆ ಕಾಗ್ದ ಬರ್ದೊ. ಹಿಂದೆ ಎಳೆಂಟ್ ಕಡೆಂದ ನೆಂಟಸ್ತಿಕೆ ಬಂದ್ರೂ ಬಳಿನ ದೂರ್ ಹಾಕಿ ಲಗ್ನ ತಪ್ಪಿ ಹೋತಿತ್ತ್. ಗೂಡೆ ಮನೆವುಕೆ ಬಾರಿ ಕುಸಿ ಆತ್. ಗಟ್ಟಿ ನಂಟ್ರ್, ವಿದ್ಯೆ ಕಲ್ತ ಹುಡ್ಗ, ಕಳ್ ಸಾರಾಯಿ ಕುಡೆವ ಅಬ್ಬೆಸ ಇಲ್ಲೆ. ದೇವ್ರ ಮೇಲೆ ಬಾರ ಹಾಕಿ ನಂಟ್ರ ಪೀಳ್ಯ ಸಾಸ್ತ್ರಕ್ಕೆ ಬಾಕೆ ಹೇಳ್ದೊ.

ಗುಡ್ಡಪ್ಪ ಗೌಡ್ರ ಅಪ್ಪ ನಾಣು ಗೌಡ್ರಿಗೆ ಪ್ರಾಯಂದಾಗಿ ಪ್ರಯಾಣ ಮಾಡಿಕೆ ಕಷ್ಟ. ಅವು ಪೀಳ್ಯ ಸಾತ್ರಕ್ಕೆ ಹೋತಿಲ್ಲೆ. ಊರ್ ಗೌಡ್ರ್ ಸೇರಿ ಐದ್ ಜನ ಗಣ್ಮಕ ಮತ್ತೆ ಐದ್ ಜನ ಹೆಣ್ಮಕ ಗೂಡೆ ಮನೆಗೆ ಹೋದೊ. ಗೂಡೆ ಮನೆ ಬಲ್ನಾಡ್ ಗ್ರಾಮಲಿ ಒಂಟೆ ಗುಂಡಿಂತ ಹೆಸ್ರ್. ಗಾಡಿಲಿ ಹೋದುಂತ ನಿಗಂಟ್ ಮಾಡ್ರೂ ಹೊರ್ಡ್‌ವ ದಿನ ಒಂದು ಎತ್ತಿಗೆ ಕೈ ಹಲ್ಕ್ ಜಾರಿ ಬೇನೆ ಜೋರ್ ಇತ್ತ್. ಹಾಂಗೆ ಎಲ್ಲವೂ ನಡ್ಕಂಡೇ ಹೊರ್ಟೊ. ಕಾವುಗೆ ಮುಟ್ಟ್‌ಕನ ಯಾವುದೊ ಅಂಗಡಿ ಸಾಮಾನ್ ತಾಕೆ ಪುತ್ತೂರಿಗೆ ಹೋವ ಎರ್ಡ್ ಕಾಲಿಗಾಡಿಗ ಸಿಕ್ಕಿದೊ. ಅವರೊಟ್ಟಗೆ ದಮ್ಮಯ್ಯ ಹಾಕಿ ಎರ್ಡ್ ಗಾಡಿಲಿ ಕುದ್ದ್ ಬೆಳಿಗ್ಗೆ ಆಕನ ದರ್ಬೆಗೆ ಎತ್ತಿದೊ. ದರ್ಬೆ ವಾಮನಪ್ಪೈ ಹೋಟ್ಲ್‌ಲಿ ಅವ್ಲಕ್ಕಿ ಸಜ್ಜಿಗೆ ತಿಂದ್ ಕಾಫಿ ಕುಡ್ದ್ ನಂಟ್ರ ಮನೆಗೆ ಎತ್ತ್‌ಕನ ಸರಿ ಹತ್ತ್ ಗಂಟೆ.

ಮನೆವು ದೂರಂದಳೇ ನಂಟ್ರ್ ನೋಡಿ ಪಳ ಪಳ ಹೊಳೆವ ಚೊಂಬಿಲಿ ನೀರ್ ಹಿಡ್ಡ್ ತಯಾರಾದೊ. ಹುಲ್ಲಿನ ಮನೆ ಸಣ್ಣದಾದರೂ ಚೊಕ್ಕಟ ಉಟ್ಟು. ಗದ್ದೆ, ತೋಟಕೃಷಿ ಲಾಯಿಕ್ ಕಂಡದೆ. ಅಕ್ಕಿ, ಬತ್ತದ ಮುಡಿ ಅಟ್ಟಲಿ ಕಟ್ಟಿ ಹಾಕಿಯೊಳೊ. ನೀರ್ ಕೊಟ್ಟ್ ಹೊಸನಂಟ್ರಗೆ ಬಂದಾಂಗೆ ಕುಡೆಕೆ ಬೆಂಡದ ನೀರ್ ಕೊಟ್ಟೊ. ಪೀಳ್ಯ ಸಾಸ್ತ್ರಕ್ಕೆ ಬಂದ ನಂಟ್ರ್ ತೋಟ, ಗದ್ದೆ ಕೃಷಿ ಎಲ್ಲಾ ತಿರ್ಗಿ ನೋಡಿ ಕುಸಿ ಆತ್. ಹೆಣ್ಮಕ ಮನೆ ಮೂಲೆ ಮೂಲೆ ಹೋಗಿ ನೋಡ್ರೊ. ಕೆಲವು ಏಣಿಲಿ ಹತ್ತಿ ಅಟ್ಟಕ್ಕೂ ಹೋಗಿ ಬಂದೊ. ಪ್ರಾಯದ ಹೆಣ್ಮಕ ಗೂಡೆನ ಪಕ್ಕಲೆ ಕುದ್ದ್ ಮಾತ್ ಕತೆ ಸುರು ಮಾಡ್ರೊ. ಗೂಡೆನ ಸ್ವರ, ಕೈಕಾಲ್, ಕೂದಲ್, ಕಣ್ಣ್, ಕೆಬಿ ಎಲ್ಲಾ ಸರ್ಜನ್ ಡಾಕ್ಟ್ರ ಪರೀಕ್ಷೆ ಮಾಡ್ದಂಗೆ ಎರ್ಡ್ ಮೂರ್ ಜನ ಸುತ್ತ ಕುದ್ದ್‌ಕಂಡ್ ಮಾತಾಡ್ಕೆ ಸುರು ಮಾಡ್ದೊ. ಗೂಡೆ ಆಗನ ಕಾಲಲಿ ಐದನೇ ಕ್ಲಾಸ್ ಪಾಸಾವುಟು. ಸೋಬಾನೆ ಕಲ್ತ್‌ಟು. ಪುತ್ತೂರು ಪೇಟೆ ಹಕ್ಕಲೆನವು ಆದ ಕಾರಣ ಚುರ್ಕುವುಟ್ಟುಂತ ಗೊತ್ತಾತ್. ಪೀಳ್ಯ ಸಾಸ್ತ್ರ ಮುಗ್ಸಿ ಕೋಳಿ ರೊಟ್ಟಿ ಊಟ ಮಾಡಿ ನಂಟ್ರ್ ಹೊರ್ಟ್ ನಿತ್ತೊ.

ಒಟ್ಟಿಗಿದ್ದ ಊರ್ ಗೌಡ್ರು ಮುಂದೆನ ಕಾರ್ಯ ಹೇಂಗೆಂತ ಕೇಳ್ದೊ. ಎರ್ಡ್ ಕಡೆವು ಸೇರಿ ಕೆಮ್ಮಿಂಜೆ ತಂತ್ರಿಗಳಲ್ಲಿ ಹೋಗಿ ಲಗ್ನ ಪಟ್ಟಿ ತಯಾರಾತ್. ಜಾಕ್ತೆ ತಿಂಗ ಹನ್ನೆರಡ್ ಸೋಮವಾರ ಹಗಲ್ ಗಂಟೆ 10.42 ಜರಗುವ ವೃಷಭ ಲಗ್ನಲಿ ದಾರಾ ಮೂರ್ತ ಕೂಡಿ ಬಂದದೆಂತ ತಂತ್ರಿಗ ಬರ್ದ್ ಕೊಟ್ಟೊ. ಬಲ್ನಾಡ್ ಓಟೆಗುಂಡಿ ಮನೆಲಿ ದಾರಾಕಾರ್ಯ, ಹುಡ್‌ಗನ ಕಡೆವು ದಿಬ್ಬಣ ಹೋಗಿ ದಾರೆ ಆಗಿ ಗೂಡೆನ ಕರ್‌ಕಂಡ್ ಬಾವುದ್‌ಂತ ಬಾಯಿ ಬುಟ್ಟ್ ಹೇಳ್ದೊ. ಬದಿಗಾಗಿ ಲಗ್ನ ನಿತ್ತ್ ಹೋಕ್ಕೆ ಆಗದ್‌ಂತ ನೆಸ್ಸಿ ಗೂಡೆನ ಸೋದರ ಮಾಂವ "ಎಂಕಳೊ ಪೊಣ್ಣಿಗ್ ಐನ್ ಸಾವಿರ ಬದಿ ಕೊರ್ಪೊಂತ:" ಹದ್ರಿ ಹದ್ರಿ ಹೇಳ್ದೊ. ಅದರ ಮೇಲೆ ಹತ್ತ್ ಪವನ್ ಚಿನ್ನ ಕೊಡ್ಬ್‌ಂತ ಗೂಡೆ ಕಡೆವು ಒಪ್ಪಿಗೆ ಕೊಟ್ಟೊ. ಎಲ್ಲವೂ ಅದೇ ದಿನ ಊರಿಗೆ ಬಂದೊ.

ಮೊದ್ವೆಗೆ ಇನ್ನ್ ಬರೀ ಇಪ್ಪತ್ತ ಮೂರ್‌ದಿನ ಉಟ್ಟ್. ಮೊದ್ವೆ ಚಪ್ಪರ ಹಾಕುದು, ಜವುಳಿ ತಾದು, ಚಿನ್ನ ಮಾಡ್ಸುದು ಎಲ್ಲಾ ಬೇಗ ಬೇಗ ಆಕು. ನಂಟ್ರುಗ, ನೆರೆಕರೆವು ಸೇರಿ ಕೆಲ್ಸಗಳ ಮಾಡ್ತಿದ್ದೊ. ಸೋಮಾರ ದಾರೆ ಐತಾರ ಮಧ್ಯಾಹ್ನ ಗಂಡ್‌ನ ಮನೆಲಿ ಮದುರಂಗಿ ಸಾಸ್ತ್ರ, ಐತಾರ ಕತ್ತಲೆಗೆ ಗಂಡ್‌ನ ದಿಬ್ಬಣ ಹೊರ್ಡೊಕು. ಮೊದ್‌ಮಂಜನ ಮಾವನಮಂಜ ಗೋಪಾಲ ಅಡೂಳಿ. ಸಣಪನ ಎರಡನೇ ಮಗ ಕಮಲ ಕಲ್ಸ ಕನ್ನಡಿ ಒಡೆವ ಕಂತಿಮಿ ಗೂಡೆ. ಅಡೂಳಿ, ಕಂತಿಮಿ ಸೇರಿ ನಾಣು ಗೌಡ್ರ ಗಾಡಿಲಿ ಐದ್ ಜನ ಹೋದುಂತ ತೀರ್ಮಾನ ಆತ್. ಬಾಕಿ ಜನಗ ನಡ್ಕಂಡ್ ದಿಬ್ಬಣ ಹೊರ್‌ಟೊ. ಹೆಣ್ಮಕ ಮಕ್ಕಳ ಸಂಕೆ ಬಾರಿ ಕಮ್ಮಿ. ಐತಾರ ಕತ್ತಲೆ ಏಳ್ ಗಂಟೆಗೆ ಮುಂದೆ ಹೊಟ್ಟೆ ತುಂಬಾ ಊಟ ಮಾಡಿ ಕಂಡ್ ದಿಬ್ಬಣ ಲಾಟಾಣಿ ಬೆಳ್ಕ್‌ಲಿ ಹೊರ್ಟೊ. ರಾತ್ರೆ ಹತ್ ಗಂಟೆಗೆ ದಿಬ್ಬಣ ಹಾಲೆಮಜಲಿಗೆ ಎತ್ತಿತ್. ಅಬ್ಲೆಸ ಇದ್ದ ಕೆಲವು ಗಣ್ಮಕ ಗುತ್ತಿಗೆಗೆ ಹೋಗಿ ಹದಲಿ ಸರಾಯಿ ಕುಡ್ದ್ ಬಂದೊ. ಕುಡ್ದರೂ ಯಾರೂ ಕ್ರಮ ತಪ್ಪಿ ಹೋತಿಲ್ಲೆ. ಗಾಡಿಗೆ ಕಟ್ಟಿದ ಲಾಟಾಣಿಲಿ ಎಣ್ಣೆ ಕಮ್ಮಿ ಆವುಟ್‌ಂತ ಹೇಳಿ ಎಣ್ಣೆ ತುಂಬ್ಸಿದೊ. ಎಲಿಮಲೆ, ಕಂದಡ್ಕ. ಸೋಣಂಗೇರಿ ಮಾರ್ಗಲಿ ಹೋಗಿ ಮೂಡ ಬುಡ್‌ಕನ ಜಾಲ್ಸೂರಿಗೆ ದಿಬ್ಬಣ ಮುಟ್ಟಿತ್. ಗಾಡಿನ ಅಲ್ಲಿ ನಿಲ್ಸಿದೊ. ಆಗ ಮಸಿ ಹಾಕಿ ಓಡ್ಸುವ ಬಸ್‌ಗ ಮಂಗ್ಳೂರು ಮಡಿಕೇರಿ ಮಾರ್ಗಲಿ ಸರ್ವಿಸ್ ಹೊಡೆತಿದ್ದೊ. ಮೊದುಮಂಜ ಮತ್ತೆ ಅಗತ್ಯದ ಹತ್ತ್ ಹದಿನೈದ್ ಜನ ಆರ್ ಗಂಟೆ ಬಸ್ಸಿಲಿ ಕುದ್ದ್ ಪುತ್ತೂರಿಗೆ ಮುಟ್ಟಿದೊ. ಅಲ್ಲಿಂದ ನಡ್ಕಂಡ್ ಎಂಟ್‌ವರೆ ಗಂಟೆಗೆ ಗೂಡೆಮನೆಗೆ ತಲ್ಪಿದೊ. ಒಳ್ದವು ಏಳ್ ಗಂಟೆ ಬಸ್ಸಿಲಿ ಪುತ್ತೂರ್‌ಗೆ ಹೋಗಿ ದಾರೆ ಮೂರ್ತಕೆ ಮುಂದೆ ಓಟೆಗುಂಡಿಗೆ ಮನೆಗೆ ಸೇರ್ದೊ.

ಮೂರ್ತಕೆ ಸರಿ ಬಟ್ರ್ ದಾರೆ ಮುಗ್ಸಿದೊ. ಸುಮಾರ್ ಹಕ್ಕಲೆ ಹಕ್ಕಲೆ ಐನೂರು ಆರ್‌ನೂರ್ ಜನ ಮೊದ್ವೆಗೆ ಸೇರ್ಯೊಳೊ. ಮೊದ್ವೆ ಊಟ ಲಾಯ್‌ಕ್ ರುಚಿಕಟ್ಟಾಗಿ ಮಾಡಿದ್ದೊ. ಪಚಾರಕ್ಕೆ ಕುದ್ರಿಸಿದ ಕೂಡ್ಲೆ ಊಟಕ್ಕೆ ನೀರ್ ಕೊಟ್ಟೊ. ಹೆಸ್ರ್ ಪಾಯ್ಸ, ಹೋಳಿಗೆ ತಿಂಬಚ್ಚ್ ಇಕ್ಕಿದೊ. ಆಗನ ಕಾಲಲಿ ಪಚಾರಕ್ಕೆ ದುಡ್ಡ್ ಕಟ್ಟಿದವರ ಹೆಸ್ರ್ ಮತ್ತೆ ಕಟ್ಟಿದ ದುಡ್ಡ್‌ನ ಒಂದು ಕಾಗದಲಿ ಬರ್ಕಂಡ್ ಆದ ಕೂಡ್ಲೆ ಇಸ್ನೊಬ್ಬ ದೊಡ್ಡ ಸ್ವರಲಿ ಎಲ್ಲವುಕೆ ಕೇಳ್ಸ್‌ವಂಗೆ ಕರ್ದ್ ಹೇಳ್‌ತಿದ್ದೊ. ಉದಾ : ಕಾಳ್ಮನೆ ಕಾಳು ಗೌಡ್ರು ಕಾಲ್

ರುಪಾಯೇಂತ ರಾಗಲಿ ಸ್ವರ ತೆಗೆದ್ ಹೇಳ್ತಿದ್ದೊ.

ಊಟ ಆದಾಂಗೆ ಹೆಣ್ಣ್ಳಿ ಮನೆಂದ ಹೊರ್ಡ್‌ಕನ ಗೂಡೆ ಬಾರಿ ಬೇಜಾರ್ಲಿ ಕಣ್ಣೀರ್ ಹಾಕಿಕಂಡ್ ಮರ್ಡ್‌ಕೆ ಸುರುಮಾಡ್ತ್. ಹಿಂದೆನ ಕಾಲಲಿ ಗೂಡೆ ಎಷ್ಟ್ ಮರ್ಪ್‌ಟುಂತ ಹೆಣ್ಮಕ ವಿಚಾರಿಸಿತಿದ್ದೊ. ಕಣ್ಣೀರ್ ಹಾಕದ ಗೂಡೆಗಳ ಬಗ್ಗೆ ಸಂಸಯದ ಕೊಂಕು ಮಾತ್‌ಗ ಹಿಂದೆಂದ ಹೇಳ್ತಿದ್ದೊ. ಈಗ ಕಾಲ ಬದ್ಲಾವುಟ್. ಈಗ ದೊಣ್ಣೆಲಿ ಹೊಡ್ದರೂ ಗೂಡೆಗಳ ಕಣ್ಣಿಲಿ ನೀರ್ ಬಾಕಿಲ್ಲೆ.

ಆ ಸಮಯ ಇಂಗ್ಲೇಂಡ್ ಮತ್ತೆ ಜಪಾನ್ ಯುದ್ದ ನಡೆತಾ ಇತ್ತ್. ಮಂಗ್ಳೂರಿಗೆ ಜಪಾನ್ ದೇಸದವು ಬಾಂಬು ಹಾಕ್‌ವೆಂತ ಸುದ್ದಿ ಹಬ್ಬಿತ್. ಹಾಂಗೆ ಹೆದ್ರಿ ಯಾವ ಬಸ್‌ನವು ಮೂರ್ ದಿನ ಗೇರೇಜ್‌ಂದ ಮಾರ್ಗಕೆ ಇಳ್ತ್‌ಲ್ಲೆ. ಗೂಡೆನ ಸಣಪನ ಮಗ ಮೂರ್ನೆ ಕ್ಲಾಸಿನ ಗೂಡೆ ಜಾನಕಿ ಕುರುಂಟ್‌ಂತ ಒಟ್ಟಿಗೆ ಬಾತ್. ಬಸ್ ಇಲ್ಲದೆ ಎಲ್ಲವೂ ನಡ್ಕಂಡೇ ಹೊರ್‍ಪೊ. ಆ ದಿನ ನಿತ್ತರೆ ಮಾರ್ನೆ‌ದಿನ ಮಂಗ್ವಾರ, ಮಗಳ ಕಳ್‌ಸಿಕೆ ಆಗದ್‌ಂತ ಸಾಸ್ತ್ರ ಉಟ್ಟು. ದಿಬ್ಬಣ ಅಡ್ಡ ದಾರಿಲಿ ಬಂದ್ ಆರ್ಯಾಪುಂದ ಹನಿಯ ಮುಂದೆ ಮಾರ್ಗಕೆ ಸೇರ್‍ದೊ. ದಿಬ್ಬಣ ಕಾವಿಗೆ ಬಾಕನ ನಾಣುಗೌಡ್ರ ದೊಡಪನ ಮಗಳ ಮನೆ ಮಾರ್ಗದ ಕರೆಲಿ ಉಟ್ಟು. ದಿಬ್ಬಣದವುಕ್ಕೆ ಬೆಲ್ಲದ ಪಾನಕ ಮತ್ತೆ ಮೊದು ಮಕ್ಕಳಿಗೆ ಹಾಲ್ ಹಣ್ಣ್ ಕೊಟ್ಟೊ. ಎಲಾಡಿಕೆ ತಿಂದ್ ಮುಂದೆ ಹೊರ್‍ಪೊ. ಪಂಜಿ ಗುಂಡಿ ಕಾಡ್‌ಲಿ ಮಾರ್ಗ ಅತ್ತಂದ ಬಾಕನ ಹತ್ತಿಕಂಡೇ ಬರೊಕು. ಎರ್ಡ್ ತಿರ್ಗಾಸ್ ದಾಟಿ ಮೇಲೆ ಬಾಕನ ಐದಾರ್ ಜನ ಕೈಲಿ ದೊಣ್ಣೆ ಹಿಡ್ಕಂಡ್ ಮಾರ್ಗಕ್ಕೆ ಅಡ್ಡ್ ನಿತ್ತೊಳೊ. ನಾಣು ಗೌಡ್ರ ಎತ್ತಿನ ಗಾಡಿ ಕಾವಿಗೆ ಬಂದ್ ಮೊದ್ ಮಕ್ಕಳ್ ಕರ್ಕಂಡ್ ಒಟ್ಟಗೆ ಬಾತಿತ್. ಒಬ್ಬ ಕೊಂಬ ಮಿಸೆಂವ ಗಾಡಿ ಎದ್ರ್‌ಗೆ ಬಂದ್ ನಿಲ್ಸ್‌ಕೆ ಹೇಳ್ತ್. ಅಪಾಯದ ಅಂದಾಜಾಗಿ ದಿಬ್ಬಣದವು ಹತ್ತ್ ಹನ್ನೆರ್ಡ್ ಹೊಂತಗಾರ ಹುಡ್‌ಗರಿಗೆ ಮುಂದೆನೇ ಸೂಚನೆ ಕೊಟ್ಟು ದೊಣ್ಣೆ, ಕತ್ತಿ ಹತ್ಯಾರ್‌ಗ ಗಾಡಿಲಿ ಇಸಿದ್ದೊ. ಜಿಲ್ಲಾ ಲೈಸನ್ಸ್ ಇರ್‍ವ ನಾಣು ಗೌಡ್ರ ಅಮೇರಿಕದ ರೆಮಿಂಗ್ಟನ್ ಕಂಪೆನಿ ತಯಾರ್ಸಿದ ಜೋಡು ನಳಿಗೆ ತೋಟೆಕೋವಿ ಕೂಡಾ ಇತ್ತ್. ಗಾಡಿ ನಿಲ್ಸದೆ ಮುಂದೆ ಹೋಕನ ಪುಂಡರ್ ಬೀರಿ ಒತ್ತಿ ಹಿಡ್ದ್ ನಿಲ್ಸಿದೊ. ಅಷ್ಟೊತ್ತಿಗೆ ದಿಬ್ಬಣದ ಕಡೆ ಹುಡ್‌ಗರ್ ಗಾಡಿಂದ ಹತ್ಯಾರ್ ತೆಗ್ದ್ ಪುಂಡರ ತಲೆ, ಬೆನ್ನ್‌ಂತ ನೋಡದೆ ದೊಣ್ಣೆಲಿ ಸಮ್ಮಾನ ಕೊಟ್ಟೊ. ಎಲ್ಲವರ ದರೋಡೆ ಮಾಡ್ತಿದ್ದ ಪುಂಡರಿಗೆ ಆ ದಿನ ಸರಿಯಾದ ಪಾಠ ಕಲ್ಸಿದೊ. ಅಷ್ಟೊತ್ತಿಗೆ ಜೋಡು ನಳಿಗೆ ಕೋವಿ ತೆಗ್ದ್ ರಾಮಣ್ಣ ಗೌಡ್ರು ಗಾಳಿಲಿ ಎರ್ಡ್ ಗುಂಡ್ ಹಾರ್ಸಿದೊ. ಪುಂಡರ್ ಹೆದ್ರಿ ಕಾಡ್ ದಾರಿಲಿ ಹುಲ್ಲ್ ಹುಟ್ಟದಂಗೆ ಓಡಿ ಹೋದೊ. ಜಾಲ್ಸೂರು, ಸೋಣಂಗೇರಿ ದಾರಿಲಿ ಹೋಗಿ ಕತ್ತಲೆ ಆರ್ ಗಂಟೆಗೆ ಮುಂದೆ ದಿಬ್ಬಣ ಮನೆಗೆ ಮುಟ್ಟಿತ್. ಆರತಿ, ಸೋಬಾನೆ ಎಲ್ಲಾ ಬೇಗ ಬೇಗ ಮುಗ್ಸಿ ನೆರೆಕರೆವು ಅವರ ಮನೆಗಳಿಗೆ ಹೋದೊ. ಗುಡ್ಡಪ್ಪ ಗೌಡ್ರು ಲಕ್ಷ್ಮಿನ ಮೊದ್ವೆ ಆಗಿ ಸುಕಲಿ ಇದ್ದೊ.

ಪೂಜಾರಿ ನಾರ್ಣಪ್ಪ ಗೌಡ

ನಮ್ಮ ಸೀರಾಡಿ ದೆವ್ವದ ಚಾವುಡಿ ಬ್ರಿಟಿಷರ್ ಬಾಕೆ ಇನ್ನೂರ್ ಮೂನ್ನೂರ್ ವರ್ಸಕೆ ಹಿಂದೆ ಉಟ್ಟ್‌ಂತ ಹಿರಿಯವು ಹೇಳ್ತಿದ್ದೊ. ಹಿಂದೆ ಬಾರೀ ಜನ ಸಂಖ್ಯೆ ಇದ್ದ ಊರ್‌ಂತ ಕಂಡದೆ. ದೆವ್ವದ ಚಾವುಡಿ ಸುತ್ತ ಮುತ್ತ ಬೇಸಾಯದ ಗದ್ದೆ, ಮನೆದಳ, ಬಾಮಿ, ಕಡ್‌ಕಲ್ಲ್, ಕಲ್ಲಿನ ದೊಡ್ಡ ಒಲೆನ ಕುರು ಈಗಳೂ ಕಂಡದೆ. ಆ ಮೇಲೆ ಯಾವುದೋ ದೊಡ್ಡ ಕಾಯಿಲೆ ಹಬ್ಬಿ ಜನ ಮುತ್ತಿದ್ದೊ. ವರ್ಸಕೊಮ್ಮೆ ದೆವ್ವದ ಕೋಲ ನಡೆಕನ ಬೂತ ಕಟ್ಟಿದವ “ಮುನ್ನೂರ್ದ್ ಒಕ್ಕೆಲ್ ಕೂಡ್ ಬತ್ತಂಡಾ ಇಜ್ಜಾಂತ” ಕಟ್ಟ್ ಮಾಡ್ದೆ. ಹಿಂದೆ ಊರ್ ಇದ್ದಲ್ಲಿ ಈಗ ಕಾಡ್ ಬೆಳ್ದ್‌ಟು. ಬ್ರಿಟಿಷರ ಕಾಲಲಿ ಸರ್ವೇ ಆಕನ ಚಾವುಡಿಗೆ ಬುಟ್ಟು ಕೊಟ್ಟ ಜಾಗೆನ ರಿಕಾರ್ಡ್ ಈಗಳೂ ಉಟ್ಟ್.

ಇಲ್ಲಿ ಈಗ ಇರ್‌ವ ಹತ್ತ್ ಕುಟುಂಬ ಹದಿನೆಂಟ್ ಗೋತ್ರಕೆ ಸೇರ್ದ ಗೌಡ ಜಾತಿ ಜನಾಂಗ ಸುಮಾರ್ ಐನೂರ್ ಆರ್‌ನೂರ್ ವರ್ಸಕೆ ಹಿಂದೆ ಹಾಸನ ಕಡೆ ಇರ್‌ವ ಐಗೂರ್ ಸೀಮೆಂದ ಗಟ್ಟ ಇಳ್ದ್ ಬಂದದ್‌ಂತ ಹಿರಿಯವು ಹೇಳ್ತಿದ್ದೊ. ಹಂಗೆ ಬಾಕನ ಸೀರಾಡಿ ದೈವನೂ ತಕಂಡ್ ಬಂದ್ ಸ್ಥಾಪನೆ ಮಾಡಿ ಕೋಲ ಕೊಡ್ತಾವೊಳೊ. ದೆವ್ವ ಕಟ್ಟುವ ಅಜಲ ಜಾತಿಯವು ಅಪ್ಪಂದ ಮೇಲೆ ಮಂಜಂತ ವಾರೀಸ್ ಹಕ್ಕಿನಂಗೆ ದೆವ್ವ ಕಟ್ಟ್‌ತಾ ವೊಳೊ.

ಸುಮಾರ್ ಅರ್‌ವತ್ತ್ ವರ್ಸಕೆ ಹಿಂದೆ ಸೀರಾಡಿ ದೆವ್ವದ ಪೂಜಾರ್ಕೆ ಮಾಡಿಕೆ ಸುಲಬಲಿ ಒಪ್ಪಿಕಂಕೆ ಯಾರೂ ತಯಾರಿಲ್ಲೆ. ಅದ್ ಬೆಂಕಿ ಜೆಂಕಿನಂತ ಕಾರ್ಣಿಕದ ದೆವ್ವ, ಹನಿಯ ಅಸುದ್ದ ಆದರೆ ಕೂಡ್ಲೆ ಅವನ ಮನೆ ಕುಬೋಳ್ಳಿ ಕಿಚ್ಚಿ ಕಾಂಬೊದ್. ದೆವ್ವದ ಮೇಲೆ ಬಕ್ತಿ ಇದ್ದಾಂಗೆ ಭಯ ಇನ್ನೂ ಹೆಚ್ಚಿಗೆ ಇತ್ತ್. ಅಂತೂ ಗ್ರಾಮದ ಗುರಿಕಾರ್ರ್ ಊರ್ ಗೌಡ್ರ್‌ಗ, ಬುದ್ದಿವಂತರ್ ಎಲ್ಲಾ ಸೇರಿ ಹೊಸ ಪೂಜಾರಿನ ಬಿಸುಗೆ ಮುಂದೆ ಹುಡ್ಕಿ ಆಕುಂತ ನಿಗಂಟ್ ಮಾಡ್ದೊ.

ಹಿರಿಯವು ಹೇಳುವ ಕತೆ ಪ್ರಕಾರ ಸೀರಾಡಿ ದೆವ್ವದ ಮುಕ ಚಂದನ ಮರಂದ ಮಾಡ್ದ್ ಈಗಳೂ ಉಟ್ಟು. ಬಾರಿ ಹಳೆ ಕಾಲದ್‌ಂತ ಹೇಳ್‌ವ ಈ ಮುಕನ ಕುಕ್ಕೆ ಸುಬ್ರಹ್ಮಣ್ಯ ದೇವರ ರಥ ಮಾಡ್ದ ಆಚಾರಿ ಮಾಡಿ ಕೊಟ್ಟದ್‌ಂತ ಜನ ಹೇಳ್ವೆ. ಈ ಮುಕ ಯಾಗೋಳು ಬೂತ ಕಟ್ಟುವನ ಮನೆಲಿ ಇರೊಕು. ಒಮ್ಮೆ ಮನೆಲಿ ಯಾರೂ ಇಲ್ಲದ ಸಮಯಲಿ ಬೂತ ಕಟ್ಟುವನ ಮನೆಗೆ ಕಿಚ್ಚಿ ಬಿದ್ದ್ ಮನೆ ಪೂರಾ ಸುಟ್ಟು ಹೋತ್. ಮನೆವು ಬಾಕನ ಎಲ್ಲಾ ಹೊತ್ತಿ ಮುಗ್ದ್‌ಟು. ಮನೆ ಸುಟ್ಟದರ ದೂರಂದ ನೋಡಿ ಯಜ್‌ಮಾನ ದೆವ್ವದ ಮುಕವೂ ಸುಟ್ಟ್ ಹೋತ್‌ಂತ ಗ್ರೇಸಿ ಇನ್ನ್ ಬದ್ಕಿ ಪಲ ಇಲ್ಲೆಂತ ಸಾಯದೇ ಮೇಲ್‌ಂತ ನಿಗಂಟ್ ಮಾಡ್ತ್. ಬಾರಿ ಬೇಜಾರ್ಲಿ ಅಂಗಳಕೆ ಬಂದ್ ನೋಡ್ಕನ ಅಲ್ಲೇ ಇದ್ದ ದೊಡ್ಡ ಹಾಲೆ ಮದ ಕೊಡಿಲಿ ಚಂದನದ ಮುಕ ಕಂಡದೆ. ಮನೆ ಸುಟ್ಟು ಹೋದ ಬೇಜಾರ್ ಮರ್ತ್ ಯಜಮಾನಂಗೆ ಸತ್ತ್ ಹುಟ್ಟಿದಾಂಗೆ ಆತ್. ದೆವ್ವದ ಕಾರ್ಣಿಕಂದ ಮುಕ ಒಳ್ತ್.

ಬಲ್ಲಾಳ ರಾಜರ ಕಾಲಲಿ ಸಂಕ್ರಮಣ ಸಂಕ್ರಮಣ ನಡೆತಿದ್ದ ದೆವ್ವದ ಕೋಲ ಆಮೇಲೆ ವರ್ಸಕೆ ಎರ್ಡ್ ಸರ್ತಿ ನಡ್ಸ್‌ಕೆ ಸುರು ಮಾಡ್ದೊ. ಈಗ ವರ್ಸಕ್ಕೊಮ್ಮೆ ಮಾತ್ರ ಕೋಲ ಕೊಟ್ಟವೆ. ದೆವ್ವ ನಡ್ಸಿಕೆ ಎಲ್ಲವೂ ವಂತಿಗೆ ಕೊಡೊಕು. ಪಟ್ಟಾ ಭೂಮಿ ಇರೊವು ಅಕ್ಕಿ, ಕಾಯಿ, ದುಡ್ಡ್ ಕೊಟ್ಟರೆ ಚಿಪ್ಪೊಕ್ಲ್ (ಗೇಣಿ) ಅರ್ಧ ಸೇರ್ ಅಕ್ಕಿ ಮತ್ತೆ ಒಂದು ಕೋಳಿ ವಂತಿಗೆ ಕೊಡೊಕು. ಪರ ಊರ್‌ನವು ದೆವ್ವಕೆ ಹರ್ಕೆ ಒಪ್ಪುಸ್ಕೆ ಕೋಲದ ದಿನ ಬಂದವೆ. ದನ ಕರ್‌ಗಳಿಗೆ, ಮನೆ, ನಾಯಿ, ಕೊತ್ತಿಗೆ, ಸಣ್ಣ ಮಕ್ಕಳಿಗೆ ಕಾಯಿಲೆ ಬಂದರೆ ದೆವ್ವದ ಹೆಸ್ರ್‌ಲಿ ಪ್ರಾರ್ಥನೆ ಮಾಡಿ ಈಡ್ ತೆಗ್ದಿಸಿರೆ ಗುಣ ಕಾಣ್ತಿತ್ತ್. ನಾಯಿಗೆ ಕಾಯಿಲೆ ಬಂದರೆ ಮನೆ ಯಜ್‌ಮಾನ ತಲೆ ಮೈ ಮಿೊದ್ ಸುದ್ದಲಿ ದೆವ್ವಕೆ ಬೆತ್ತದ ದೊಣ್ಣೆ ಒಪ್ಪಿಸಿನೆಂತ ಹರ್ಕೆ ಹೇಳ್ಕ್‌ಂಡರೆ ಎಂತ ದೊಡ್ಡ ಕಾಯಿಲೆನೂ ಗುಣ ಆತಿತ್ತ್. ಹೊಸ ಮೊದ್‌ಮಕ್ಕ ದೆವ್ವದ ಎದರಿಗೆ ಬಂದ್ ಹರ್ಕೆ ಹೇಳ್ಕಂಡರೆ ಗಂಡ್ ಕೂಸ್ ಹುಟ್ಟಿದ ಎಷ್ಟೊ ಜನಂಗ ವೊಳೊ. ಕಳ್ಳತನ ಮಾಡ್ದವನ ಮೇಲೆ ಹರ್ಕೆ ಹೊತ್ತರೆ ಸಂಕ್ರಮಣ ದಾಟ್‌ಕೆ ಮುಂದೆ ಸುಬ್ಬು ಆವುದು. ಕೋರ್ಟ್ ಕೇಸ್, ಭೂಮಿ ನ್ಯಾಯ, ಮೊದ್ವೆ ಮುಂಜಿ ಇದ್‌ಕೆಲ್ಲ ದೊಡ್ಡ ದೊಡ್ಡ ಹರ್ಕೆ ಹೇಳೊವು ಜೋಡ್ ಹಂದಿ ತಲೆ ಕಡ್ಸ್‌ವೆ. ಇತ್ತೀಚೆಗೆ ಹಕ್ಕಲೆ ಹ್ಕಕಲೆ ಐನೂರ್ ಕೋಳಿ ಮತ್ತೆ ಇಪ್ಪತ್ ಮೂವತ್ತ್ ಹಂದಿ ತಲೆ ಕಡೆಕೆ ಬಂದದೆ. ಬಾರಿ ಹಿಂದೆ ಒಬ್ಬ ಮಾಸ್ಟ್ರ ನನ್ನ ಬೂಮಿ ಮಾರಾಟ ಆಗಿ ಹೋದರೆ ಚಾವುಡಿ ಎದ್ರ್ ಒಂದು ಬಾಮಿ ತೋಂಡ್ಸಿನೆಂತ ಹರ್ಕೆ ಹೊತ್ತ್‌ಕಂಡ ವರ್ಸ ದಾಟ್‌ಕೆ ಮುಂದೆ ಅವರ ಬೂಮಿ ಮಂಜನಾಡಿ ಮೀನ್ ಬೆಲ್ಲ ಮಾರ್ವ ಬ್ಯಾರಿಗಳಿಗೆ ಮಾರಿ ಹೋತ್. ಆ ಬಾಮಿ ಜರ್ದ್ ಬಿದ್ದ ಮೇಲೆ ಈಗ ಇನ್ನೊಬ್ಬ ಯಾವುದೊ ಕೆಲ್ಸಲಿ ಜಯ ಬಂದ ಕಾರ್ಣ ಸ್ವಂತ ಕರ್ಚಿಲಿ ಸಿಮೆಂಟ್ ರಿಂಗ್ ಹಾಕ್ಸಿ ಒಳ್ಳೆ ಬಾಮಿ ತೋಂಡ್ಸಿ ಉಪಕಾರ ಮಾಡಿಟು.

ದೆವ್ವದ ದಿನ ಹಕ್ಕಲೆ ಬಂದಾಂಗೆ ಹೊಸ ಪೂಜಾರಿನ ಹುಡ್ಕ್‌ಕೆ ಸುರು ಆತ್. ಪೂಜಾರ್ಕೆ ಮಾಡಿಕೆ ಸರಿಯಾದ ಜನ ಸಿಕ್ಕಿತಿಲ್ಲೆ. ಒಂದು ವಾರ ಇರ್ಕನ ಊರ್‌ನ ಮೂರ್ ಹೆಸ್ರ್ ಮುಂದೆ ಬಾತ್. ಇವರ್ಲಿ ಒಬ್ಬ ದೊಡ್ಡ ಪೂಜಾರಿ ಮತ್ತೆ ಒಬ್ಬ ಕುಂಟ ಪೂಜಾರಿಂತ ತಕಂಕು. ಬಾಲಣ್ಣ, ರಾಮಣ್ಣ ಮತ್ತೆ ವಾಸಪ್ಪಂತ ಮೂರ್ ಜನಗಳೂ ಸುಮಾರ್ ಮೂವತ್ತ್ರೈದ್ ವರ್ಸಂದ ಐವತ್ತರ ಒಳಗೆನವೂ. ಕಲ್ಲುರ್ಟಿ, ಗುಳಿಗ, ಪಂಜುರ್ಲಿ, ಬೂತಗಳ ಪೂಜಾರ್ಕೆ

ಮಾಡಿ ಗೊತ್ತಿದವು. ಜೀಜದ ಹಣ್ಣಿನ ಸಮಯ ಮನೆಲಿ ಕಾಸಿದ ಸರಾಯ ಬುಟ್ಟರೆ ಗುತ್ತಿಗೆ ಹೋಗಿ ಕುಡ್ಪ್ ದಾರಿಲಿ ಜೀಳ್ವ ಜನಂಗಲ್ಲಿ. ಗುರಿಕಾರ್ರ್ ಜನರ ಸೇರ್ಸಿ ಅಭಿಪ್ರಾಯ ಕೇಳ್ರೊ. ಆಗ ಕಾಗಡೆ ಮನೆ ಕೃಷ್ಣಪ್ಪ ಹೇಳ್ತ್. ನೋಡಿ ಮೇಲೆ ನೋಡ್ಕನ ಎಲ್ಲಾ ಸಜ್ಜನರಂಗೆ ಕಂಡವೆ. ಆದರೆ ನಡುಮನೆ ಬಾಲಣ್ಣ ಕಳ್ದ ವರ್ಸ ಸಮಗಾರ ಕಟ್ಟಿದ ಚರ್ಮದ ಜೋಡ್‌ಲಿ ಪೆಟ್ಟ್ ತಿಂದ ಕಾರಣ ಅಂವ ಬೇಡಂತ ಅವನ ಅಭಿಪ್ರಾಯ ಮುಂದೆ ಇಸಿತ್. ಅಲ್ಲಿದ್ದ ನಾಲ್ಕೈದ್ ಜನ ಪಿಸಯ ನಿಜಂತ ಕೃಷ್ಣಪ್ಪನ ಮಾತ್‌ಗೆ ಒತ್ತ್ ಕೊಟ್ರೊ. ಎರ್ಡ್‌ನೇ ಹೆಸ್ರ್ ರಾಮಣ್ಣಂದ್. ನೋಡ್‌ಕೆ ಎಣ್ಣೆ ಕಪ್ಪು. ಹಣೆಲಿ ಯಾವುದೋ ಪೆಟ್ಟ್ ಬಿದ್ದ್ ಆದ ಗಡಿ ಗುಣ ಆದರೂ ಕಿಣಿ ಬೆರ್ಳ್ ಅಡ್‌ಂಗುವಷ್ಟ್ ಗುಂಡಿ ಕಂಡದೆ. ಗಡ್ಡ ಮೀಸೆ ಹಣ್ಣಾದ್ರೂ ಕಲ್ಲ್‌ನಂತ ಜೀವ. ಅವನ ಪಿಸಯ ಹೇಳಿಕೆ ಕಾದ್‌ಕಂಡ್ ಇದ್ದ ಮೋಹನ ಒಂದು ಗುಟ್ಟು ರಟ್ಟ್ ಮಾಡ್ತ್. ರಾಮಣ್ಣ ಕಳ್ದ್ ಕಾರ್ತಿಂಗಳ್ಲಿ ಮೋಟ ಗೂಡೆನ ಕೈಲಿ ಮಾಯ್ಚಿನ ಸೂಡಿಲಿ ಪೆಟ್ಟ್ ತಿಂದುಟ್‌ಂತ ಬಾಯಿ ಬುಟ್ಟಿತ್. ರಾಮಣ್ಣನ ಹೆಸ್ರೂ ಬಿದ್ದೋತ್. ಈಗ ಅಕೇರಿಗೆ ಒಳ್ದಂವ ವಾಸಪ್ಪ. ವಾಸಪ್ಪ ಬಾರಿ ಶೋಕಿ ಮೊನ್ಸ. ಓಂದೆನ ಕಾಲಲಿ ಮೂರ್ನೆ ಕ್ಲಾಸ್ ಓದಿಟು. ತಾಳ ಮದ್ದಳೆ, ಯಕ್ಷಗಾನ ಆಟಲಿ ಸಣ್ಣ ಸಣ್ಣ ಅರ್ತ ಹೇಳ್ವ ಅಬ್ಬೆಸ ಅವಂಗೆ. ಊರ್ಲಿ ನಡೆವ ಮೊದ್ವೆ ಮನೆಲಿ ಸಾಸ್ತ್ರ ಮಾಡ್ಲಿಕೆ, ಹೇಳಿಕಂಕೆ ಇವನ ನಾಲಿಗೆ ಬಾರಿ ಸಪಾಯಿ. ಸಾವು ಬಂದ ಮನೆಲಿ ಹೆಣ ಕಾಟಕೆ ಇಸಿ ಸ್ವರ್ಗಕ್ಕೆ ಹೇಳಿಕಂಕೆ ಹಂದಿಪಾರ ದುಗ್ಗಣ್ಣನ ಬುಟ್ರೆ ವಾಸಪ್ಪನೇ ಬೇಕು. ಅವನ ಹೆಸ್ರ್ ಪೂಜಾರ್ಮೆಗೆ ಬಾಕನ ಸಭೆಲಿದ್ದ ಹೆಚ್ಚಿನವುಕೆ ಕಬೂಲ್ ಆತ್ಲೆ. ಗುರಿಕಾರ್ರ್ ಸಭೆಲಿ ಕುದ್ದವರ ನೋಡಿ ಅಭಿಪ್ರಾಯ ಕೇಳ್ರೊ. ಸುಮಾರ್ ಎಪ್ಪತ್ತೈದ್ ವರ್ಸದಾಟಿದ ಅಣ್ಣಯ್ಯ ಗೌಡ್ರು ಎದ್ದ್ ನಿತ್ತ್ ಯಾರಿಗೂ ಗೊತ್ತಿಲ್ಲದ ಗುಟ್ಟ್‌ನ ರಟ್ಟ್ ಮಾಡ್ರೊ. ಈ ವಾಸಪ್ಪ ಅಪ್ಪ ಇಲ್ಲದ ತಪ್ಪೆಲಿ ಬಾಳೆಕಿ ಗೂಡೆನ ಕದ್ದ್ ಬಸ್‌ರ್ ಮಾಡಿಟುಂತ ಸತ್ಯ ಹೇಳ್ರೊ. ಅಕೇರಿಗೆ ಮೂರ್ ಜನರ ಹೆಸ್ರೂ ಬಿದ್ದ್ ಹೋತ್. ದೆವ್ವದ ದಿನ ಹಕ್ಕಲೆ ಬಾತ್. ಸಂಕಟ ಬಾಕನ ಎಂಕಟರಮಣಂತ ಗಾದೆನಂಗೆ ಅಕೇರಿಗೆ ಸಭೆಲಿದ್ದ ನಾರ್ಣಪ್ಪನ ಪೂಜಾರ್ಮೆ ಮಾಡಿಕೆ ಒಪ್ಪಿದೊ. ಮಾರ್‌ಣೆ ದಿನ ಪಾಡ್ಯ. ದೇವಸ್ಥಾನಲಿ ಹೂ ತೆಗ್ಗಿ ನೋಡ್ಡಂತ ತೀರ್ಮಾನ ಆತ್. ಬಟ್ರ ದೇಪ್ರೆಗೆ ಮಂಗಳಾರ್ತಿ ಮಾಡಿ ಹೂ ತೆಗ್ದ್ ಲೆಕ್ಕ ಮಾಡಿ ಒಳ್ಳೆ ರೀತಿಲಿ ಕೂಡಿ ಬಂದದೆಂತ ಹೇಳ್ರೊ. ಹೂ ತೆಗ್ಸ್‌ದರ್ಲಿ ಮುಗ್‌ಳಿ ಹೂವು ಬಂದಿತ್‌ಂತ ಮತ್ತೆ ಯಾರೋ ಸುದ್ದಿ ಮಾಡ್ರೊ. ಅಷ್ಟೊತ್ತಿಗೆ ದೆವ್ವ ಕಳ್ದ್ ಮೂರ್‌ತಿಂಗ ಆವುಟ್. ಆ ಪಿಸಯಲಿ ಮತ್ತೆ ಯಾರೂ ಬಾಯಿ ಬುಟ್ಟ್ಲೆ.

ನಾರ್ಣಪ್ಪಂಗೆ ಓದ್‌ಬರ ಇಲ್ಲೆ. ಕೂಲಿ ಕೆಲ್ಸ ಮಾಡಿ ತಿಂಬವ. ಹೆಣ್ಣ್ ಪಾರ್ವತಿ ಮತ್ತೆ ಎರ್ಡ್ ಗಂಡ್, ನಾಕ್ ಹೆಣ್ಣ್ ಮಕ್ಕ, ದೊಡ್ಡ ಗೂಡೆ ನೀಲ ಹನ್ನೆರ್ಡ್ ವರ್ಸಕೆ ಹೂಲೆ ಕಂಡುಟು. ಗಂಡ್ಸ್‌ಗೆ ನಾಲ್ಕಣೆ ದುಡ್ಡ್ ಅರ್ದ ಸೇರ್ ಅಕ್ಕಿ ಸಂಬಳ, ಹೆಂಗ್ಸ್‌ಗೆ ಎರ್ಡಾಣೆ ಸಂಬಳ. ಇದರ್ಲಿ ಆರ್ ಜನ ಜೀವನ ಮಾಡೊಕು. ಕುಡಿದು, ಜುಗಾರಿ ಯಾವ ಕೆಟ್ಟ ಅಬ್ಬೆಸ ಅವಂಗಿಲ್ಲೆ. ಅಂವ ಆತ್ ಅವನ ಕೆಲ್ಸ ಆತ್‌ಂತ ಇರುವ ಸಾದು ಮೊನ್ಸ್. ಪೂಜಾರ್ಮೆ ಸಿಕ್ಕದೆ ಹೋದ ಮೂರ್ ಜನಂಗ ನಾರ್ಣಪ್ಪನ ಪೂಜಾರ್ಮೆ ಕೆಲ್ಸಲಿ ತಪ್ಪು ಹಿಡೆಕುಂತ ಕಾಯುತಾ ಇದ್ರೊ. ಮಾರ್ನೆ ವರ್ಸ ದೆವ್ವಕೆ ಒಂದು ದಿನಕೆ ಮುಂದೆ ಊರ್ನ ದೇವಸ್ಥಾನಕ್ಕೆ ಹೋಗಿ ಕಳ್ಳ ನೀರ್ ಮೀದ್ ಹಣ್ಣುಕಾಯಿ ಮಾಡ್ಸಿ ಬಾತ್. ಕಳ್ಳ ನೀರ್ ಮೀದ ಮೇಲೆ ಅಂವ ಮನೆಲಿ ರಾತ್ರೆ ಮಲ್ಗ್‌ಕೆ ಬೊತ್ತ್. ಕೊಟೆಗೆಲಿ ಒಬ್ಬನೆ ಮಲ್ಗೊಕು. ಅವನೊಟ್ಟಿಗಿರುವ

ಕುಂಟು ಪೂಜಾರಿಗಳೂ ಸುದ್ದಲಿ ಇರೊಕು. ಆ ದಿನ ಮದ್ಯ ರಾತ್ರೆ ಸಮಯಲಿ ಹನಿಯ
ದೂರಂದ ಬೊಬ್ಬೆ ಹೊಡೆದು ಕೇಳ್ಟೆ. ನೋಡ್‌ಕನ ಮುಡ್ಡಿಲ್ ಮಾಡ್ವ ಮಾಂಕು ಅಜಲನ
ಮನೆ ಕಿಚ್ಚಿ ಓಡ್ದ್ ಹೊತ್ತ್‌ತಾ ಉಟ್ಟು. ಎಲ್ಲವೂ ಮನೆ ಸುತ್ತ ನಿತ್ತ್ ಒಳಗೆ ಹೋಗಿ ಒಳಗೆ
ಹೋಗಿಂತ ಹೇಳ್ವೆ. ಆದರೆ ಕಿಚ್ಚಿ ಹೊತ್ತ್‌ವ ಮನೆ ಒಳಗೆ ಹೋಕ್ಕೆ ಯಾರೂ ತಯಾರಿಲ್ಲೆ.
ಏಚಾರ್ಸ್‌ಕನ ಮಾಂಕುನ ಆರ್ ತಿಂಗಳ ಗಂಡ್ ಕೂಸ್ ಒಳಗೆ ತೊಟ್ಟಿಲ್‌ಲಿ ಉಟ್ಟುಂತ
ಗೊತ್ತಾತ್. ಮಾಂಕುನ ಹೆಣ್ಣ್ ಸಂಕ್ರು ಎದೆ ಬಡ್ಕಂಡ್ ಬೊಬ್ಬೆ ಹೊಡೆತುಟ್ಟು. ಇದರ
ನೋಡಿ ನಾರ್ಣಪ್ಪಂಗೆ ತಡೆಕೆ ಆಗದೆ ಸೀರಾಡಿ ದೆವ್ವನ ನೆನ್ಸಿಗಂಡ್ ದೆವ್ವ ಹುಕ್ಕಂಗೆ ಮನೆ
ಒಳಗೆ ಹೋಗಿ ತೊಟ್ಟಗಿಲ್ ಸಮೇತ ಕೂಸ್‌ನ ಹೊರಗೆ ತಾತ್. ಕೂಸ್‌ಗೆ ಏನೂ
ಅಪಾಯ ಆತ್ಲೆ. ಕೂಸ್‌ನ ಮುಕ ನೋಡಿ ಸಂಕ್ರುಗೆ ಹೋದ ಜೀವ ಬಂದಂಗಾತ್. ಮನೆ
ಸುಟ್ಟರೂ ಕೂಸ್ ಒಳ್ತ್‌ಂತ ಹೇಳಿಕಂಡ್ ಎಲ್ಲವೂ ಅವರವರ ಮನೆಗಳಿಗೆ ಹೋದೊ.

ಮಾರ್ನೆದಿನ ಊರ್‌ಲಿ ಪೂಜಾರ್‍ಮೆ ಮಾಡ್‌ವ ನಾರ್ಣಪ್ಪ ಹೊಲಿಯನ ಮನೆಗೆ ಹುಕ್ಕ
ಅಸುದ್ದ ಆವುಟುಂತ ಒಂದು ಹೊಸ ಪುಕಾರ್ ಎದ್ದತ್. ಅಂವ ಪೂಜಾರ್‍ಮೆ ಮಾಡಿಕ
ಬೊತ್ತ್‌ಂತ ದೂರು ಗುರಿಕಾರ್ರಲ್ಲಿಗೆ ಹೋತ್. ಎಲ್ಲ ಇಚಾರ್‌ಸಿದ ಗುರಿಕಾರ್ರ್ ಗೋಪಾಲಯ್ಯನವ್ರ
ಹೇಳ್ದೊ. ನೋಡಿ ಜಾತಿ ಗೀತಿಂತ ದೇವರ್ ಮಾಡ್ದಲ್ಲ. ನಾವೆ ಮನ್ಸರ್ ಮಾಡಿಕಂಡದ್ದ್
ದೆವ್ವ ದೇವ್ರ್‌ಗೆ ಜಾತಿ ಗೊತ್ತಿಲ್ಲೆ. ನೀತಿಲಿ ನಡ್‌ಕಂಡವನ ಮೇಲೆ ಮಾತ್ರ ದೇವ್ರಿಗೆ ಪ್ರೀತಿ
ನಾರ್ಣಪ್ಪ ಅವನ ಜೀವದ ಆಸೆ ಬುಟ್ಟು ಕಿಚ್ಚಿಲಿ ಬೆಂದ್ ಹೋವ ಒಂದ್ ಕೂಸ್‌ನ ಜೀವ
ಉಳ್‌ಸಿ ದೇವ್ರ್ ಮೆಚ್ಚ್‌ವಂತ ಕೆಲ್ಸ ಮಾಡಿಟು. ಅವನ ಕೆಲ್ಸಕೆ ದೇವ್ರು ಸಹಾಯ ಉಟ್ಟು
ಇಲ್ಲೆಂತಾದ್ರೆ ಅವನೇ ಕಿಚ್ಚಿಲಿ ಬಸ್ಮ ಆತಿತ್‌ಂತ ಹೇಳಿ ಒಂದ್ ಗಳಿಗೆ ಕಣ್ಣ್ ಮುಚ್ಚಿ ಕುದ್ದೊ
ಈ ಮಾತ್‌ನ ಎಲ್ಲವೂ ಅರ್ತ ಮಾಡಿಕೊಂಕುಂತ ಹೇಳಿ ದೊಡ್ಡ ಆಪತ್‌ಂದ ಬಚಾವ್
ಮಾಡ್ದೊ. ಪುಕಾರ್ ತೆಗ್ದೊವು ಬಾಯಿ ಮುಚ್ಚಿ ಹೋದೊ.

ನಾರ್ಣಪ್ಪ ಪೂಜಾರ್‍ಮೆ ಮಾಡ್ದು ನಾಲ್ಕು ಹೋಗಿ ಐದ್‌ನೇ ವರ್ಸ, ಆ ವರ್ಸ ಹರ
ಕೊಡ್‌ಕೆ ಹಂದಿ ಕೋಳಿ ವರ್ಸಂದೊಳು ಹೆಚ್ಚಿ ಸೇರಿಟು. ಹೇಂಗಾರ್ ಮಾಡಿ ನಾರ್ಣಪ್ಪನ
ತಪ್ಪುಲಿ ಓಡೆಕುಂತ ಪ್ರಯತ್ನ ಆತಾ ಇತ್ತ್. ದೆವ್ವದ ಸಕ್ತಿಂದ ಅವನ ಕೂದಲ್ ಮೆದ್ಸ್‌ಸ್‌ಕೆ
ಸಾದ್ಯ ಆತಿಲ್ಲೆ. ಅಂವ ಕೆಲ್ಸಲಿ ಅಷ್ಟ್ ಕಟ್ಟ್ ನಿಟ್ಟ್. ಆ ವರ್ಸ ಅಡ್ಕದ ಪರಮೇಶ್ವರನ ಹಂದಿ
ತಲೆ ಕಡೆಕನ ಕತ್ತಿ ಜಾರಿ ಹೋಗಿ ಕೈ ಪಾರೆಕಡೆ ಹನಿಯ ಹೆಚ್ಚಿಗೆ ಕ್ಯೊದ್ ಹೋತ್. ಬಂದ
ಹತ್ತ್ ಹಂದಿಗಳ್ಲಿ ಅದೇ ದೊಡ್ಡದ್. ತೂಗಿರೆ ಮೂರ್ ಮಣಂದ ಹೆಚ್ಚಿ ಆವುದ್. ಇದೇ
ಕಾರಣ ಓಡ್ಕಂಡ್ ಪೂಜಾರಿನ ದೂರ್‌ಕೆ ಸುರು ಮಾಡ್ದೊ. ದೊಡ್ಡ ಹಂದಿ ತಲೆ ಯಾಗೋಳು
ಬೂತ ಕಟ್ಟುವಂಗೆ ಹೋವ ಕ್ರಮ. ಪೂಜಾರಿ ಮತ್ತೆ ಬೂತ ಕಟ್ಟಂವ ಸೇರಿ ಕಂಡ್ ಹಂದಿ
ತಲೆ ಕಡೆಕನ ಮೋಸ ಮಾಡ್‌ವೆಂತ ಹೇಳಿಕೆ ಸುರು ಆತ್. ಹಂದಿ ಮಾಸದ ಆಸೆಲಿ ಹಂಗೆ
ಮಾಡೊವು ಓಂದೆ ಕೂಡ ಇದ್ದೊಂತ ಕೆಲವು ಜನ ಅದಕ್ಕೆ ಒತ್ತ್ ಕೊಟ್ಟೊ. ಬೇಜಾರಾಗಿ
ದೆವ್ವ ಕಳ್ದ್ ಒಂದು ವಾರಲಿ ನಾರ್ಣಪ್ಪ ಯಾರೂ ಬುದ್ದಿ ಹೇಳ್ರೂ ಕೇಳದೆ ಸತ್ಯವಂತರಿಗೆ
ಇದ್ ಕಾಲ ಅಲ್ಲಂತೇಳಿ ಪೂಜಾರ್‍ಮೆ ಬುಟ್ಟತ್. ಊರ್‌ನವು ಹೊಸ ಪೂಜಾರಿನ ಹುಡ್ಕುತಾ
ವೊಳೊ.

ದನಮಕ್ಕ ಮತ್ತೆ ಗೊಡ್ಡಿಕಡ್ಸ್.

ಐವತ್ ಅರ್ವತ್ ವರ್ಸಕೆ ಹಿಂದೆ ಎಲ್ಲಾ ಮನೆಗಳ್ಲಿ ಹಟ್ಟಿ ತುಂಬಾ ದನಕರ್‌ಗ. ಏನಿಲ್ಲೇಂತಾದ್ರೂ ಎರ್ಡ್ ಮೂರು ಕರ್ಬುಡ್‌ವ ಹಸ್‌ಗ ಮೂರು ನಾಕ್ ಜೊತೆ ಗದ್ದೆ ಹೂಡುವ ಎತ್ತ್‌ಗ, ಹೋರಿಗ, ಕಡ್ಸ್‌ಗ, ಕರ್‌ಗ ಹಟ್ಟಿ ತುಂಬಾ ಕಾಂಬೊತಿದ್ದೊ. ಈಗನಾಂಗೆ ದನಗಳ ಕಟ್ಟಿ ಹಾಕಿ ಸಾಂಕ್‌ವ ಕ್ರಮ ಇತ್ಲೆ. ಎಲ್ಲವೂ ದನಗಳ ಹಟ್ಟಿಂದ ಬಾಗಲ್ ತೆಗ್ದ್ ಬುಟ್ಟರೆ ಕತ್ತಲಾಕನ ಕೂಡ್‌ಕೆ ಅವೇ ಬಾತಿದ್ದೊ. ಹುಲಿಗಳ ಅಪಾಯ ಇದ್ದ ಕಾರ್ಣ ಎಲ್ಲಾ ಮನೆಗಂಳ್ದ ಒಬ್ಬೊಬ್ಬ ದನ ಮೇಸಿಕೆ ಗುಡ್ಡೆಗೆ ಹೋತಿದ್ದೊ. ಹಿಂಬೊತಿಗೆ ಎಲ್ಲಾ ದನಗಳ ಲೆಕ್ಕ ಮಾಡಿ ಹಟ್ಟಿ ಪಡಿ ಹಾಕ್‌ತಿದ್ದೊ.

ನಮ್ಮ ಸೋದರ ಮಾಂವ ತ್ಯಾಂಪಣ್ಣನವರ ಹಟ್ಟಿಲಿ ತುಂಬಾ ದನಗ ಇದ್ದೊ. ಆ ಗ್ರಾಮಲೇ ಅವರ್ದ್ ದೊಡ್ಡ ಹಟ್ಟಿ. ನಂಗೆ ಏಳೊ ಎಂಟೋ ವರ್ಸ ಪ್ರಾಯ, ಮೂರ್ನೆ ಕ್ಲಾಸಿಲಿ ಕಲೆತಿದ್ದೆ. ಎದ್ರ್ ಬೆಂಚಿಲಿ ಕುದ್ರ್‌ವ ಜಾಗ ನಂಗೆ ಸಿಕ್ಕಿತ್. ಕ್ಲಾಸಿಲಿ ದೇವಕಿ ಗೂಡೆ ಮತ್ತೆ ನಾವು ಮೂರ್ ಜನ ಹೈದಂಗ, ಅದರ್ಲಿ ಒಬ್ಬ ಹಾರಂವ. ಅಪ್ಪಂಗೆ ಜುಟ್ಟು ಇದ್ದರೂ ಮಂಜ ಹಟ ಮಾಡಿ ಜುಟ್ಟು ಕತ್ರ್‌ಸಿ ಕುರೋಪು ಹಾಕಿಕಂಡ್ ಸಾಲೆಗೆ ಬಾತಿತ್. ಅಂವ ತಲೆಗೆ ಹಾಕಿದ ಎಳ್ಳೆಣ್ಣೆ ಬಿಸಿಲಿಗೆ ಕಾಗಡೆ ಗಡ್ಡದವರೇಗೆ ಅರ್ದ್ ಬಾತಿತ್.

ದಸರ ರಜೆಲಿ ಮಾವನ ಮನೆಗೆ ವರ್ಸ ವರ್ಸ ಹೋತಿದ್ದೊ. ಅಲ್ಲಿಗೆ ಹೋದರೆ ವಾಪಾಸ್ ಬಾಕೆ ಮನ್ಸ್ ಬಾತಿತ್ಲೆ. ಅಜ್ಜಿ ಕೈಯಿಂದ ಸಿಕ್‌ತಿದ್ದ ತಿಂಡಿಗಳ ನೆನ್ಸಿರೆ ಈಗಳೂ ಬಾಯಿಲಿ ನೀರ್ ಬಂದದೆ. ಹಗಲ್ ಹೊತ್ತಿಲಿ ಮನೆ ಎದ್ರ್ ಇದ್ದ ಹಳ್ಳಲಿ ಮಿಯೊದ್ ಮತ್ತೆ ದನ ಮೇಸುವ ಚೆನ್ನಪ್ಪನೊಟ್ಟಿಗೆ ದನಗಳೊಟ್ಟಿಗೆ ಗುಡ್ಡೆಗೆ ಹೋದು ಬಾರಿ ಕುಸಿ ಆತಿತ್. ಚೆನ್ನಪ್ಪ ಹೈದಂಗೆ ಹದಿನೈದ್ ಹದಿನಾರ್ ವರ್ಸ ಆವುಟು.

ಬೆಳಿಗ್ಗೆ ರಾಗಿ ಅಂಬುಲಿ ಮೊಸರ್ ಉಂಡ್ ಇಪ್ಪತ್ತೈದ್ ನಡೆ ದನಗಳ ಹೊಡ್ಕಂಡ್ ದೊಡ್ಡ ಕಾಡ್ ಕರೆಲಿರುವ ಅಡ್ಕಕ್ಕೆ ದಿನಾಲೂ ಹೋಕು. ಅಲ್ಲಿ ಏನಿಲ್ಲೆಂದ್ರೂ ಇನ್ನೂರು, ಮುನ್ನೂರು ದನಗಳಿಗೆ ಮೇಯುವಷ್ಟು ಜಾಗ ಇತ್ತ್. ಚಿನ್ನಪ್ಪ ಹೈದ ಮದ್ಯಾಹ್ನದ ಊಟಕ್ಕೆ ಕದಳಿ ಬಾಳೆಲೆ ಬಾಂಡ್‌ಸಿ, ಬಿಸಿ ಅನ್ನ ಮತ್ತೆ ಮೊಸರ್ ಹಾಕಿ ಮೇಲೆ ಎರ್ಡ್ ತುಂಡು ಹೊಟ್ಟುಳಿ ಉಪ್ಪಿನ ಕಾಯಿ, ಬುತ್ತಿಕಟ್ಟಿ ಕಂಡ್ ಹೋತಿತ್ತ್.

ದನಗಳ ಹೊಡ್ಕಂಡ್ ಅಡ್ಕಕೆ ಮುಟ್ಟ್‌ಕನ ಸುಮಾರ್ ಹನ್ನೊಂದ್ ಗಂಟೆ ಆತಿತ್. ದಾರಿಲಿ ಮೇದ್‌ಕಂಡ್ ಬಂದ ದನಗ ಒಸಿ ಹೊತ್ತ್ ಅಡ್ಕಲಿ ಮೇದ್ ಮರದ ನೆರ್‌ಳ್‌ಲಿ ಮಲ್ಗಿ ಮೇಕೆ ಕಡೆಕೆ ಸುರು ಮಾಡ್ವೆ. ಬೇರೆ ಬೇರೆ ಮನೆಗಳ್‌ಂದ ಮೇಯುಕೆ ಬಂದ ದನಗಳ್‌ಲಿ ಕೆಲವು ಜಿತ್ತಿನ ದೊಡ್ಡ ದೊಡ್ಡ ಹೋರಿಗ ಇದ್ದೊ. ಅವು ಬಾಕನ ಪರ್ಲಾಂಗ್ ದೂರದಂಳೇ ಗುಟ್ರ್ ಹಾಕಿಕಂಡ್ ನೆಲ ಪರ್ಡಿಗೆಳ್‌ಕಂಡ್ ಬಾತಿದ್ದೊ. ಬೇರೆ ಹೋರಿಗ ಹಕ್ಕಲೆ ಸಿಕ್ಕಿರೆ ಮಲ್ತ್ ನಿಲ್ಲುದು ನೋಡ್‌ಕನ ಹೆದ್ರಿಕೆ ಆತಿತ್ತ್. ಕೆಲವು ಸರ್ತಿ ಇಂತ ಜಿತ್ತಿನ ಹೋರಿಗ ಹನಿಯ ಹೊತ್ತ್ ಮಲ್ತ್ ನಿತ್ತ್ ಸಮಯ ಸಾಧಿಸಿ ತಲೆ ಹಾಕಿಕಂಕೆ ಸುರು ಮಾಡ್ವೆ. ಕೆಲವು ಗರ್ವದ ಹೋರಿಗ ಕೊಂಬಿಲಿ ಒಂದಕ್ಕೊಂದ್ ಹಾದ್‌ಕಂಡ್ ಸೋಲ್ಸಿ ಓಡ್ಸಿಕೆ ನೋಡ್ತಿದ್ದೊ. ಸಮಬಲದ ಹೋರಿಗಾದರೆ ಸೋಲ್ ಗೇಲ್‌ಗೆ ಒಂದೊಂದ್ ಗಂಟೆ ಹಿಡಿತಿತ್ತ್. ಇಂತ ಹೋರಾಟಲಿ ಕೈ ಕಾಲ್ ಮುರ್ಕಂಡವೂ ಇದ್ದೊ. ಕೆಲವು ಹೋರಿಗಳ ಕೊಂಬು ಮುರ್ದ್ ತುಂಡಾತಿತ್ತ್. ಮಾಂವನ ಗುಂಡ ಹೋರಿ ಎತ್ತರ ಮತ್ತೆ ಒಳ್ಳೆ ಗಟ್ಟಿ ಮುಟ್ಟಾಗಿತ್ತ್. ಸಾಮಾನ್ಯ ಅದ್ ಯಾವ ಹೋರಿಗಳ ತಂಟೆಗೆ ಹೋತಿತ್ಲೆ. ಆದರೆ ಗ್ರಾಚಾರ ಹಿಡ್ದ್ ಯಾವುದಾರು ಹೋರಿಗ ಹಾಯಕ್ಕೆ ಬಂದರೆ ಅವರ ಹೊಟ್ಟೆ ಬೆನ್ನಿಗೆ ಕೊಂಬಿಲಿ ಹಾದ್ ಕುತ್ತಿ ಓಡ್ಸಿ ಬುಡ್ತಿತ್ತ್. ಗುಂಡ ಹೋರಿ ಅರ್ದ ಹೊಟ್ಟೆ ತುಂಬಿದ ಮೇಲೆ ಜೋಡಿಗೆ ಬಂದ ಕಡ್ಸ್‌ಗಳ ಹಿಂದೆ ಮುಂದೆ ಸಮಯ ಕಳೆತಿತ್ತ್. ಗುಂಡ ಹಕ್ಕಲೆ ಇರ್ಕನ ಯಾವ ಹೋರಿಗಳೂ ಹಕ್ಕಲೆ ಬಾಕೆ ದೈರ ಇತ್ಲೆ. ಈ ಹೋರಿ ಕುಲ್ಕುಂದ ಜಾತ್ರೆಂದ ತಂದ ಹಾಸನದ ಹಸ್‌ನ ಕರ್‌ಂತ ಹೇಳ್ತಿದ್ದೊ.

ಮನೆ ಹಟ್ಟಿಲಿದ್ದ ಎಲ್ಲಾ ದನಗಳಿಗೂ ಮೊನ್ಸ್‌ರಾಂಗೆ ಹೆಸ್ರ್ ಇತ್ತ್. ಹೆಸ್ರ್ ಹಿಡ್ದ್ ಕರ್ದರೆ ಅವು ತಲೆ ಎತ್ತಿ ನೋಡ್ತಿದ್ದೊ. ಕಬುಲೆ, ಮೈರೆ, ಬೆಳ್ಳೆಚ್ಚಿ, ಗಂಗೆ, ಕೆಂಪಿ, ಕಾಳಿ, ಗೋಪಿ ಇವು ಸಾಮಾನ್ಯ ಹಸ್‌ಗಳ ಹೆಸ್ರ್. ಕೆಂಪಯ್ಯ, ಬೆಳ್ಳಿ, ಮೈರ, ರಾಮ, ಮಂಗಳ ಇವು ಎತ್ತ್‌ಗಳ ಹೆಸ್ರ್. ದನ ಮೇಸುವ ಎಂಟ್ ಹತ್ತ್ ಹೈದಂಗ ಅಡ್ಕಲಿ ಸೇರಿ ಮದ್ಯಾನದವರೇಗೆ ದನ ಮೇಸಿ ಹಕ್ಕಲೆ ಇದ್ದ ಹಳ್ಳಲಿ ನೀರ್ ಕುಡ್ಸಿ ನೆರ್ಳ್‌ಲಿ ದನಗಳ ಬುಟ್ಟು ಮನೆಂದ ತಂದ ಬುತ್ತಿನ ಬಿಚ್ಚಿ ಉಂಬೊತಿದ್ದೊ. ಒಮ್ಮೊಮ್ಮೆ ಕುಸಾಲ್‌ಲಿ ಒಬ್ಬನ ಬುತ್ತಿ ಮತ್ತೊಬ್ಬ ಉಂಬೋದ್, ಬುತ್ತಿನ ಅಡ್‌ಂಗ್ಸಿ ಇಸುದು ನಡೆತಿತ್ತ್. ಏನೇ ಆದ್ರೂ ಅವರ್ಲಿ ಜಗಳ ಬಾತಿತ್ಲೆ. ದನ ಮೇಸಿಕೆ ಗುಡ್ಡೆಗೆ ಬಾಕನ ಹಕ್ಕಿ ಹೊಡೆವ ಬಿಲ್ಲ್ ತಾತಿದ್ದೊ. ಬಿಲ್ಲ್ ಕಲ್ಲ್‌ಲಿ ಗುರಿ ಹೊಡೆದರ್ಲಿ ಪಳ್ಗಿದ ಹುಡುಗರ್ ಗಿಡ್‌ಗ, ಹೊಟ್ಟಿ, ಚೋರೆಗಳ ಹೊಡ್ದ್ ಬೀಳ್ಸ್ತಿದ್ದೊ. ಕೊಂದ ಹಕ್ಕಿಗಳ ಕಿಚ್ಚಿಲಿ ಬೇಸಿ ತಿಂಬೊತಿದ್ದೊ. ಹಕ್ಕಿಗಳ ಕಿಚ್ಚಿಗೆ ಹಾಕಿ ಬೇಸ್‌ಕನ ಹಕ್ಕಿ ತೊಡೆಂದ ಎಣ್ಣೆ ಹೊರ್ಟ್ ಪಟಪಟ ಸಬ್ದ ಬಾತಿತ್ತ್. ಆಗ ಮಾಸ ಬೆಂದುಟುಂತ ಕಿಚ್ಚಿಂದ ತೆಗ್ದ್ ತಿಂಬೊತಿದ್ದೊ. ಇದ್ ಮೆಣ್ಸ್ ಹಾಕಿದ ಮಾಸಂದಳೂ ಹೆಚ್ಚಿಗೆ ರುಚಿಂತ ಅವರ ಮಾತಿಲಿ ಅರ್ತ ಆತಿತ್ತ್.

ಮದ್ಯಾನ ಊಟ ಮಾಡಿ ಹಳ್ಳದ ನೀರ್ ಕುಡ್ದ್ ಮರದ ನೆರ್ಳ್‌ಲಿ ಕುದ್ದ್‌ಕಂಡ್ ಕೊಳಲ್ ಊರ್ಗುವ ಪಂತ ನಡೆತಿತ್ತ್. ಓಟೆಂದ ಮಾಡ್ದ್ ಕೊಳಲ್‌ಲಿ ಅವರ್ದೇ ಸ್ವರ ರಾಗಲಿ ಊರ್ಗುದರ ದೂರಂದ ಕೇಳೊವ್ರುಕೆ ಬಾರಿ ಕುಸಿ ಆತಿತ್ತ್. ಬಿಸ್‌ಲ್ ಕಮ್ಮಿ ಆದ ಮೇಲೆ ದನ ಮೇಸುವ ಎಲ್ಲಾ ಹೈದಂಗ ಕುಟ್ಟಿದೊಣ್ಣೆ ಆಡಿಕೆ ಸುರ್‌ಮಾಡ್ವೆ. ಕುಟ್ಟಿದೊಣ್ಣೆ ಆಟಕೆ ಬೇಕಾದ್ದ್ ಹತ್ಯಾರ್ ಎರ್ಡ್ ಮಾತ್ರ. ಒಂದುವರೆ ಮೊಳ ಉದ್ದದ ಒಂದು ಇಂಚ್ ತೋರದ ಕಟ್‌ಗರ ಮರದ ಕೋಲು. ಇನ್ನೊಂದು ನಾಲ್ಕ ಅಂಗ್ಲ ಉದ್ದದ ಅಷ್ಟೆ ತೋರದ ಒಂದು ಕುಟ್ಟಿ. ಹಾಂಗೆ ಈ ಆಟಕೆ ಕುಟ್ಟಿ ದೊಣ್ಣೆಂತ ಹೆಸರ್ ಬಾತ್. ಈ ಆಟ ನಮ್ಮ ಈಗನ ಕಾಲದ ಹೋಕಿ ಆಟದ ಮೂಲ ರೂಪಂತ ಕಂಡದೆ. ಈ ಆಟಲಿ ಗುರ್ತ್ ಮಾಡ್ದ ಒಂದು ಜಾಗೆಲಿ ಒಬ್ಬ ಕುಟ್ಟಿನ ಬರಲಿ ದೊಣ್ಣೆ ಓಡ್ದ್‌ವಂಗೆ ಹೊಡ್ದ್‌ದೆ. ಆಗ ದೊಣ್ಣೆ ಹಿಡ್ದಂವ ಎಲ್ಲಾ ಸಕ್ತಿ ಹಾಕಿ ಕುಟ್ಟಿನ ದೂರಕೆ ಹೊಡೆಕು. ಕುಟ್ಟಿ ಬಿದ್ದ ಜಾಗೆಂದ ದೊಣ್ಣೆಲಿ ಅಳ್ತೆ ಮಾಡಿ ಇಂತಿಸ್ಟ್ ಕೋಲ್‌ಂತ ಲೆಕ್ಕ ಹಾಕಿ ಸೋಲ್, ಗೇಲ್ ನಿಗಂಟ್ ಆತಿತ್ತ್. ಈ ಆಟಲಿ ಒಂದು ಅಪಾಯ ಕೂಡಾ ಉಟ್ಟು. ದೊಣ್ಣೆಲಿ ಹೊಡ್ದ್ ಕುಟ್ಟಿ ಗುರಿತಪ್ಪಿ ಎದ್‌ರ್‌ನವನ ಕಂಣ್‌ಗೆ ತಾಂಗಿ ದೃಷ್ಟಿ ಕಳಕಂಡ ದನ ಮಕ್ಕಳೂ ಇದ್ದೊ. ಜಾಗ್ರತೆಲಿ ಆಡ್ರೆ ಅಪಾಯ ಕಮ್ಮಿ. ಅಬ್ಬೆಸ ಇದ್ದೊವ್ರುಕೆ ತೊಂದರೆ ಆಕಿಲ್ಲೆ.

ದನ ಮಕ್ಕ ಅಲ್ಲಿದ್ದ ಚಾಗಟೆ ಮರದ ಗೆಲ್ಲ್‌ಗೆ ನಾರ್ಕಣೆ ಬೊಳ್ಳಿ ಕಟ್ಟಿ ಉಜ್ಜಾಲ್ ಆಟ ಆಡ್ತಿದ್ದೊ. ಹಿಂಗೆ ಒಮ್ಮೆ ಉಜ್ಜಾಲ್ ತೂಗ್‌ಕನ ಬಳ್ಳಿ ತುಂಡಾಗಿ ಕುದ್ದವ ನಾಕ್ ಮಾರ್ ದೂರಲಿರುವ ಮೊಗ್ಗರೆ ಮುಳ್ಳಿನ ಬಲ್ಲಗೆ ಬೀತ್. ಎದ್ರಿಕೆ ಬೊತ್ತಾದೆ ಕೈ ಕಾಲ್ ಹೊಡೆಕನ ಅಲ್ಲಿಗೆ ಬಂದ ಹೈದಂಗ ಅವನ ಬಲ್ಲೆಂದ ಎತ್ತಿತಂದ್ ಅಡ್ಕಲಿ ಮಲ್ಗ್‌ಸಿದೊ. ನೋಡ್‌ಕನ ಅಂಡಿಲಿ ನಾಕ್, ಬೆನ್ನಿಲಿ ಪಳೆಂಟ್ ಮೊಗ್ಗರೆ ಮುಳ್ಳು ಎರಡ್ ಇಂಚನಷ್ಟ್ ಕುತ್ತಿ ಹೋವ್ರುಟು. ಬಾರಿ ಗರ್ವದ ಹೈದ ಆದ ಕಾರ್ಣ ಕಣ್ಣ್‌ಲಿ ಒಂದು ಬೊಟ್ಟು ನೀರ್ ಇಳ್ತಿಲ್ಲೆ.

ಒಮ್ಮೆ ಕರಿಯಪ್ಪಜ್ಜನ ಹೋರಿ ಕರ್ ಕಾಣೆ ಆತ್. ದನ ಮಕ್ಕ ಕತ್ತಲೆ ಮುಟ್ಟ ಹುಡ್ಕಿರೂ ಕರ್ ಪತ್ತೆ ಆತ್ಲೆ. ಕರ್ ತಪ್ಪಿಸಿದ ವಿಸಯಲಿ ಒಬ್ಬೊಬ್ಬ ಒಂದೊಂದು ಕಾರಣ ಹೇಳ್ತಿದ್ದೊ. ಅಜ್ಜಂಗೆ ಕರ್‌ನ ಹುಲಿ ಹಿಡ್ದ್ ಬುಟ್ಟುಟುಂತ ಸಂಸಯ. ಹಿಂಬೊತ್ ಮೂರ್‌ಗಂಟೆ ವರೇಗೆ ಕರ್ ಮೇಯ್ದುದರ ದನ ಮಕ್ಕ ನೋಡ್ದ್ಯೊಳೊ. ಮಾರ್ಣೆ ದಿನ ಹತ್ತಿಪ್ಪತ್ತ್ ಜನ ಕತ್ತಿ, ಕೋವಿ ದೊಣ್ಣೆ ತಕ್ಕಂಡ್ ಕರ್‌ನ ಹುಡ್ಕ್‌ಕೆ ಹೊರ್ಟೊ. ದನ ಮೇವ ಮಾಮೂಲ್ ಅಡ್ಕಂದ ಮುಂದೆ ದೊಡ್ಡ ಕಾಡ್. ವರ್ಸಲಿ ಒಂದೆರ್ಡ್ ಸರ್ತಿ ಹುಲಿ ಮರ್ಗ್‌ದು ಕೇಳ್ತ್‌ತಿತ್ತ್. ಆದರೆ ಅಷ್ಟರವರೇಗೆ ದನಗಳಿಗೆ ಅಪಾಯ ಆತಿಲ್ಲೆ. ಕಾಡ್‌ಲಿ ಮದ್ಯಾನದವರೇಗೆ ತಿರ್ಗಿರೂ ಕರ್‌ನ ಪತ್ತೆ ಆತ್ಲೆ. ಕಾಡ್ಲಿ ತಿರ್ಗಿ ಎಲ್ಲವ್ರುಕೂ ಬೊಚ್ಚಿ ಹೋವ್ರುಟು. ಅಲ್ಲೆ ಇದ್ದ ಒಂದು ಗುಂಡಿಂದ ನೀರ್ ಕುಡ್ದ್ ಕರೆಲಿ ಒಂದು ದೊಡ್ಡ ಬಿದ್ದ ಹೆಬ್ಬಲ್ಲಿನ ಮರದ ಮೇಲೆ ಕುದ್ದೊಳೊ. ಅಷ್ಟೊತ್ತಿಗೆ ಮರದ ಮೇಲೆಂದ ಕುರೆಗ ಜೋರ್‌ಲಿ ಮರ್ಲ್‌ಕೆ ಸುರು ಮಾಡ್ಡೊ. ಕುರೆಗ ಮರ್ಲರೆ ಹುಲಿ ಹಕ್ಕಲೆ ಉಟ್ಟುಂತ ಸೂಚನೆ. ಎಲ್ಲವೂ ಎದ್ದ್ ಅಡ್ಕದ ಕಡೆಗೆ ಹೋರ್ಟೊ. ಇವರ ಗ್ರಾಚಾರ ಸರಿ ಇತ್ಲೆ. ನಾಕ್ ಹೆಜ್ಜೆ ಮುಂದೆ ಹೋಕನ ದೊಡ್ಡ ಬೂದ್‌ರ್ ಮರದ ಬುಡಲಿ ಮರಿಗಳೊಟ್ಟಿಗೆ ಇದ್ದ ಹೆಣ್ಣ್ ಹುಲಿ ಎದ್ರ್‌ಗಿದ್ದ ಆನಂದನ ಮೇಲೆ ಹಾರ್ತ್. ಒಟ್ಟಿಗೆ ಇದ್ದ ಮೂರ್‌ನಾಕ್ ಬೇಟೆ ನಾಯಿಗ ಹುಲಿನ ನೋಡಿ ಕಚ್ಚೆ

ಬೀಲ ಕಟ್ಟಿಕಂಡ್ ಜನಗಳ ಕಾಲ್‌ಸೆರೆಗೆ ಹುಗ್ಗ್‌ಕೆ ಬಂದವೆ. ಹುಲಿ ಹಾರ್‌ದ ಬರಕ್ಕೆ ಆನಂದ ತಲೆಗೆ ಕಟ್ಟಿಕಂಡಿದ್ದ ಮೂರ್ ಮೊಳದ ಚಾಲ್ಯರ ಬೈರಾಸ್ ಹುಲಿ ಬಾಯಿಗೆ ಸಿಕ್ಕಿತ್. ಸಿಟ್ಟಿಲಿ ಹುಲಿ ಬೈರಾಸ್‌ನ ಕಚ್ಚಿಕಂಡ್ ದೂರ ಹೋತ್. ಹೆದ್ರಿದ ಜನಂಗ ಆನಂದನ ಬಿದ್ದಲ್ಲಿಂದ ಎದ್ರ್ಸಿ ನಿಲ್ಸಿದೊ. ಕೇಪಿನ ಕೋವಿ ಕೈಲಿದ್ದ ಗೋಪಾಲಣ್ಣಂಗೆ ಕಣ್ಣ್‌ಕತ್ತಲೆ ಬಂದಾಂಗಾಗಿ ಕುದ್ರೆ ಎಳೆಕೆ ಮರ್ತ್ ಹೋಗಿ ಮೂರು ಸರ್ತಿ ಕಳ್ಳಂಗೆ ಕೈ ಹಾಕಿರೂ ಗುಂಡು ಹೊರ್ಟತಿಲ್ಲೆ. ಹುಲಿ ದೂರ ಹೋದರ ನೋಡಿ ಎಲ್ಲವೂ ಓಡಿಕೆ ಸುರು ಮಾಡ್ದೊ. ಜೀವಕ್ಕೆ ಅಪಾಯ ಆಗದೆ ಎಲ್ಲವೂ ಅಡ್ಕಲಿದ್ದ ನೆಲ್ಲಿ ಮರದ ಬುಡಕ್ಕೆ ಬಂದ್ ಸೇರಿಕೊಂಡೊ. ಕರ್‌ನ ಹುಡ್ಕ್‌ವ ಆಸೆ ಬುಟ್ಟು ಎಲ್ಲವೂ ಮನೆಕಡೆ ತಿರ್ಗಿದೊ. ಹಾಂಗೆ ಕಾಡ್‌ದಾರಿಲಿ ಬಾಕನ ಒಂದು ಮಾದರ್ ಬೀಣೆ ಕಾಲ್‌ಗೆ ಸುತ್ತಿ ಕರ್ ಬಿದ್ದ್ ಹೋವುಟು. ಜೀವ ಹೋತಿತ್ಲೆ. ಎಲ್ಲವೂ ಸೇರಿ ಬೊಳ್ಳಿನ ಬೇಗ ಬೇಗ ತುಂಡು ಮಾಡಿ ಕ್ಯೊದ್ ಕರ್‌ನ ಎದ್ರ್ಸಿ ನಿಲ್ಸಿದೊ. ಒಳ್ಳೆ ಆರೈಕೆಲಿದ್ದ ಒಂದುವರೆ ವರ್ಸದ ಹೋರಿ ಕರ್ ಕೈಕಾಲ್ ನೆಟ್ಟಂಗೆ ಮಾಡಿ ಉಂಬೇಂತ ಕರ್ಕಂಡ್ ದನಗಳ ಗುಂಪಿಗೆ ಹೋಗಿ ಸೇರ್ತ್. ಎಲ್ಲವುಕೂ ಸಂತೋಸ್ ಆತ್. ಏನೂ ಅಪಾಯ ಆಗದೆ ಬಂದ ಕಾರಣ ಎಲ್ಲವೂ ಸೇರಿ ಅರ್ಜಿ ಗುಂಡಿಲಿರುವ ರಾವು ಗುಳಿಗಂಗೆ ಜೋಡ್ ಕೋಳಿ ತಲೆ ಕ್ಯೊಸುವೆಂತ ಪ್ರಾರ್ಥನೆ ಮಾಡ್ದೊ. ಗುಳಿಗನ ಮೇಲೆ ಭಯ ಭಕ್ತಿ ಇದ್ದ ಕಾರಣ ಊರಿಲಿ ಜನ ನ್ಯಾಯ ಬುಟ್ಟ್ ನಡೆಕೆ ಹೆದ್ರ್‌ತಿದ್ದೊ.

ದನ ಮಕ್ಕ ಕಾಡಿಂದ ಬಾಕನ ಜೋಪುಳ ಹಣ್ಣ್, ಮೊಗ್ಗರೆ ಹಣ್ಣ್, ಗೊಟ್ಟೆ ಹಣ್ಣ್, ಚೂರಿ ಹಣ್ಣ್, ಗಂಟ್‌ಗಟ್ಲೆ ಹಣ್ಣ್, ಹೆಬ್ಬಲ್ಸ್ ಹಣ್ಣ್, ಕ್ಯೊದ್ ತಿಂದ್ ತಿಂದ್ ಹೆಚ್ಚಾದರೆ ಮನೆಗೆ ತಾತಿದ್ದೊ. ಬೇಸಗೆ ತಿಂಗಕಳ್ದ್ ನಾಕರ್ಲಿ ಚೋಮಯ್ಯ ನಾಯ್ಕನ ಗಂಗೆ ಹಸ್ ಕರ್ ಹಾಕಿತ್. ಇದ್ ಸುರ್‌ನ ಕರ್‌ಂತ ಅಂವ ಹೇಳ್ತಾ ಇದ್ರೂ, ನಿಜಕ್ಕೂ ಅದ್ ಮೂರ್‌ನೇ ಕರ್‌ಂತ ನೆರೆಕರೆವುಕೆ ಗೊತ್ತ್‌ಟು. ಅಂವ ಹಸ್‌ನ ಮಾರಿಕೆ ಅಂದಾಜಿ ಮಾಡ್ತಾವುಟ್ಟು. ಅವನ ರೇಟಿಗೆ ಜನ ಬಾವುದಿಲ್ಲೆ. ಕಡ್ಮೆಗೆ ಅಂವ ಕೊಡ್ದ್‌ಲ್ಲೆ. ಹೀಂಗೆ ಗಿರಾಕಿಗ ಬಾವುದ್ ನೋಡ್ದು ಹೊವುದ್ ನಡೆತಾ ಇತ್ತ್. ಇವಂಗೆ ಒಂದು ಒಳ್ಳೆ ಪಾಠ ಕಲ್ಸೊಕುಂತ ನಮ್ಮ ಸುಬ್ರಾಯ ಮಾಂವ ಒಂದು ಉಪಾಯ ಮಾಡ್ದೊ. ಒಂದು ದಿನ ಬೆಳಿಗ್ಗೆ ಬೆಳಿಗ್ಗೆ ನಾಯ್ಕನ ಮನೆಗೆ ಹೋದೊ. ನಮ್ಮ ಪುತ್ತೂರ್ ನಂಟ್ರಿಗೆ ಒಂದು ಒಳ್ಳೆ ಕರ್‌ಬುಡುವ ದನ ಬೇಕುಂತ ಪೀಟಿಕೆ ಹಾಕಿದೊ. ಚೋಮಯ್ಯನೊಟ್ಟಿಗೆ ಕುದ್ದ್ ಎಲಾಡಿಕೆ ತಿಂದ್ ನಾವು ಹಸ್ ಹಸ್ ಪೋರ್ಚೆ ಮಾಡೊಮೊಂತ ಮಾತ್ ಸುರುಮಾಡ್ದೊ. ನನ್ನ ಕಡ್ಸ್‌ಗೆ ನಾಕ್ ಹಲ್ಲ್. ಕಳ್ದ ಹುಣ್ಣಿಮೆ ದಿನ ಜೋಡಿ ಆವುಟು. ಲಕ್ಷಣ ನೋಡ್ಕನ ಹೆಣ್ಣ್ ಕರ್ ಹಾಕುದು ಗ್ಯಾರಂಟಿಂತ ಹೇಳ್ಕನ ಚೋಮಣ್ಣ ಮೂರ್ ಕರ್‌ನ ಹಸಿನ ಬದ್ಲಿಗೆ ಸಣ್ಣ ಪ್ರಾಯದ ಗಬ್ಬದ ಕಡ್ಸ್ ಸಿಕ್ಕಿದೆಂತ ಕುಸಿ ಆತ್. ಮಾಂವಂಗೂ ಚೋಮಯ್ಯಂಗೂ ಮಾತ್‌ಕತೆ ಆಗಿ ಮಾಂವ ಇಪ್ಪತ್ತೈದ್ ರೂಪಾಯಿ ಮೇಲೆ ಕೊಡ್ತ್‌ಂತ ಒಪ್ಪಿಕೊಂಡೊ. ಅದೇ ದಿನ ಹಿಂಬೊತಿಗೆ ಕಡ್ಸ್‌ನ ತಂದ್ ಹಸ್‌ಕರ್‌ನ ಹೊಡ್ಕಂಡ್ ಹೋದೊ. ಅತ್ತ ಹನ್ನೊಂದ್ ತಿಂಗ ಕಳ್ದರೂ ಮಾಂವ ಕೊಟ್ಟ ಕಡ್ಸ್ ಕರ್ ಹಾಕಿತ್ಲೆ. ಆಗ ಚೋಮಯ್ಯಂಗೆ ನಾ ಅತಿ ಆಸೆ ಮಾಡಿ ಗುಂಡಿಗೆ ಬಿದ್ದೆಂತ ಅರ್ತ ಆತ್. ಆದರೆ ಮಾಡುವೇನ್? ಮನ್ಸಿನೊಳಗೆ ಸಾಪ ಹಾಕ್‌ತಿತ್ತ್. ಮಾಂವ ಕೊಟ್ಟ ಕಡ್ಸ್ ಗೊಡ್ಡಿದನಂತ ಆರ್‌ತಿಂಗ ಕಳೆಕನ ಊರ್ಲಿ ಗುಸು ಗುಸು ಸುರ್ ಆತ್.

ಕಿಡ್ಡಸ ಬೇಟೆ

ನಮ್ಮೂರ್ಲಿ ಕೆಡ್ಡಸ ಬೇಟೆ ನಿತ್ತ್ ಹೋಗಿ ಸುಮಾರ್ ಅರ್ವತ್ತ್ ವರ್ಸಂದ ಹೆಚ್ಚಾತ್. ಈಗನವುಕೆ ಅದರ ವಿವರ ಹೇಳ್ರೂ ಅರ್ತ ಆಕಿಲ್ಲೆ. ಮನೆ ಹೆಣ್ಮಕ ಭೂಮಿ ಪೂಜೆ ಮಾಡುವ ಸಂಪ್ರದಾಯವೂ ನಿತ್ತ್ ಹೋವುಟು. ಆಗನ ಕಾಲಲಿ ಮೂರ್ ದಿನ ಕೆಡ್ಡಸ ಬೇಟೆ ನಡೆತಿತ್ತ್. ವರ್ಸಂಪ್ರತಿ ಕೆಡ್ಡಸ ಬೇಟೆಗೆ ಸೇರ್‌ವ ಒಂದು ಕಾಯಂ ಜಾಗ ಇತ್ತ್. ಅಲ್ಲಿಗೆ ಕೂಟದ ಕಲ್ಲ್‌ನ ಜಾಗೆಂತ ಕರೆತಿದ್ದೊ. ಅಲ್ಲಿ ಮೂರು ನಾಕ್ ದೊಡ್ಡ ದೊಡ್ಡ ಗುಂಡ್ ಕಲ್ಲ್‌ಗ ಇರ್ತಿದ್ದೊ. ಸುರುನ ಕೆಡ್ಡಸದ ದಿನ ಎಲ್ಲವೂ ಕೂಟದ ಕಲ್ಲ್ ಇರ್ವ ಸುಂಟ್ಯಡ್ಕಲಿ ಸೇರ್ತಿದ್ದೊ. ಸುಮಾರ್ ಹತ್ತ್‌ಗಂಟೆ ಹೊತ್ತಿಗೆ ಕೋವಿ, ಕತ್ತಿ, ದೊಣ್ಣೆ ಸಮೇತ ಜನ ಬಂದ್ ಸೇರ್ವೆ, ಅಲ್ಲಿದ್ದ ದೊಡ್ಡ ದೊಡ್ಡ ಕಲ್ಲ್‌ಗಳ ತಲೆಂದ ಮೇಲೆ ಎತ್ತಿ ಹಾಕುವ ಪಂತ ನಡೆತಿತ್ತ್. ಸುಮಾರ್ ಐವತ್ತ್ ಕೆ.ಜಿಂದ ಹೆಚ್ಚಿಗೆ ಬಾರ ಇರ್‌ವ ಕಲ್ಲ್‌ಗ ಮೂರ್ ನಾಕು ಇದ್ದೊ. ಅಲ್ಲಿಗೆ ಬಂದ ಹೊಂತಗಾರ್ ಹುಡುಗರ್ ಕಲ್ಲ್‌ನ ಎತ್ತಿ ಹಾಕಿಕೆ ಪ್ರಯತ್ನ ಮಾಡಿರೂ ಸೊಂಟಂದ ಮೇಲೆ ಎತ್ತಿಕೆ ಆತಿಲ್ಲೆ. ಅಕೇರಿಗೆ ಕರೆಲಿ ನಿತ್ತಿದ್ದ ಮಾಣಿ ಮನೆ ರುಕ್ಮಯ್ಯ ಸುಮಾರ್ ಇಪ್ಪತ್ತ ಮೂರು ಇಪ್ಪತ್ತನಾಕ್ ವರ್ಸ ಪ್ರಾಯದ ಒಳ್ಳೆ ಹೊಂತಗಾರ ಹೈದ ಮುಂದೆ ಬಂದವನೇ ಒಮ್ಮೆಗೇ ಕಲ್ಲ್ ಎತ್ತಿ ಹಾಕಿತ್. ಅಲ್ಲಿದ್ದೊವು ಕುಸಿಲಿ ತಾಟ ಹೊಡ್ಡ್ ರುಕ್ಮಯನ ಹೊಗ್‌ಳ್ತಾ ಇದ್ದೊ.

ಬೇಟೆಗೆ ಸೇರ್ದ ಜನಗ ಯಾವ ಕಾಡಿಗೆ ಹೊವುದುಂತ ಚರ್ಚೆ ಮಾಡಿ ಅಲ್ಲಿಂದ ಅರ್ದ ಮೈಲ್ ದೂರಲಿರುವ ಓಟೆಕಾಡಿಗೆ ಹೋವ ನಿಗಂಟ್ ಆತ್. ಸುಮಾರ್ ಮುವ್ವತ್ತೈದ್ ನಲ್ವತ್ತ್ ಜನರ್ಲಿ ಹದಿನೈದ್ ಕೋವಿ ಇತ್ತ್. ಒಂಟಿನಳಿಗೆ, ಜೋಡುನಳಿಗೆ ತೋಟೆ ಮತ್ತೆ ಕೇಪಿನ ಕೋವಿಗಳೂ ಇದ್ದೊ. ಅಮೇರಿಕಲಿ ತಯಾರಾದ ಹನ್ನೆರ್ಡ್ ಬೋರಿನ

ಜೋಡ್ ನಳಿಗೆ ತೋಟೆ ಕೋವಿ ತಕ್ಕಂಡ್ ದೊಡ್ಡಮನೆ ಸಾಂತಪ್ಪ ಗೌಡ್ರು ಬಂದಿದ್ದೊ. ಕೆಲವರಕ್ಕಲೆ ಹದಿನಾರ್ ಬೋರಿನ ತೋಟೆ ಕೋವಿಗಳೂ ಇದ್ದೊ. ಹದಿನಾರ್ ಬೋರಿನ ಕೋವಿ ತೋಟೆ ಸಣ್ಣದ್.

ಓಟೆಕಾಡ್ ಜಾರಿ ದೊಡ್ಡ ಕಾಡ್ ಅಲ್ಲ. ಸುತ್ತಳ್ತೆ ಸುಮಾರ್ ಒಂದು ಮೈಲ್ ಒಳೆಗೆ ಈ ಕಾಡಿನ ಮೂಡ ಮತ್ತೆ ತೆಂಕ ದಿಕ್ಕಲಿ ಜೈಲ್ ಉಟ್ಟು. ಜೈಲಿಗೆ ಬತ್ತ ತಿಂಬಕೆ ಜಾವ ಕಡ್ವೆ, ಹಂದಿ, ಕಂಪಂತ ಕಾಡ್ ಪ್ರಾಣಿಗ ಇರ್‍ವ ಜಾಗೆ. ಅಲ್ಲಿ ಒಂದು ಸಣ್ಣ ನೀರಿನ ಪಳ್ಳಲಿ ಎಂತ ಕಾಚೆಲ್ ಆದ್ರೂ ನೀರ್ ಇರ್‍ತಿತ್. ಈ ಪಳ್ಳಕೆ ಕತ್ತಲೆ ಆಕನ ಕಾಡ್ ಪ್ರಾಣಿಗ ನೀರ್ ಕುಡೆಕೆ ಬಾತಿದ್ದೊ. ಹತ್ತ್ ದಿನಕೆ ಹಿಂದೆ ತಮ್ಮಣ್ಣ ಒಂದು ಕೊಂಬ ಕಡ್ವೆನ ಹೊಡ್ದಿತ್. ಅದರ ಚರ್ಮ ನಾಕ್ ತಡ್ಪೆಷ್ಟ್ ಅಗಲ. ಒಂದುವರೆ ಕೋಲು ಉದ್ದದ ಕೊಂಬುಗ. ಈ ಕೊಂಬು ಸಾಂತಪ್ಪನ ಮನೆ ಗೋಡೆಲಿ ಈಗಳೂ ಉಟ್ಟು. ಆಗನ ಕಾಲಲಿ ಕಾಡ್ ಪ್ರಾಣಿ ಬೇಟೆ ಮಾಡಿಕೆ ಬೊತ್ತ್ಂತ ಈಗನಷ್ಟ್ ಕಾನೂನು ಬಿಗಿ ಇತ್ಲೆ. ಊರ್‍ಲಿ ಹಂದಿ, ಕಡ್ವೆ ಹೊಡ್ದರೆ ಗ್ರಾಮದ ಪಟೇಲ್‌ರಿಗೆ, ಶಾನ್‌ಬಾಗರಿಗೆ, ಉಗ್ರಾಣಿಗೆ ಮತ್ತೆ ಗಾರ್ಡ್‌ಗೆ ಒಂದೊಂದು ಹನಿಯ ದೊಡ್ಡ ಪಾಲ್ ಮಾಸ ಮುಟ್ಟಿಸ್‌ರೆ ತಕರಾರ್ ಇತ್ಲೆ.

ಓಟೆಕಾಡ್‌ನ ಪಡ್ವಲಿ ದೊಡ್ಡ ಕಾಡ್. ಪ್ರಾಣಿಗ ಜಾವ ಗಂಡಿಗಳ್‌ಲಿ ಕೋವಿ ಇದ್ದೊವು ಮುಂದೆ ಹೋಗಿ ದೊಡ್ಡ ದೊಡ್ಡ ಮರಗಳ ಅಡ್ಡ ಅರ್‌ಂಗಿ ಕುದ್ರೊಕು. ಆ ಕಾಡಿಗೆ ಐದ್ ಬೇಟೆ ಗಂಡಿಗ ಇದ್ದೊ. ಅದಕ್ಕೆ ಸರಿಯಾದ ಜನಗಳ ಕಳ್ಸಿದೊ. ಕೋವಿ ಇದ್ದೊವು ಅವರವರ ಜಾಗೆಲಿ ಹೋಗಿ ಕುದ್ದ ಕೂಡ್ಲೆ ಸುತ್ತ ಮುತ್ತಂದ ಜನಂಗ ಕತ್ತಿ, ದೊಣ್ಣೆ, ಹಿಡ್ಕಂಡ್ ಬೊಬ್ಬೆ ಹಾಕಿ ಪ್ರಾಣಿಗಳ ಓಡ್ಸ್‌ತಿದ್ದೊ. ಬೇಟೆನಾಯಿಗಳೂ ಒಟ್ಟಿಗೆ ಇದ್ದೊ. ಊರಿನ ಅಜಲರ್ ಡೋಲ್ ಹೊಡ್ಕಂಡ್ ಶಬ್ದ ಮಾಡಿ ಪ್ರಾಣಿಗಳ ಎದ್ರ್‌ಸೊಕು. ಸಾಂತಪ್ಪ ಗೌಡ್ರು ಕುದ್ದ ಗಂಡಿಲಿ ಬಂದ ಕಡ್ವೆ ಅವರ ಗುಂಡಿಗೆ ಬಿದ್ದ್‌ಟು. ಬಂದ್ ನೋಡ್ದ್‌ವು ಇದ್ ನಾಕ್ ಜನಕೆ ನಿಗ್ರ ಉಟ್ಟುಂತ ಹೇಳ್ದೊ. ಬಡ್‌ಗ ದಿಕ್ಕಿನ ಗಂಡಿಲಿ ನಿತ್ತ್ ಮೋನಪ್ಪ ಹಂದಿಗೆ ಗುಂಡು ಹೊಡ್ದರೂ. ನೆತ್ತರ್ ಅರ್‌ಸಿಕಂಡ್ ಓಡಿಟು. ಓಡ್ದ ಲಕ್ಷಣ ನೋಡ್ರೆ ಹಂದಿನ ತೊಡೆಗೆ ಗುಂಡು ತಾಂಗಿಟುಂತ ಈಡ್‌ಗಾರ ಮೇದಪ್ಪ ಹೇಳ್ತ್. ಇನ್ನೊಂದು ಕಡೆ ಕುದ್ದ ಚೋಮಣ್ಣ ಕಡ್ವೆ ಓಡಿಕಂಡ್ ಇವನ ಹಕ್ಕಲೇ ಜಾಕನ ಕೇಪಿನ ಕೋವಿಲಿ ಹೊಡ್ದ್ ಗುಂಡ್ ತಪ್ಪಿ ಹೋಗಿ ಎದ್ರಿಗಿದ್ದ ಮುಜ್ಜ್‌ರ್ ಮರಕ್ಕೆ ತಾಂಗಿ ತೊಪ್ಪೆ ಎದ್ದ್‌ಟು. ಬರ್‍ಕ, ಏಯಿಪಂಜಿ, ಅಣ್ಕ್ ಕೆಲವುಕೆ ಸಿಕ್ಕಿತ್. ಇಷ್ಟೆಲ್ಲ ಆಕನ ಗಂಟೆ ಮೂರ್ ದಾಟಿಟು. ಇಂದಿಗೆ ಸಾಕ್‌ಂತ ಸಿಕ್ಕಿದ ಪ್ರಾಣಿಗಳ ಹೊತ್ತ್‌ಕ್ಕಂಡ್ ಪುರ್‌ಸರ ಗುಂಡಿಲಿ ಮಾಮೂಲ್‌ನಾಂಗೆ ಕಂತಿಸಿ ಇಸಿದೊ. ಮೂರ್ ದಿನ ಸಿಕ್ಕಿದ ಪ್ರಾಣಿಗಳ ನೀರ್‍ಲಿ ಇಸಿ ಅಕೇರಿ ದಿನ ನೀರಿಂದ ತೆಗ್ದ್ ಮಾಸ ಮಾಡಿ ಪುರ್‌ಸಂಗೆ ಅಗಲ್ ಹಾಕಿ ಪನಿವಾರ ಮಾಡ್ದು ಕ್ರಮ.

ಎರ್ಡ್‌ನೇ ದಿನ ನಡು ಕಿಡ್ಸಸ. ಆದಿನ ಬೇಟೆಗೆ ಜನ ಹೆಚ್ಚಿಗೆ ಸೇರ್‍ದೊಳೊ. ಇಪ್ಪತ್ ಇಪ್ಪತ್ತೈದ್ ಕೋವಿ ಉಟ್ಟು. ಎಲ್ಲವೂ ಸೇರಿ ಅಲ್ಲಿಂದ ಒಂದು ಮೈಲ್ ದೂರದ ಕೂಡ್‌ಕಾಡಿಗೆ

ಹೋವುದುಂತ ಹೇಳಿ ಹೊರ್ಟೊ. ಕೂಡ್‌ಕಾಡ್ ದೊಡ್ಡ ಕಾಡ್. ಪ್ರಾಣಿಗ ಹಗ್‌ಲೇ ತಿರ್ಗಾಡ್‌ವ ಜಾಗೆ. ನೀರ್ ಬೇಕಾದಷ್ಟ್ ಉಟ್ಟು. ಅದ್ ಎಲ್ಲವುಕೂ ಗೊತ್ತಿದ್ದ ಕಾಡ್. ಕೆಡ್ಡಸ ಬೇಟೆ ಕ್ರಮ ಪ್ರಕಾರ ಕಾಡ್ ಕಟ್ಟಿದೊ. ಕೋವಿ ಇದ್ದೊವು ಪ್ರಾಣಿಗ ಬಾವ ಗಂಡಿಲಿ ಹೋಗಿ ಕುದ್ದೊ. ಡೋಲ್ ಹೊಡ್ಕಂಡ್ ಜನಗ ಕಾಡಿಗೆ ಹುಕ್ಕೊ. ನಾಲ್ಕೈದ್ ನಾಯಿಗ ಮುಂದೆ ಮುಂದೆ ಹೋತಿದ್ದೊ. ಅಂದಾಜಿ ಮಾಡ್ದ್‌ಂಗೆ ಯಾವುದೇ ಪ್ರಾಣಿಗ ಎದ್ದತ್ಲೇ ದೇವಣ್ಣ ಗೌಡ್ರ ರೋಬ ನಾಯಿ ಯಾವುದೋ ಪ್ರಾಣಿನ ಮೂರಿ ಸಿಕ್ಕಿ ಮುಂದೆ ಮುಂದೆ ಹೋತ್. ಹೋಗಿ ಹೋಗಿ ನಾಯಿ ಅಣ್ಣಪ್ಪ ಗೌಡ್ರ ಗಂಡಿಗೆ ಬಾತ್. ಪ್ರಾಣಿ ಬಾವುದ್‌ಂತ ಕುದ್ರೆ ಎಳ್ದ್ ಕುದ್ದವು ಗುರಿ ಇಸಿ ಗುಂಡ್ ಹಾರ್ಸಿದೊ. ಹಕ್ಕಲೆ ಹೋಗಿ ನೋಡ್ಕನ ಅವರ ಬಾವ ದೇವಣ್ಣ ಗೌಡ್ರ ರೋಬ ನಾಯಿನ ಹೆಣ ಬಿದ್ದುಟು. ಬಂದ್ ನೋಡ್ದ ದೇವಣ್ಣ ಗೌಡ್ರಿಗೆ ಕಣ್ಣ್‌ಲಿ ನೀರ್ ಬಾತ್. ಏನೂ ಮಾತಾಡದೆ ನಾಯಿನ ಅಲ್ಲೇ ಗುಂಡಿಗೆ ಹಾಕಿದೊ. ಒಳ್ಳೆ ಬೇಟೆ ನಾಯಿ ಹೋತ್. ಆದ್ರೂ ಅವರಲ್ಲಿ ಇನ್ನೂ ಮೂರ್ ನಾಯಿಗ ವೊಳೊ. ಎಲ್ಲವು ಸಮದಾನ ಮಾಡಿ ಕರ್ಕಂಡ್ ಬಂದೊ. ಆದಿನ ಯಾವ ಬೇಟೆನೂ ಸಿಕ್ಕಿತ್ಲೆ. ಮದ್ಯಾಹ್ನ ಎರ್ಡ್ ಗಂಟೆಗೆ ಎಲ್ಲವೂ ಮನೆಗೆ ಹೋದೊ.

ಮಾರ್ಣೆದಿನ ಕಡೇ ಕೆಡ್ಡಸ. ಬೇಟೆ ನಡೆಕುಂತ ಪುರ್ಸ ದೆವ್ವಕೆ ಹರ್ಕೆ ಹೇಳಿಕಂಡ್ ಆನೆಪಳ್ಳ ಕಾಡಿಗೆ ಹೋದೊ. ಬೇಟೆನಾಯಿಗ ನೆಲ ಮೂಸಿ ಬೊಗಳಿಕಂಡ್ ಮುಂದೆ ಹೋದವೆ. ಅರ್ದ ಗಂಟೆ ಕಳೆಕನ ನಾಲ್ಕೈದ್ ಹಂದಿಗ ಮುತ್ತಪ್ಪ ಗೌಡ್ರ ಗಂಡಿಗೆ ಬಂದವೆ. ಗುರಿ ಇಸಿ ಗುಂಡ್ ಹೊಡ್ದ್ದೊರೂ ಗಣ್ಯ ಮಾಡದೆ ಹಂದಿ ಓಡಿ ಹೋತ್. ಆ ಹಂದಿ ಅಂದಾಜಿ ಆರ್ ಜನಕೆ ಉಟ್ಟುಂತ ಹೇಳ್ದೊ. ಈ ಹಿಂದೆ ಈಡ್‌ಗಾರರ್ ಗುಂಡ್ ಹೊಡ್ದ್‌ರೂ ಆ ಹಂದಿಗೆ ಅಪಾಯ ಆತಿಲ್ಲೆ. ಆ ಹಂದಿ ಮೇಲೆ ದೆವ್ವ ಕುದ್ಕಂಡಿರುವ ಕಾರಣ ಅದ್‌ಕ್ಕೆ ಗುಂಡು ತಾಂಗುದಿಲ್ಲೆಂತ ಕೆಂಚಪ್ಪ ಹೇಳ್ತ್. ಎಲ್ಲವುಕೂ ಅದ್ ಸರಿಂತ ಅಂದಾಜಾತ್.

ಹಂದಿ ತಪ್ಪಿ ಹೋದರೂ ಬೇಟೆ ನಿಲ್ಸದೆ ಮುಂದೆ ಮುಂದೆ ಕಾಡಿಲಿ ಹೋದೊ. ಐದ್ ನಿಮಿಷಲಿ ನಾಯಿಗ ಕಜ್ಜಬೀಲ ಕಟ್ಟಿಕಂಡ್ ಮೊನ್ಸರ ಹಕ್ಕಲೆ ಓಡಿ ಬಂದೊ. ಏನೊ ದೊಡ್ಡ ಅಪಾಯ ಉಟ್ಟುಂತ ಸಂಸಯ ಬಾತ್. ಕೋವಿಯವು ಯಾರೂ ಹಕ್ಕಲೆ ಇಲ್ಲೆ. ಅಷ್ಟೊತ್ತಿಗೆ ವಾಟೆ ತಪ್ಪಲೆ ಬುಡಲಿ ಒಂದು ಹೆಣ್ಣಾನೆ ಮರಿನ ಹೊಟ್ಟೆಡಿಲಿ ನಿಲ್ಸಿಕಂಡ್ ದೂರಂದಳೇ ಸಬ್ದ ಮಾಡ್ದೆ. ಆನೆನ ನೋಡಿ ಬೇಟೆಗೆ ಬಂದವು ಚೆಲ್ಲಾ ಪಿಲ್ಲಿ ಓಡಿ ಹೋದೊ. ಹುಡ್ಕ್ಕನ ಡೋಲು ಹೊಡೆವ ಮಾಂಕು ನಾಪತ್ತೆ ಆವುಟು. ಕಾಡಿಗೆ ಹುಕ್ಕ್ ಹುಡ್ಕಿಕೆ ಯಾರಿಗೂ ದೈರ ಇಲ್ಲೆ. ಅಷ್ಟೊತ್ತಿಗೆ ಕಾಡಿನ ಕಡೆಂದ ಮೊನ್ಸನ ಕೂಗ್ ಕೇಳ್ತ್. ತೋಟೆ ಕೋವಿ ಇದ್ದ ಮೂರ್ ಜನ ಈಡ್‌ಗಾರರ್ ಅಲ್ಲಿ ಹೋಗಿ ನೋಡ್ಕನ ಮಾಂಕು ಆನೆಗೆ ಹೆದ್ರಿ ದೊಡ್ಡ ಮಾಯಿನ ಮರದ ಕೊಡಿಲಿ ಹತ್ತಿ ಕುದ್ದುಟು. ಇವರ ನೋಡಿ ಮರಂದ ಇಳ್ತ್. ಆದಿನ ಬೇಟೆ ಯಾವುದೂ ಆತ್ಲಾರೂ ಪುರ್ಸ ದೆವ್ವದ ಕಾರ್ಣಿಕಂದ ಯಾರಿಗೂ ತೊಂದರೆ ಆತ್ಲೆ. ಪುರ್ಸ ದೆವ್ವದ ಸತ್ಯಂದ ಬಂದ ಆಪತ್ತ್ ಸುಲಭಲಿ ಪರಿಹಾರ ಆತ್.

ಅಕೇರಿ ಕೆಡ್ಡಸದ ದಿನ ಪುರ್ಸ್‌ರ ಪೂಜಾರಿ ಎಂಕಪ್ಪ ಮತ್ತೆ ನಾಲ್ಕೈದ್ ಜನ ಸೇರಿ ನೀರ್ ಗುಂಡಿಲಿದ್ದ ಸತ್ತ ಪ್ರಾಣಿಗಳ ಮೇಲೆ ತೆಗ್ದ್ ಮಾಸ ಮಾಡಿ ಅಡ್ಗೆ ಮಾಡ್ಕೆ ಮಳ್ಳಾಜೆ ಅಡ್ಕಕೆ ತಂದೊ. ಸುರ್‌ನ ದಿನದ ಪ್ರಾಣಿಗಳ ಮಾಸ ಮುಗ್ಗ್ ಮುಗ್ಗ್ ಬಾತಿತ್ತ್. ಓಂಬೊತು ನಾಕ್ ಗಂಟೆ ಸಮಯಕೆ ಎಲ್ಲವೂ ಅಡ್ಕಲಿ ಸೇರಿ ಪುರ್ಸ್‌ಂಗೆ ಅಗಲ್ ಹಾಕಿ ಪನಿವಾರ ಮಾಡೊಕು. ಮನೆಂದ ಬಾಕನ ಎಲ್ಲವೂ ರೊಟ್ಟಿ ಮಾಡಿ ತರೊಕು. ತಂದದರ್ಲಿ ಒಂದ್ ರೊಟ್ಟಿ ಹತ್ತ್ ಜನರ ಪಾಲಿಗೆ ಕೊಡೊಕು. ಪನಿವಾರಕೆ ಮುಂದೆ ಬೇಟೆಗೆ ಬಂದ ಎಲ್ಲವೂ ಅವರವರ ಕೋವಿಗಳ ತಂದ್ ವರ್ಸಂಪ್ರತಿ ಗುರಿಗೆ ಗುಂಡ್ ಹೊಡೆವ ಪಂತ ನಡೆತಿತ್ತ್. ಒಂದು ದೊಡ್ಡ ಬೂದ್ರ್ ಮರಕ್ಕೆ ಬೆಳಿ ಸಾಳೆ ತುಂಡಿನ ಗುರ್ತ್ ಕಟ್ಟಿದೊ. ಒಬ್ಬೊಬ್ಬನೆ ಗುರಿಗೆ ಗುಂಡು ಹಾರ್ಸಿದೊ. ಯಾರಿಗೂ ಗುರಿಗೆ ತಾಂಗಿಸಿಕೆ ಆತಿಲ್ಲೆ. ಆಗ ಕೆಲವು ಹೇಳ್ದೊ "ಪುರ್ಸ್ ದೆವ್ವಕೆ ಹಾಕಿದ ಅಗಲ್‌ಲಿ ಅಸುದ್ದ ಆವುಟುಂತ". ಅಷ್ಟೊತ್ತಿಗೆ ಅಲ್ಲಿದ್ದ ರಾಮಯ್ಯ ಪಟೇಲ್ರ್ ಮುಂದೆ ಬಂದೊ. ಅವುಕೆ ಬಲ್ದ ಕೈ ತುಂಡಾದ ಕಾರಣ ಜನಗ ಒಂದ್ ಕೈ ಪಟೇಲ್‌ರ್‌ಂತ ಹಿಂದೆಂದ ಕರೆತಿದ್ದೊ. ಬಾರಿ ಹಿಂದೆ ಹಳ್ಳಲಿ ಮೀನಿಗೆ ತೋಟೆ ಹಾಕ್‌ಕನ (ಡೈನಾಮೈಟ್) ತೋಟೆ ಕೈಲಿ ಹೊಡ್ದ್ ಹೋಗಿ ಬಲ್ದ್ ಕೈ ರಟ್ಟೆಂದ ತುಂಡಾಗಿತ್ತ್. ಜೀವಕ್ಕೆ ಅಪಾಯ ಬಾತ್ಲೆ, ಮೋರೆ, ಎದೆ, ತಲೆ ಎಲ್ಲಾ ಕಡೆಲಿ ಗಾಯದ ಗುರ್ತ್ ಕಂಡದೆ. ಆದಿನ ಪಟೇಲ್‌ರ್ ಹನ್ನೆರಡ್ ತೋಟೆ ಹಾಕಿಯೊಳಂತ ಸುದ್ದಿ. ಹದಿಮೂರ್‌ನೆ ತೋಟೆ ಅರ್ಜಿ ಗುಂಡಿಗೆ ಹಾಕ್‌ಕನ ಕೈಲಿ ಹೊಡ್ತ್‌ಂತ ಹೇಳ್ವೆ. ಪಟೇಲ್ರ್ ಎದ್ರಿಗೆ ಬಂದ್, ಅವರ ಸ್ವಂತ ಹದಿನಾರ್ ಬೋರ್ ತೋಟೆ ಕೋವಿ ಪಾತಿನ ತುಂಡಾದ ಬಲ್ದ್ ಕೈ ರಟ್ಟೆಗೆ ಒತ್ತಿ ಹಿಡ್ದ್ ಒಂದು ಕಣ್ಣ್ ಮುಚ್ಚಿ ಗುರಿ ನೋಡಿ ಎಡ್ದ ಕೈಲಿ ಕಳ್ಳಂಗೆ ಕೈ ಹಾಕಿದೊ. ಗುಂಡು ಸರಿ ಗುರಿನ ಮದ್ಯೆಕೆ ತಾಂಗಿ ಕಟ್ಟಿದ ಸಾಳೆ ತುಂಡ್ ಹತ್ತ್ ಮಾರ್ ದೂರ ಹೋಗಿ ಬೀತ್. ಪಟೇಲ್ರ್ ಊರಿನ ಮರ್ಯಾದೆ ಉಳ್ಸಿದೊಂತ ಎಲ್ಲವುಕೂ ಸಂತೋಸ್ ಆತ್.

ಪಟೇಲ್‌ರಿಗೆ ಒಂಟಿ ಕೈ ಆದ್ರೂ ತೋಟೆ ಕೋವಿ ಲೈಸೆನ್ಸ್ ಸಿಕ್ಕಿದ ವಿಸಯಲಿ ಬೇರೆನೇ ಒಂದು ದೊಡ್ಡ ಕತೆ ಉಟ್ಟು.

ಅಡ್ಕೆಕಳ್ಳ ಅಣ್ಣಪ್ಪ

ಇದ್ ಸುಮಾರ್ ಎಪ್ಪತ್ತೈದ್ ವರ್ಸದ ಹಿಂದೆ ನಡ್ದ್ ವಿಸಯ. ಆಗ ನಮ್ಮೂರ್ಲಿ ಹೆಚ್ಚಿ ಜನಸಂಕೆ ಇತ್ಲೆ. ಗದ್ದೆ ಬೇಸಾಯನೇ ಕುಲ ಕಸುಬು. ಗದ್ದೆ ಬಿತ್ತುದ್, ಕೊಯ್ಯದು, ಉಂಬೋದ್ ಅಲ್ಲಿಗೆ ದೊಡ್ಡ ಕೆಲ್ಸ ಮುಕ್ತ್. ಈಗನಾಂಗೆ ಅಡಿಕೆ ತೋಟಗ ಕಾಣಿಕೆ ಇಲ್ಲೆ. ನಮ್ಮ ಊರ್ ಸುಳ್ಯ ಪೇಟೆಂದ ಸುಮಾರ್ ಮೂವತ್ತ್ ಮೈಲ್ ದೂರ. ಪುತ್ತೂರು ತಾಲೋಕಿಗೆ ಸೇರಿತ್ತ್. ಹೊರಗಿನ ಜನ ಮಲೇರಿಯಾ ಕಾಯಿಲೆನ ಹೆದ್ರಿಕೆಂದ ಈ ಕಡೆ ಬಾಕೆ ಹೆದ್ರ್‌ತಿದ್ದೊ. ವಾರಕ್ಕೊಮ್ಮೆ ತಪ್ಪದೆ ಬಾವ ಈ ಜರನ ಕುದಿಜರಂತ ಕರೆತಿದ್ದೊ. ಮಲೆರಿಯಾಂದ ಹೊಟ್ಟೆಲಿ ಗೆಡ್ಡೆ ಬೆಳ್ದ್ ದೊಡ್ಡ ಹೊಟ್ಟೆ ಹೊತ್ತ್ ತಿರ್ಗ್‌ತಿದ್ದೊ. ವಿದ್ಯೆ ಕಲೆವು ಊರ್ಲಿ ಬಾರಿ ಕಮ್ಮಿ. ಎರ್ಡ್ ಬ್ರಾಂಬರ ಮನೆ ಇತ್ತ್. ಅಜಲರ್ದ್ ಮೂರೋ ನಾಲ್ಕೋ ಅಷ್ಟೆ. ಹೆಚ್ಚಿನವು ಗೌಡ್‌ಗ. ವಿದ್ಯೆ ಇಲ್ಲದ ಗೌಡ ಜಾತಿಯ ಜನಗ ವ್ಯವಹಾರ ಜ್ಞಾನ ಇಲ್ಲದೆ ತುಂಬಾ ಹೆಡ್ಡರಾಗಿದ್ದೊ. ಗೌಡಂಗೆ ದವಡೆಗೆ ಬಿದ್ದರೆ ಮಾತ್ರ ಬುದ್ದಿ ಬಾವುದ್‌ಂತ ಎಲ್ಲವೂ ಡೋಂಗಿ ಮಾಡ್ತಿದ್ದ ಕಾಲ. ಗೌಡ ಜಾತಿಯವು ಬೇಸಾಯ ಕೆಲ್ಸಲಿ ಬಾರಿ ಗಟ್ಟಿಗರ್. ಈ ಜಾತಿಲಿ ಬೇಡುವವು ಹುಡ್ಕಿರೂ ಸಿಕ್‌ಕಿಲ್ಲೆ. ಊರಿನ ಮಡ್ಯಳ, ಪೂಜೆ ಹಾರಂವ, ಆಚಾರಿ, ಕಂಚಿಗಾರ, ಬೂತ ಕಟ್ಟ್‌ವ ಅಜಲ ಎಲ್ಲವುಕೂ ವರ್ಸಕೆ ಇಂತಿಷ್ಟ್ ಬತ್ತಂತ ಕೊಟ್ಟ್ ಅವರ ಜೀವನ ನಡೆಕೆ ಸಹಾಯ ಮಾಡ್ತಿದ್ದೊ. ಊರಿಗೆ ಬಾಕೆ ಗಾಡಿ ಮಾರ್ಗ ಮಾತ್ರ ಇತ್ತ್. ಬಾರಿ ಹಿಂದೆ ಬ್ರಿಟಿಷ್ ದೊರೆನ ಒಂದು ದೊಡ್ಡ ರಬ್ಬರ್ ತೋಟ ಇತ್ತ್. ಅದ್ ಈಗಳೂ ಉಟ್ಟು, ದನಿಗ ಮಾತ್ರ ಬೇರೆ. ತೋಟಂದ ಇಪ್ಪತ್ತ್ ಮೈಲ್ ದೂರ ಮಾರ್ಗ ರಿಪೇರಿ ಎಲ್ಲಾ ಅವರ್ದೇ ಕರ್ಚಿ. ಆಗ ಒಮ್ಮೊಮ್ಮೆ ರಬ್ಬರ್ ಸಾಗ್‌ಸ್‌ಕನ ಮೂವತ್ತ್, ನಲ್ವತ್ತ್ ಎತ್ತಿನ ಗಾಡಿಗ ಸಾಲ್‌ಲಿ ಹೋತಿದ್ದೊ. ತಾಲೂಕು ಕಚೇರಿ ಪುತ್ತೂರಿಗೆ ಹೋಕೆ ಎರಡ್ ದಿನದ ಪ್ರಯಾಣ. ಜನಗಳಿಗೆ ಬೇಕಾದ ಎಲ್ಲಾ ಆಹಾರ ವಸ್ತ್‌ಗಳ ಊರ್ಲಿ ಬೆಳ್ಸ್‌ತಿದ್ದೊ. ಬೇರೆ ಅಗತ್ಯ ವಸ್ತ್‌ಗಳಾದ ಬಟ್ಟೆ ಬರೆ, ಬೇರೆ ಸಾಮಾನ್‌ಗ ಸುಬ್ರಹ್ಮಣ್ಯ ಜಾತ್ರೆಂದ ತಾತಿದ್ದೊ. ಎತ್ತ್, ದನಕರ್‌ಗಳ ತಾಕೆ ಕುಲ್ಕುಂದ

ಜಾನ್‌ವಾರ್ ಸಂತೆ ನಡೆತಿತ್. ಚಳಿ ಸಮಯಕೆ ಬೇಕಾದ ಒಳ್ಳೆ ಜಾತಿ ಕಂಬಳಿ ಜಾತ್ರೆಲಿ ಮಾರಾಟಕ್ಕೆ ಸಿಕ್‌ತಿತ್. ಹೆಚ್ಚಿನ ತೊಂದ್ರೆ ಇಲ್ಲದೆ ಜನಗ ಸುಕಲಿ ಇದ್ದೊ. ಈಗ ಎಲ್ಲಾ ಇದ್ದರೂ ರಾತ್ರೆ ನಿದ್ದೆ ಬಾಕೆ ಮಾತ್ರೆ ನುಂಗುವ ಕಾಲ ಬಂದುಟು.

ನಮ್ಮೂರಿನ ಬ್ರಾಂಬರ್ಲಿ ಗೋಪಾಲಯ್ಯ ದೊಡ್ಡ ಶ್ರೀಮಂತರ್. ಆಗನ ಕಾಲಲೇ ಐದ್ ಕಂಡಿ ಅಡ್ಕೆ ಬಾತಿತ್. ಬಟ್ರ್‌ಗೆ ಎರಡ್ ಜನ ಹೆಣ್ಮಕ. ಮುಂದೆನ ಹೆಣ್ಣ್‌ಲಿ ನಾಕ್ ಜನ ಹೆಣ್ ಮಕ್ಕ ಮಾತ್ರ. ಗಂಡ್ ಸಂತಾನ ಇಲ್ಲೆಂತ ಐವತ್ ವರ್ಸ ದಾಟಿದ ಗೋಪಾಲಯ್ಯನವ ಶಿವಮೊಗ್ಗ ಜಿಲ್ಲೆ ಸಾಗರಂದ ಇಪ್ಪತ್ ವರ್ಸ ಪ್ರಾಯದ ಗೂಡೆನ ಮೊದ್‌ವೆ ಆಗಿದ್ದೊ ಪ್ರಾಯಲಿ ಅವರ ದೊಡ್ಡ ಮಗ ಸುಬದ್ರೆಂದ ನಾಕ್ ವರ್ಸ್‌ಲಿ ಸಣ್ಣದ್. ಹಾಂಗೆ ಸುಬದ್ರ ಚಿಕ್ಕಮ್ಮನ ಅಕ್ಕಂತ ಕರೆತಿತ್. ಬಟ್ರ್‌ಗೆ ಹಳ್ಳಿ ಮೊದ್ದು, ನೀರ್‌ಮಂತ್ರಿಸಿ ಹೊಯ್ಯೊದ್, ಕಂಬಳಿ ನೂಲು ಕಟ್ಟುದು, ವಿಷಕ್ಕೆ ಮೊದ್ದ್ ಕೊಡ್ದುಂತ ಊರ್‌ನ ಜನಕೆ ಸಹಾಯ ಮಾಡ್‌ವ ಪುಣ್ಯಾತ್ಮ. ಮನೆಗೆ ಯಾರೇ ಬಂದ್ರೂ ಕಾಪಿ ಕೊಟ್ಟು ಪಂಚಾತಿಗೆ ಕುದ್ದರೆ ಮದ್ದೇನ ಕಳ್ದರೂ ಗೊತ್ತಾಕಿಲ್ಲೆ. ಆಗನ ಕಾಲಲಿ ನಮ್ಮ ಊರ್‌ಲಿ ಇದ್ದ ಎರ್ಡ್ ಸೈಕಲ್‌ಗಳ್ಲಿ ಬಟ್ರ್ ಅರ್ವತ್ತೈದ್ ರೂಪಾಯಿ ಕೊಟ್ಟು ಮಂಗ್‌ಳೂರಿಂದ ತಂದ ಹೊಸ ಹರ್ಕ್ಯುಲಿಸ್ ಸೈಕಲ್ ಮತ್ತೊಂದು ಮೀನ್ ಬೆಲ್ಲ ಮಾರ್‌ವ ಮಂಜನಾಡಿ ಮಾಪ್ಲೆ ಮೂಸೆನಕ್ಕಲೆ ಇದ್ದ ಹಳೆ ಗುಜುರಿ ಸೈಕಲ್ ಬ್ಯಾರಿ ಮೀನ್, ಬೆಲ್ಲ, ಅಡಿಕೆ ಸೈಕಲಿ ಕಟ್ಟಿ ಮನೆ ಮನೆ ಹೋಗಿ ಕೈ ವ್ಯಾಪಾರ ಮಾಡಿ ಊರ್‌ಲಿದ್ದ ಹೆಣ್ಣ್ ಮಕ್ಕಳ ಸಾಂಕ್‌ತಿತ್. ಬ್ಯಾರಿ ವರ್ಸಕ್ಕೆ ಒಂದುವರೆ ವರ್ಸ್‌ಕ್ಕೊಮ್ಮೆ ಪೆರ್ನಾಲ್‌ಗೆ ಊರಿಗೆ ಹೋತಿತ್. ಅದ್ರೂ ಅವನ ಹೆಣ್ಣ್‌ಗೆ ಹನ್ನೆರಡ್ ವರ್ಸಲಿ ಆರ್ ಗಂಡ್ ಐದ್ ಹೆಣ್ಣ್‌ಂತ ಹನ್ನೊಂದ್ ಮಕ್ಕ ಇದ್ದೊ. ಈ ಬ್ಯಾರಿಗೆ ಹಳ್ಳಿ ವ್ಯಾಪಾರ ಮಾಡ್ಕನ ಗಣ್ಮಕ ಇಲ್ಲದ ಮನೆಗಳ್‌ಲಿ ಬಾರಿ ಸಲಿಗೆ ಇರ್‌ತಿತ್. ಒಮ್ಮೆ ರಾಮಕ್ಕ, ಮೀನಾಕ್ಷಿ ಮತ್ತೆ ಜಾನೆಕಿಂತ ಮೂರು ಗೂಡೆಗಳ ಮತ್ತೆ ಅವರ ಅವ್ವ ದ್ಯಾಮನ ಮಾಪ್ಲೆ ಜಾತಿಗೆ ಸೇರ್ಸುದುಂತ ಊರಿಡಿ ಸುದ್ದಿ ಆತ್ ಆದ್ ಕಾಸರಗೋಡಿನ ಮರದ ವ್ಯಾಪಾರಿ ಕೊಗ್ಗಕಾಮ್ತಿಗಳಿಗೆ ವಿಸಯ ಗೊತ್ತಾತ್. ಕಮ್ತಿ ಊರ್‌ನವರ ಒಂದ್ ಕಡೆ ಸೇರ್ಸಿ ಏನೇ ಆದ್ರೂ ಗೂಡೆಗಳ ರಕ್ಷಣೆ ಮಾಡೊಕುಂತ ತೀರ್ಮಾ ಮಾಪ್ಲೆಗ ಸುಕ್ರವಾರ ದಿನ ಗೂಡೆಗಳ ಎಳ್ದ್ ತಕಂಡ್ ಹೋದವೆಂತ ಗುಸು ಗುಸು ಸುರು ಆತ್. ಆ ಸುದ್ದಿ ಕೇಳಿ ಊರ್‌ಲಿ ಕೋವಿ ಇರ್‌ವ ಎಲ್ಲವೂ ಗೂಡೆಗಳ ಮನೆ ಸುತ್ತ ಕಾದ್ ಕುದ್ದೊ. ದೈರ ಸಾಲದೆ ಮಾಪ್ಲೆಗ ಬಾತ್ಲೆ. ಕಮ್ತಿಗಳಿಗೆ ಬಾರಿ ಕುಸಿ ಆತ್. ಒಂದು ವಾರ ಕಳೆಕನ ಕಮ್ತಿಗಳಿಗೆ ಆರ್.ಎಸ್.ಎಸ್ ನವರ ಬೆಂಬಲ ಇತ್ತ್‌ಂತ ಗೊತ್ತಾತ್. ಹೆದ್ರಿ ಮೀನ್ ಮಾರ್ ಮಾಪ್ಲೆಗ ಊರ್ ಬುಟ್ಟು ಓಡಿ ಹೋದೊ.

ಕಾಡ್‌ಮೊಗ್ರಂತ ಹೆಸ್ರಿಗೆ ಸರಿಯಾಗಿ ಊರಿನ ಮುಕ್ಕಾಲ್ ಪಾಲ್ ಜಪ್ರ ಕಾಡ್ ತುಂಬಿತ್ ಕಾಡ್ ಪ್ರಾಣಿಗ ಮೊನ್ಸ್‌ರ್‌ಂದ ಹೆಚ್ಚಿ ಸಂಕ್ಕೆಲಿದ್ದೊ. ಅಪ್ಪ ಹೇಳ್ದ್ ಒಂದು ಕತೆ ಈಗಳೂ ನೆನ್‌ಪು ಆದೆ. ಸುಮಾರ್ ಸಾವಿರದ ಒಂಬೈನೂರ ನಲ್ವತ್ತರ ಸಮಯ. ಈಗನಾಂಗೆ ಬ್ಯಾ ಸೆಲ್‌ನ ಲೈಟ್ ಇತ್ಲೆ. ಆಗ ಕಾರ್ ಬೆಟ್ರ ಲೈಟ್‌ಂತ ಸಿಕ್ಕ್‌ತಿತ್. ಕಾರ್ ಬೆಟ್ರ ಮ್ಯಲ್ ತುತ್ತು ಗಟ್ ನಂಗೆ ಇರುವ ಒಂದು ವಸ್ತು. ಅದರ ಒಂದು ಮುಚ್ಚಳ ಇರುವ ಸಣ್ಣ ಪಾತ್ರೆಗೆ ಹಾಕಿ ಅದಕ್ಕೆ ಒಂದೊಂದೇ ಬೊಟ್ಟು ನೀರ್ ಬೀಳ್ಸ್‌ಕೆ ತಿರ್ಗಣೆ ಮುಚ್ಚಳ ಇದ್ದದೆ. ಕಾರ್ ಬೆಟ್ರಗೆ ನೀರ್ ಹಾ ಬೀಳ್ಕನ ಅದಂರ್ದ ಒಂದು ಗ್ಯಾಸ್ ಬಾತಿತ್. ಆ ಗ್ಯಾಸಿಗೆ ಕಿಚ್ಚಿ ಕೊಟ್ಟರೆ ಈಗನ ಸೋಲಾರ್ ಬೆಳ್ಕ್‌ನಾಂಗೆ ಬೆಳಿ ಬೆಳ್ಕ್ ಬಾತಿತ್. ಗ್ಯಾಸ್ ಹೋದಾಂಗೆ ಕಾರ್ ಬೆಟ್ರ ಮುಗೆತಾ ಬಾತಿತ್.

ಲೈಟಿನ ತಲೆಗೆ ಕಟ್ಟಿ ರಾತ್ರೆ ಸಿಕಾರಿಗೆ ಹೋತಿದ್ದೊ. ಚಂದ್ರನ ಬೆಳ್ಕ್‌ನಾಂಗೆ ಕಾಂಬಕನ ಬಲ್ಲೆಲಿದ್ದ ಮೊಲಂಗ ಬೆಳ್ಕ್‌ಗೆ ಓಡಿ ಬಾತಿದ್ದೊ. ಆಗ ಮೊಲಂಗಳ ದೊಣ್ಣೆಲಿ ಹೊಡ್ದ್ ಕೊಲ್ಲ್‌ತಿದ್ದೊ. ಒಮ್ಮೆ ರಾತ್ರಿ ಬೇಟೆಲಿ ಒಂದೇ ದಿನ ಎಂಟ್ ಮೊಲಂಗ ಸಿಕ್ಕಿದೊ ಗಡ.

ಕೆಲವು ಮನೆಗಳ್ಲಿ ಮೂರ್ ನಾಕ್ ಅಣ್ಣ ತಮ್ಮಂದರ್. ಒಬ್ಬಂಗೆ ಕೃಷಿ ಕೆಲ್ಸ. ಇನ್ನೊಬ್ಬ ಸಿಕಾರಿ. ಮತ್ತೊಬ್ಬ ಕೋಳಿಕಟ್ಟ. ಊರ ಪಂಚಾತಿಗೆಂತ ಬೇರೆ ಬೇರೆ ವ್ಯವಹಾರ ಇರ್ತಿತ್. ಊರ ಪಂಚಾತಿಗೆ ವಾದ ವಿವಾದಗ ಅಲ್ಲಲ್ಲೇ ಮುಗೆತಿತ್. ಗಂಡ ಹೆಣ್ಣ್‌ನ ಜಗಳಂದ ಹಿಡ್ದ್ ಗಂಡ ಸತ್ತ ಹೆಣ್ಮಕಳಿಗೆ ಅಸನಾರ್ತ ತೆಗ್ಸಿ ಕೊಡುವವರೇಗೆ ನ್ಯಾಯಗ ಬಾತಿದ್ದೊ. ಒಮ್ಮೆ ಊರ್ ಗೌಡ್ರಲ್ಲಿಗೆ ಒಂದು ಅಡ್ಕೆ ಕಳವು ದೂರ್ ಬಾತ್. ಕದ್ದಂವ ಅಂದಾಜಿ ಆದ್ರೂ ಸಾಕ್ಷಿ ಇಲ್ಲೆ. ಮೂಲೆ ಮನೆ ಮೋಂಟ ಗೌಡ್ರ ತೋಟಂದ ಶಿವರಾತ್ರಿಗೆ ಮೂರ್ ದಿನ ಮುಂದೆ ಐದ್ ಕೀಲೆ ಹಣ್ಣ್‌ಡಕೆ ಕಳವು ಮಾಡ್ಯೊಳೊ. ಯಾಗೋಳ್‌ನಾಂಗೆ ಬೆಳಿಗ್ಗೆ ಮೋಂಟ ಗೌಡ್ರು ತೋಟಕೆ ಹೋಗಿ ನೋಡ್ಕನ ಬೇಲಿ ಕರೆಲಿರುವ ಮೂರ್ ಮರಂದ ಅಡ್ಕೆ ಕಳವು ಆವುಟ್. ಕಳ್ಳರ ಹಿಡ್ಯಕೆ ಕಳ್ಳರೇ ಆಕುಂತ ಹೇಳುವಾಂಗೆ ಆಗನ ದಿನಲ್ಯೂ ಕಳ್ಳರ ಹಿಡ್ಯೊದ್ ಕಷ್ಟ. ಸಂಸಯದ ಮೇಲೆ ದೂರ್ ಕೊಟ್ರೂ ಸುಬ್ಬು ಆದು ಕಷ್ಟ.

ಮೋಂಟ ಗೌಡ್ರು ತೋಟಕ್ಕೆ ಎರ್ಡ್ ಸುತ್ತ್ ಬಂದ್ ನೋಡ್‌ಕನ ಮುಳ್ಳುಬೇಲಿ ದಾಟಿ ನೀರ್‌ಕಣಿ ಹಾರಿ ಹೋದ ಹಜ್ಜೆ ಪೊಯ್ಯಲಿ ಸರಿ ಕಂಡದೆ. ಕಾಲಿಗೆ ಜೋಡು ಹಾಕುವ ದಿನ ಅಲ್ಲ. ಸರಿ ಪರೀಕ್ಷೆ ಮಾಡಿ ನೋಡ್ಕನ ಎಡ್‌ದ ಕಾಲಿನ ಹೆಜ್ಜೆಲಿ ನಾಕ್ ಬೆರಳ್ ಮಾತ್ರ ಕಂಡದೆ. ನಮ್ಮ ಊರ್ಲಿ ಎಡದ ಕಾಲ್‌ಲಿ ಒಂದು ಬೆರ್‌ಳ್ ಕಮ್ಮಿ ಇರೊವು ಯಾರೂ ಇಲ್ಲೆ. ಮೋಂಟ ಗೌಡ್ರಿಗೆ ಹನಿಯ ತಲೆ ಬಿಸಿ ಆತ್. ಕಳ್ಳನ ಹಿಡೆದು ಹೇಂಗೇಂತ ಆಲೋಚನೆ ಮಾಡಿ ಮಾಡಿ ಅಕೇರಿಗೆ ಹೊಸಳ್ಳಿ ಜೋಯಿಸರಲ್ಲಿಗೆ ಹೋಗಿ ಪ್ರಶ್ನೆ ಕೇಳ್ದುಂತ ನಿಗಂಟ್ ಮಾಡ್ದೊ. ನಿಡ್ನಾಲ ತಿಂಗಳ ಸಂಕ್ರಮಣ ಕಳ್ದ್ ಮೂರರ್ಲಿ ಮಂಗ್ಳಾರ ದಿನ. ಗೌಡ್ರು ಹನ್ನೆರ್ಡ್ ಮೈಲ್ ನಡ್ದ್ ಜೋಯಿಸರಲ್ಲಿಗೆ ಹತ್ತ್ ಗಂಟೆಗೆ ಮುಟ್ಟಿದೊ. ಜೋಯಿಸರ್ ಬೆಳ್ಗೆನ ಊಟ ಆಗಿ ಬೆಂಚಿಲಿ ಕುದ್ದ್ ಎಲಾಡಿಕೆ ತಿಂಬಕೆ ಸುರು ಮಾಡ್ಯೊಳೊ. ಗೌಡ್ರ ನೋಡಿ “ಏನ್ ಮೋಂಟ, ಹೇಂಗೆ ಒಳಾಂತ ಇಚಾರ್ಸಿದೊ”. ಮನೆಂದ ತಕಂಡ್ ಹೋದ ನೀರ್ ಸೊಂತೆಕಾಯಿನ ಜೋಯಿಸ್‌ರ ಜಗಲಲಿ ಇಸಿ ಗೌಡ್ರು ಕೈ ಮುಗ್ದ್ ನೆಲಲಿ ಕುದ್ದೊ. ದೂರಂದ ಬಂದವಂತ ಗೌಡ್ರುನ ಇಚಾರ್ಸಿಕೆ ಆಕನ ಬಂದ ಕಾರಣನ ತಿಳ್ಸಿ ಜ್ಯೋಸರ್ ಏನ್ ಹೇಳ್ತೆಂತ ಅವರ ಮೋರೆನೇ ನೋಡ್ತಾ ಕುದ್ದೊ. ಹನಿಯ ಹೊತ್ತ್ ಕಣ್ ಮುಚ್ಚಿ ಕುದ್ದ ಜ್ಯೋಸರ್ ಕಣ್ಣ್ ಬುಟ್ಟು ಬೆರ್‌ಳ್‌ಲಿ ಯಾವುದೋ ಲೆಕ್ಕ ಮಾಡಿ ಎದ್ರ್‌ಗಿದ್ದ ಮಣೆ ಮೇಲೆ ಕವಡೆ ಹಾಕಿದೊ. ಗೌಡ್ರು ಕಾಯಂ ಗಿರಾಕಿ ಆದ ಕಾರಣ ಅವರ ನಕ್ಷತ್ರ, ರಾಶಿ ಎಲ್ಲಾ ಬಾಯಿ ಪಾಟ ಇತ್ತ್. ಶುಕ್ರ, ಶನಿ, ರಾವು, ಕೇತುಂತ ಗ್ರಹಗಳ ಹೆಸರ್ ಗಟ್ಟಿ ಹೇಳಿ ಕವಡೆನ ಮೂರ್ ಗುಂಪು ಮಾಡಿ ಅಕೇರಿಗೆ ಎರಡ್ ಕವಡೆ ಒಳ್ತ್. ಮೂಡಕ್ಕೆ ಕೈ ಮುಗ್ದ್ ಕೈ ತುಂಬಾ ಕವುಡೆ ತಕಂಡ್ ಮೇಗಡೆ ಕಾಗಡೆ ಕೈ ತಿರ್ಗಿಸಿ ಕಣ್ಣ್ ಮುಚ್ಚಿ ಕವುಡೆ ಹಾಕಿದೊ. ಈ ಸರ್ತಿ ಎರ್‌ಡ್‌ರಂಗೆ ಗುಂಪು ಮಾಡಿ ನೋಡ್ಕನ ಅಕೇರಿಗೆ ಒಂದು ಒಳ್ತ್. ಮುಂದೆನಾಂಗೆ ಜ್ಯೋಸರ್ ಕವುಡೆನ ಮೂರ್ನೆ ಸರ್ತಿ ಹಾಕಿ ಲೆಕ್ಕ ಮಾಡಿ ನೋಡ್ಕನ ಜೋಡಿ ಸರಿ ಉಟ್ಟು. ಹನಿಯ ಹೊತ್ತ್ ಆಲೋಚನೆ ಮಾಡಿ ಅಡಿಕೆ ಕಳ್ಳ ಪಡ್ಪ ದಿಕ್ಕಿಗೆ ಹೋವುಟು ಅಡಿಕೆ ಅವನ ಸ್ವಾದೀನ ಉಟ್ಟು. ಹಿಂಬೊತಿಗೆ ಕೈ ದಾಟಿದೆಂತ ಜೋಯಿಸರ್ ಬಾಯಿ ಬುಟ್ಟ್ ಹೇಳ್ದೊ.

ಕಾಡ್‌ಮೊಗ್ರಂದ ನಾಕ್ ಮೈಲ್ ದೂರಲಿ ಒಂದು ಬ್ಯಾರಿ ಅಂಗಡಿ ಉಟ್ಟು. ದೊಡ್ಡ ವ್ಯಾಪಾರ ಇಲ್ಲೆ. ಹಿಂಬೊತ್ ಐದ್ ಗಂಟೆಗೆ ಅಂಗ್‌ಡಿ ಬಾಗ್ಲ್ ತೆಗೆದ್ ರಾತ್ರೆ ಎಂಟ್ ಗಂಟೆಗೆ ಬಾಗ್ಲ್ ಹಾಕ್‌ತಿತ್. ಬ್ಯಾರಿ ಅಂಗಡಿಗೆ ಕತ್ತಲೆ ಏಳ್‌ಗಂಟೆಗೆ ಒಬ್ಬ ಬಂದ್ ಬೇಕಾದ ಸಾಮಾನ್ ತಕಂಡ್ ನಾಳೆ ಅಡಿಕೆ ಕೊಟ್ಟನೆಂತ ಹೇಳಿ ಹೋತ್. ಮಾರಣೆ ದಿನ ಹಿಂಬೊತ್ ಯಾವುದೊ ಕೇಸಿಲಿ ಕೋರ್ಟಿಗೆ ಹಾಜರಾಗದೆ ತಪ್ಪುಸಿಕೊಂಡಿದ್ದ ನಾಗಪ್ಪನ ವಾರಂಟ್ ಮೇಲೆ ಹಿಡ್ದ್ ತಕಂಡ್ ಹೋಕೆ ಇಬ್ಬೊರು ಪೋಲಿಸಿನವು ಕಡಬ ಸ್ಟೇಶನ್‌ಂದ ಬಂದಿದ್ದೊ ನಾರಾಯಣ ಪೋಲಿಸ್‌ನ ನೋಡ್‌ಕನ ಗಣಪತಿನಾಂಗೆ ಹೊಟ್ಟೆ ಬಂದುಟು. ಇನ್ನೊಬ್ಬ ಬಾಲಕೃಷ್ಣ ಪೋಲಿಸ್ ಕೆಲ್ಸಕೆ ಸೇರಿ ಮೂರ್‌ತಿಂಗ ಆವುಟು. ಪೋಲಿಸ್‌ನವು ಬ್ಯಾರಿ ಅಂಗಡಿಗೆ ಬಂದ್ ನಾಗಪ್ಪ ಎಲ್ಲಿ ಸಿಕ್ಕುದುಂತ ಇಚಾರ್‌ಸ್ತಾ ಇದ್ದೊ. ಹಳ್ಳಿ ಜನಗ ಗೊತ್ತಿದ್ದರೂ ಗುಟ್ಟ್‌ನ ಪೋಲಿಸ್‌ನವುಕೆ ಹೇಳ್‌ಕೆ ಹೆದ್ರ್‌ತಿದ್ದೊ. ನಮ್ಮ ಹೆಸ್ರ್‌ನ ಸಾಕ್ಷಿಯಾಗಿ ಸೇರ್ಸುವೆಂತ ಹೆದ್ರಿಕೆ. ಕೋರ್ಟ್‌ಗೆ ನಮ್ಮ ಹೆಸ್ರ್ ದಾಖಲಾದರೆ ಮಕ್ಕಳ ಕಾಲಕೂ ತೀರ್ಪು ಬಾವ ದೈರ್ಯ ಯಾರಿಗೂ ಇಲ್ಲೆ. ಅದ್‌ಕೆ ಹಿರಿಯೊವು ಹೇಳ್‌ವ ಮಾತ್ "ಕೇಸ್‌ಲಿ ಗೆದ್ದವ ಸೋತತ್, ಸೋತವ ಸತ್ತತ್‌ಂತ". ಕತ್ತಲೆ ಆತಾ ಬಾತ್. ಪೋಲಿಸ್‌ನೊವು ಊರ ಪಟೇಲ್‌ರಲ್ಲಿ ರಾತ್ರೆ ನಿಲ್ಲ್‌ವ ಅಂದಾಜಿಲಿ ಹೋದೊ. ಪಟೇಲ್‌ರಲ್ಲಿಗೆ ಯಾರೇ ಸರ್ಕಾರ ಕೆಲ್ಸದವು ಬಂದರೂ ಒಳ್ಳೆ ರೀತಿಲಿ ಊಟ ಉಪಚಾರ ಮಾಡ್ಸಿ ಕಳ್‌ಸ್ತಿದ್ದೊ. ಕೋರ್ಟ್‌ನ ಪೇದೆ ಮಣೆಗಾರರ್, ಸರ್ವೆವು ಊರಿಗೆ ಬಂದರೆ ಪಟೇಲ್ ಪರಮೇಶ್ವರ ಗೌಡ್ರಲ್ಲಿ ರಾತ್ರೆ ನಿಲ್ಲುವ ಸಂಪ್ರದಾಯ ಇತ್. ಪಟೇಲ್‌ರ್‌ಗೆ ತಾಲೂಕಿಲೇ ಒಳ್ಳೆ ಹೆಸ್ರ್ ಇತ್.

ಯಾವುದೋ ಕೆಲ್ಸಲಿ ಪಟೇಲ್‌ರಲ್ಲಿಗೆ ಬಂದ ಮೋಂಟ ಗೌಡ್ರು ಅವರ ತೋಟಂದ ಅಡ ಕಳವುನ ಹೇಳ್ದೆ. ಪಟೇಲ್‌ರ್ ಅಲ್ಲೆ ಇದ್ದ ಪೋಲಿಸ್‌ನವುಕೆ ವಿಸಯ ತಿಳ್ಸಿದೊ. ಹನಿಯ ಹೊತ್ತ್ ಆಲೋಚನೆ ಮಾಡ್ದ ನಾರಾಯಣ ಪೋಲಿಸ್ ಹುಸಿನೆಗೆ ನೆಗಾಡಿ ಜೋಬಿಲಿದ್ದ ಹೊಡಿ ಬುರ್ಡೆನ ತೆಗ್ದ್ ಹೊಡಿ ಎಳ್ದ್ ಎರ್ಡ್ ಸರ್ತಿ ಕೆಮ್ಮಿ ಹೇಳ್ತ್. ಪಟೇಲ್‌ರೆ ನೀವು ಹೇಳ ಲಕ್ಷಣ ಪ್ರಕಾರ ಅಡಿಕೆ ಕದ್ದ ಕಳ್ಳ ನಮ್ಮ ಸ್ಟೇಶನ್ ಲಾಕಪ್‌ಲಿ ಉಟ್ಟುಂತ ಹೇಳ್ತ್. ಅಂವ ಗೋಪಿ ಹೆಂಗ್ಸ್‌ನ ಮೊಟ್ಟೆ ಇಸುವ ಹೇಂಟೆನ ಕದ್ದ್ ಸಿಕ್ಕಿ ಬಿದ್ದುಟು. ಅವನ ಹೆಸ್ರ್ ಕಂಬಳಿ ಅಣ್ಣಪ್ಪಂತ ಸಣ್ಣ ಪುಟ್ಟ ತಕ್ಷೀರ್ ಮಾಡಿ ಮೂರ್ ತಿಂಗಳಿಗೊಮ್ಮೆ ಜೈಲಿಗೆ ಹೋದೆ. ಜೈಲ್‌ಲಿ ಒಂದು ಕಂಬಳಿ ಅವಂಗೇ ತೆಗ್ದ್ ಇಸಿಯೊಳ ಗಡ. ಹಾಂಗೆ ಕಂಬಳಿ ಅಣ್ಣಪ್ಪಂತ ಹೆಸ್‌ರ್ ಬಂದುಟುಂತ ವಿವರ ಹೇಳ್ತ್. ಅಂವ ಸಣ್ಣ ಹೈದ ಆಗಿರ್ಕನ ಅಂಬುಕಾಯಿ ಪಂತಲಿ ಕಾಲ್ ಜಾರಿ ಬಿದ್ದ್ ಎಡ ಕಾಲಿನ ಕಿಣಿ ಬೆರಳ್ ತುಂಡಾವುಟುಂತ ಪೋಲಿಸ್ ಹೇಳ್ಕನ ಮೋಂಟ ಗೌಡ್ರ್‌ಗೆ ಅಡಿಕೆ ಕಳ್ಳ ಯಾರ್‌ಂತ ಅಂದಾಜಾತ್.

ಅಣ್ಣಪ್ಪ ಲಾಕಪ್ಪಿಲಿ ಇರುದರ ಕೇಳಿ ಅವಂಗೆ ಜೀವಾವಧಿ ಶಿಕ್ಷೆ ಆದರೆ ಬರುವ ವರ್ಸ ನಡೆವ ಕೋಲಲಿ ಸಿರಾಡಿ ದೆವ್ವಕೆ ಜೋಡು ಹಂದಿ ತಲೆ ಕಡ್ಸಿನೆಂತ ಮೋಂಟ ಗೌಡ್ರು ತಲೆ ಮೈ ಮೇಲ ಹರ್ಕೆ ಹೇಳಿಕಂಡೊ. ಬೇರೆ ಬೇರೆ ಕೇಸಿಲಿ ಹತ್ತ್ ವರ್ಸ ವಿಚಾರ್‌ಣೆಂತ ಜೈಲ್‌ಲಿ ಇದ್ದ್ ಅದರ ಮೇಲೆ ಆರ್ ವರ್ಸ ಕಟಿಣ ಶಿಕ್ಷೆ ಆತ್. ಶಿಕ್ಷೆ ಕಳ್ದ್ ಜೈಲಿಂದ ಹೊರಗೆ ಬಾಕನ ಅಣ್ಣಪ್ಪಂಗೆ ಎಂಬತ್ತೆಂಟ್ ವರ್ಸ. ಈಗಲೂ ಊರ್‌ಲಿ ಕಳ್ಳತನ ನಡ್ದರೆ ಅಣ್ಣಪ್ಪನ ಮೇಲೆನೇ ಕಂಣ್.

ಗುಂಡಿಗೆ ಬಿದ್‌ಸತ್ತ ಗುಡ್ಡಪ್ಪ

ಅಯ್ಯೋ! ಅಯ್ಯೋ! ಗುಂಡಿಗೆ ಬೀತ್ ಬೇಗ ಬನ್ನಿಂತ ಹೆಣ್ಮಕ ಮನೆಕಡೆಂದ ಬೊಬ್ಬೆ ಹೊಡೆದು ತೋಟಲಿ ಕೆಲ್ಸ ಮಾಡೊವುಕೆ ಕೇಳ್ತ್. ಗುಡ್ಡಪ್ಪನ ಅಕೇರಿ ತಮ್ಮ ಲಿಂಗಪ್ಪನ ಮನೆಲಿ ಆ ದಿನ ಸ್ವಸಾಯ ಗುಂಪ್‌ನ ಕೆಲ್ಸ ನಡೆತಾ ಇತ್ತ್. ಲಿಂಗಪ್ಪನ ಮನೆ ಹಿಂದೆ ಇರ್ವ ಪಾಯಿಕಾನೆ ಗುಂಡಿಗೆ ಹಾಕಿದ ನೀರ್ ಸರಾಗ ಹೋತಿತ್ತ್‌ಲ್ಲೆ. ಮೇಲೆಂದ ನೋಡ್ಕನ ಎಲ್ಲಾ ಸರಿ ಇತ್ತ್. ಗುಂಡಿ ಒಳಗೆ ತೊಂದರೆ ಉಟ್ಟುಂತ ಅಂದಾಜಿ ಮಾಡಿ ಗುಂಡಿಗೆ ಮುಚ್ಚಿದ ಹಾಸ್ ಕಲ್ಲ್ ತೆಗ್ದ್ ಗುಂಡಿನ ಮನಾರ ಮಾಡೊಕುಂತ ಕಳ್ದ್ ಆಟಿ ಅಮಾಸೆಂದ ಜನ ಹುಡ್ಕ್‌ತ್ತಾ ಇತ್ತ್. ಆದರೆ ಪಾಯಿಕಾನೆ ಗುಂಡಿಗೆ ಇಳ್ದ್ ಕೆಲ್ಸ ಮಾಡ್ಕೆ ಊರಿನವು ಯಾರೂ ಒಪ್ಪಿತ್ಲೆ. ಕೆಲ್ಸ ಕಷ್ಟಂತ ಅಲ್ಲ. ಪಾಯಿಕಾನೆ ಗುಂಡಿ ಮನಾರ ಮಾಡ್ದವಂತ ಎಲ್ಲಾರ್ ಡೋಂಗಿ ಮಾಡುವೊಂತ ಮನ್ಸಿನ ಒಳಗೆ ಒಂದು ಅಳ್ಕ್. ಇಂದಿನ ದಿನಲಿ ಹಣ ಸಂಪಾದನೆ ಆದರೆ ಬೊಂಬಾಯಿ, ದುಬೈಂತ ಹೇಳ್‌ವ ದೂರದ ಊರ್ಲಿ ಯಾವ ಕೆಲ್ಸ ಮಾಡ್ಕು ಹೇಸಿಗೆ ಇಲ್ಲೆ. ಊರ್ಲಿ ಅಂಬ್ಲಿ ಉಂಡರೆ ಹೆಸ್‌ರ್ ಪಾಯಿಸ ಉಂಬೊದುಂತ ಕರ್ದ್ ಕರ್ದ್ ಹೇಳ್ವೆ. ಎರ್ಡ್ ಕೆ.ಜಿ ಅಡ್ಕೆ ಮಾರ್ಕೆ ಹೋಕನ ಅರ್ಧ ಕಿ.ಮಿ ದೂರ ಇದ್ದರೂ ರಿಕ್ಷಾ ಬಾಡಿಗೆ ಮಾಡಿ ಇಪ್ಪತ್ತೈದ್ ರೂಪಾಯಿ ಕೊಟ್ಟು ಅಂಗಡಿ ಎದ್ರ್ ರಾಜರಂಗೆ ಇಳ್ದ್‌ವೆ. ಕೆಲ್ಸ್‌ಲಿ ದೊಡ್ಡದ್, ಸಣ್ಣದ್, ಮೇಲ್, ಕೀಳ್ ಸುಲಬ, ಕಷ್ಟಂತ ನೋಡದೆ ಪಾಲಿಗೆ ಬಂದದ್ ಪಂಚಾಮೃತಂತ ತಿಳ್ದ್ ಕೆಲ್ಸ ಮಾಡ್ರೆ ಜೀವನಲಿ ಏಳಿಗೆ ಆಕೆ ಸಾಧ್ಯ ಉಟ್ಟುಂತ ಹಿರಿಯರ ಮಾತ್.

ಆ ವಿಸಯ ಹಾಂಗಿರ್ಲಿ, ಈಗ ಲಿಂಗಪ್ಪನ ಮನೆಂದ ಬೊಬ್ಬೆನ ಕೆಬಿ ಕೊಟ್ಟು ಆಲ್ಸಿಕನ ಏನೋ ಅಪಾಯ ನಡ್ದುಟುಂತ ಸಂಸಯ ಬಾತ್. ಲಿಂಗಪ್ಪ ಪರ ಊರ್‌ನ ಎರ್ಡ್ ಜನರ ತಂದ್ ಎರ್ಡ್ ಸಾವಿರ ಕೊಟ್ಟನೆಂತ

ಹೇಳಿ ಆದಿನ ಬೆಳಿಗ್ಗೆ ಎಂಟ್ ಗಂಟೆಗೆ ಪಾಯಿಕಾನೆ ಗುಂಡಿನ ಮನಾರ ಮಡ್ವ ಕೆಲ್ಸ ಸುರು ಮಾಡ್ಸಿಟು. ಕೆಲ್ಸದವರ ಮಾತಿಲಿ ಅವು ದಾರವಾಡ ಕಡೆವುಂತ ಗೊತ್ತಾತಿತ್. ಆ ಕೆಲ್ಸ ಮಾಡ್ವ ಜನಗ ಸರಾಯಿ ಕುಡ್ಯದೆ ಗುಂಡಿಗೆ ಇಳೆದಿಲ್ಲೆ. ಅಂದು ಅವು ಹನಿಯ ಹೆಚ್ಚೆ ಕುಡ್ದ್ ಕೆಲ್ಸಕ್ಕೆ ತಯಾರಾದೊ. ಗುಂಡಿಗೆ ಮುಚ್ಚಿದ ಹಾಸ್ಕಲ್ಲ್ ತೆಗ್ದ್ ಒಳಗೆ ಕತ್ತಲೆ ಇದ್ದ ಕಾರ್ಣ ಲೈಟ್ ಬೆಳ್ಕ್ ಹಾಕಿ ನೋಡ್ಕನ ನೀರ್ ಬೀಳ್ವ ಪೈಪಿಗೆ ಹಾಲೆ ಮರದ ಬೇರ್ ಸುತ್ತಿಹಾಕಿ ನೀರ್‌ನ ತಡೆತಾವುಟ್ಟು. ಹನಿಯ ಹೊತ್ತ್ ಗುಂಡಿನ ಪರೀಕ್ಷೆ ಮಾಡಿ ಎರ್ಡ್ ಕಲ್ಲ್‌ಗಳ ಕರೆಗೆ ಹಾಕಿ ಗುಂಡಿಗೆ ಇಳೆಕೆ ಅಂದಾಜಿ ಮಾಡ್ದೊ. ಇಂತ ಕೆಲ್ಸನ ದಾರವಾಡ ಮುನ್ಸಿಪಾಲಿಟಿಲಿ ಮಾಡಿ ಅಬ್ಬೆಸ ಇದ್ದ ಕೆಲ್ಸದವ್ರುಕೆ ಇದ್ ಒಂದು ದೊಡ್ಡ ಸಂಗತಿಯೇ ಅಲ್ಲಂತ ಸಸಾರ ಕಂಡತ್. ಎರ್ಡ್ ಸಾವಿರದ ಆಸೆಂದ ಹೆಚ್ಚಿಗೆ ಆಲೋಚನೆ ಮಾಡ್ಕೆ ಹೋತಿಲ್ಲೆ. ಒಬ್ಬ ಗುಂಡಿಲಿ ವಿಸಗಾಳಿ ಇದ್ದದೆ ಅಂಬೇರ್ಪು ಮಾಡ್ಬಡಂತ ಅವನ ತಡ್ತ್. ಒಂದು ಚಿಮ್ನೆಣ್ಣೆ ದೀಪಕೆ ಬೊಳ್ಳಿ ಕಟ್ಟಿ ಹೊಂಡದೊಳಗೆ ಇಳ್ಸಿತ್. ದೀಪ ಕೆಟ್ಟ್ ಹೋದರೆ ಹೊಂಡಲಿ ವಿಸಗಾಳಿ ಉಟ್ಟುಂತ ಅರ್ತ. ಆಗ ಗುಂಡಿಗೆ ಇಳ್ದ್‌ರೆ ಜೀವಕ್ಕೆ ಅಪಾಯ ಕಂಡಿತ. ಕಾಗಡೆ ಇಳ್ಸಿದ ದೀಪ ಎರ್ಡ್ ನಿಮ್ಸ ಹೊತ್ತಿಕೊಂಡೆ ಇತ್ತ್. ದೀಪನ ಮೇಲೆ ತೆಗ್ದ್ ಇನ್ನ್ ಯಾವ ಅಪಾಯ ಇಲ್ಲೆಂತ ಒಬ್ಬ ಗುಂಡಿಗೆ ಇಳ್ತ್. ಅದ್ ಅಂತ ದೊಡ್ಡ ಗುಂಡಿ ಅಲ್ಲ. ಹೆಚ್ಚಿಂತೇಳ್ರೆ ಎಂಟ್ ಫೀಟ್ ಗುಂಡಿ ಇರ್ದು. ಗುಂಡಿಗೆ ಇಳ್ದಂವ ಅಡಿಗೆ ಮುಟ್ಟ್‌ಕನ ಬೊಬ್ಬೆ ಹೊಡೆಕೆ ಸುರು ಮಾಡ್ತ್. ಮೇಲೆಂದ ನೋಡ್ತಾ ಇದ್ದಾಂಗೆ ಇಳ್ದಂವ ಗುಂಡಿಲಿ ಬಿದ್ದ್ ಹೋತ್. ಅಪಾಯದ ಸಂಸಯ ಬಂದ್ ಮೇಲೆ ಇದ್ದಂವ ಗುಂಡಿಗೆ ಇಳ್ದ್ ಬಿದ್ದಂವನ ರಟ್ಟೆ ಹಿಡ್ದ್ ಮೇಲೆ ತಾಕೆ ನೋಡ್ರೆ ಅವನೂ ಬೋದ ತಪ್ಪಿ ಹೊಂಡಕೆ ಬೀತ್.

ತೋಟಲಿ ಕೆಲ್ಸ ಮಾಡ್ತಿದ್ದ ಗುಡ್ಡಪ್ಪ ಮತ್ತೆ ಅವನೊಟ್ಟಿಗೆ ಇದ್ದ ಮೂರ್ ಜನಗ ಅಷ್ಟೊತ್ತಿಗೆ ಗುಂಡಿ ಹಕ್ಕಲೆ ಬಂದ್ ಮುಟ್ಟದೊ. ಅಪಾಯನ ಗ್ರೇಸಿದ ಗುಡ್ಡಪ್ಪ ಕೈಲಿದ್ದ ಕತ್ತಿನ ದೂರ ಇಟ್ಟ್ "ಸ್ವಾಮಿಯೇ ಶರಣಂ ಅಯ್ಯಪ್ಪಂತ" ಹೇಳಿ ಗುಂಡಿಲಿ ಬಿದ್ದವರ ಬಚಾವು ಮಾಡ್ಕೆ, ಒಂದೇ ಗಳಿಗೆಲಿ ಸ್ವಂತ ಜೀವಕ್ಕೆ ಉಪಾಯ ಉಟ್ಟುಂತ ಗೊತ್ತಾದರೂ ಹೆದ್ರದೆ ದೇವ್ರ ಮೇಲೆ ಬಾರ ಹಾಕಿ ಗುಂಡಿಗೆ ಹಾರ್ತ್. ಮೂರ್ ಜನ ಏನೂ ಮಾಡಿಕೆ ತೀರದೆ ಮೇಲೆ ಚಪ್ಪೆ ಮೋರೆ ಹಾಕಿ ನಿತ್ತಿದ್ದೊ. ಗುಂಡಿಗೆ ಇಳ್ದ್ ಗುಡಪ್ಪನೂ ವಿಸಗಾಳಿಗೆ ಸಿಕ್ಕಿ ಅಲ್ಲೇ ಬಿದ್ದೋತ್. ಗುಂಡಿಗ ಇಳೆಕೆ ಬೇರೆ ಯಾರಿಗೂ ದೈರ ಬಾತ್ಲೆ. ಬೊಬ್ಬೆ ಕೇಳಿ ಸುತ್ತ ಮುತ್ತಂದ ಹತ್ತಿಪ್ಪತ್ತ್ ಜನ ಬಂದ್ ಸೇರ್ದೊ. ಯಾರಿಂದಳೂ ಏನೂ ಮಾಡ್ಕೆ ಬೊತ್ತದೆ ಒಳಗೆ ಬಿದ್ದವು ಅಲ್ಲೇ ಹೆಣ ಆದೋ.

ಒಬ್ಬರ ಮೋರೆ ಒಬ್ಬ ನೋಡುದಲ್ಲದೆ ಯಾರ ಬಾಯಿಂದಲೂ ಮಾತ್ ಹೊರ್ದುದಿಲ್ಲೆ. ಅಲ್ಲಿ ಸೇರ್ದವರ್ಲಿ ಗಾಡಿ ಗಣಪಯ್ಯ ಒಸಿ ವ್ಯವಹಾರ ತಿಳ್ದವು. ಓಂಗೆ ಎಲ್ಲವೂ ನಿತ್ತ್‌ಕಂಡ್ ನೋಡ್ರೆ ಆಕಿಲ್ಲೆ. ಕೂಡ್ಲೆ ಮನೆವು ಯಾರ್ನಾರ್ ಪೋಲಿಸ್ ಟೇಷನ್‌ಗೆ ಕಳ್ಸಿ ದೂರು ಕೊಡೊಕುಂತ ಹೇಳ್‌ಕನ ಎಲ್ಲವೂ ಒಪ್ಪಿ ಲಿಂಗಪ್ಪನ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಪಿರಿಯಣ್ಣ ನವರಲ್ಲಿಗೆ ಕಳ್ಸಿದೊ. ಕೂಡ್ಲೆ ಜೀಪು ಬಾಡಿಗೆ ಮಾಡಿ ಹದಿನೈದ್ ಕಿ.ಮಿ ದೂರದ ಟೇಸನ್‌ಗೆ ಹೋಗಿ ಅರ್ಜಿ ಬರ್ದ್ ಕೊಟ್ಟೊ. ಅಲ್ಲಿದ್ದ ಎಸ್.ಐ ರಾಮರಾವ್

ಅರ್ಜಿನ ಓದಿ ಮೇಜಿ ಮೇಲೆ ಇಸಿ ಲಿಂಗಪ್ಪನ ಕರ್ದ್ ನಾಲ್ಕೈದ್ ಅಡ್ಡ ಸವಾಲ್ ಹಾಕಿ ವಿಸಯ ತಿಳ್ಕಂತ್. ಒಟ್ಟಿಗಿದ್ದ ಹಿರಿಯಣ್ಣನವು ಲಿಂಗಪ್ಪ ಬಾರಿ ಬಡಂವ ನೀವು ಜಾಗೆಗೆ ಬಂದ್ ಉಪಕಾರ ಮಾಡೊಕುಂತ ಕೇಳಿಕೊಂಡೊ. ಅಲ್ಲಿಂದ ಹೆಣ ಪರೀಕ್ಷೆ ಮಾಡ್ಕೆ ಡಾಕ್ಟ್ರ ಕರೆಕೆ ಹೋದೊ. ಎಸ್.ಐ ಬಂದ್ ಹೆಣಗಳ ಮೇಲೆ ತಾಕೆ ಹೇಳ್ದೊ. ಒಂದು ಪಂಪು ಸ್ಟಾರ್ಟ್ ಮಾಡಿ ಗುಂಡಿಗೆ ನೀರ್ ಹಾಕಿ ವಿಸಗಾಳಿ ಎಲ್ಲಾ ಹೊರಗೆ ಹೋದ ಮೇಲೆ ಜನ ಸೇರಿ ಹೆಣಗಳ ಎತ್ತಿ ಮೇಲೆ ತಂದ್ ಸಾಲ್‌ಲಿ ಮಲ್ಗಿಸ್ದೊ. ಹೆಣಗಳ ಸುತ್ತ ಏಳೆಂಟ್ ಜನರ ನಿಲ್ಸಿ ಪೊಟೋ ತೆಗ್‌ದ ಮೇಲೆ ಡಾಕ್ಟ್ರ್ ಹೆಣ ಪರೀಕ್ಷೆ ಸಾಸ್ತ್ರ ಮಾಡಿ ಅರ್ಧಗಂಟೆಲಿ ಮುಗ್ಸಿದೊ. ಡಾ। ರಾಜಕುಮಾರನವು ಕೊಟ್ಟ ಹಣನ ಮುಟ್ಟಿಲ್ಲೆ. ಎಸ್.ಐ ಪೋಲಿಸ್ ಜೀಪ್‌ಲಿ ಬಂದರೂ ಜೀಪು ಬಾಡಿಗೆ ಹೆಸ್ರ್‌ಲಿ ಲಿಂಗಪ್ಪಂದ ಐದ್ ಸಾವಿರ ಪೀಂಕ್ಸಿತ್. ಹೆಣ ಕೊಯ್ಯುವ ನಾಣು ನಾಯ್ಕಂಗೆ ಒಂದು ಬಾಟ್ಲ ಕೊಟ್ರೆ ಮಾತ್ರ ಅಂವ ಹೆಣನ ಮುಟ್ಟುದು. ಇದ್ ಅಂವನ ಮಾಮೂಲ್ ಕಂಡಿಸನ್. ಇಲ್ಲೆಂತೇಳ್ರೆ ಡಾಕ್ಟ್ರ ಹೇಳ್ರೂ ಅಂವ ಒಪ್ಪಿಕಿಲೆ. ಮಾಮೂಲಿನಾಂಗೆ ನಾಣು ನಾಯ್ಕಂಗೆ ಬ್ರಾಂಡಿ ಕೊಟ್ಟು ಕೆಲ್ಸ ಮುಗ್ಸಿ ಹೊರ್‌ಡ್‌ಕನ ಅವನ ಕೆಲ್ಸದ ರೇಟ್ ರೂಪಾಯಿ ಐನೂರ್ ಕೊಟ್ಟು ಕಳ್ಸಿದೊ. ನಾಣು ನಾಯ್ಕ ದೊಡ್ಡ ಮನ್ಸ್ ಮಾಡಿ ಐನೂರರ್ಲೆ ಕೆಲ್ಸ ಮುಗ್ಸಿತ್.

ಆಕಸ್ಮಿಕ ಸಾವುಂತ ಡಾಕ್ಟ್ರ ಸರ್ಟಿಫಿಕೇಟ್ ಮತ್ತೆ ಪೋಲಿಸ್ ರಿಪೋರ್ಟ್ ಹೋದ ಮೇಲೆ ಗುಡ್ಡಪ್ಪನ ಹೆಣ್ಣ್ ವಾರಿಜಂಗೆ ಮೂರ್ ತಿಂಗ ಕಳ್ದ್ ಮರಣ ದಾಕ್‌ಲೆ ಸಿಕ್ಕಿತ್. ಆಕಸ್ಮಿಕ ಸತ್ತವನ ವಾರೀಸ್‌ದಾರರಿಗೆ ಹತ್ತ್ ಸಾವಿರ ಪರಿಹಾರ ಸಿಕ್ಕುವ ಸರ್ಕಾರದ ಕಾನೂನು ಉಟ್ಟು. ಗ್ರಾಮ ಪಂಚಾಯತ್, ನಾಡಕಚೇರಿ, ತಾಲೂಕು ಆಫೀಸ್, ಪೋಲಿಸ್ ಟೇಸನ್ನಂತ ಆರ್ ಏಳ್ ತಿಂಗ ಓಡಾಡಿ ಅಕೇರಿಗೆ ಹತ್ತ್ ಸಾವಿರ ಪರಿಹಾರ ಹಣ ಬಂದುಟುಂತ ವಾರಿಜಂಗೆ ಗೊತ್ತಾತ್.

"ದೇವ್ರು ಕೊಟ್ರು ಪೂಜಾರಿ ಬಿಡಂತ" ಗಾದೆನಾಂಗೆ ವಾರಿಜ ಹಣಕ್ಕೆ ಪಂಚಾಯತ್ ಆಫೀಸಿಗೆ ನಾಲ್ಕೈದ್ ಸರ್ತಿ ಹೋದ್ರು ಪ್ರತಿ ಸರ್ತಿ ಒಂದೊಂದು ಸುಳ್ಳು ನೆಪ ಹೇಳಿ ಹೆಂಗ್ಸಿಗೆ ಸಿಕ್ಕುವ ಹಣಲಿ ಪಾಲ್ ಹೊಡೆಕೆ ಕಾಯತಾ ಇದ್ದೊ. ಬೇರೆಯವರ ಹಣ, ವಸ್ತುಗ ನಾವುಗೆ ಬಿದ್ದ್ ಸಿಕ್ಕರೂ ಬೇಡಂತ ಹೇಳ್ವ ಸರ್ಕಾರದ ಜನಗ ಇದ್ದರೆ ಲಂಚ ಎಂಬ ಸಬ್ದ ಕೇಳಿಕೆ ಸಿಕ್ಕದ್. ಆದರೆ ಈಗನ ಕಾಲಲಿ ಹಣ ಕಂಡರೆ ಸತ್ತ ಹೆಣನೂ ಬಾಯಿ ಬುಟ್ಟದೆಂತ ಹೇಳುವ ಗಾದೆ ಮಾತ್ ದಿನ ಸಿತ್ಯ ನಡೆತಾ ಉಟ್ಟು. ಬೇರೆವು ಏನೂ ಕೆಟ್ಟ್‌ದ್ ಮಾಡ್ರೂ ಪ್ರತಿಯೊಬ್ಬ ಅವನ ಮಟ್ಟಿಗೆ ಪ್ರಾಮಾಣಿಕ ಆದರೆ ಬದಲಾವಣೆ ಸಾಧ್ಯ. ಮಂತ್ರಿ ಕೋಟಿ ತಿಂದದೆ ನಾ ನೂರ್ ತಿಂದರೆ ಏನ್‌ಂತ ಪ್ರಶ್ನೆ ಮಾಡ್‌ವ ಜನಂಗ ಇರ್ಕನ ಏನ್ ಮಾಡ್ಕೆ ಸಾಧ್ಯ ಉಟ್ಟ್? ಆದ್ರೂ ಕೆಟ್ಟ ಕೆಲ್ಸನ ಊರ್ಲಿ ಬಹುಮತದ ಜನಗ ಮಾಡ್ರೂ ಅದ್ ತಪ್ಪು ಕಂಡಿತ. ಒಂದೂರ್ಲಿ ಹಾಲಿಂದ ಹೆಚ್ಚ್ ಆಲ್ಕೋಹಾಲ್‌ನ ಜನ ಕುಡ್ಚವೆ. ಆಗ ಬಹುಮತದ ಜನಗ ಕುಡೆವ ಆಲ್ಕೋಹಾಲ್‌ನ ಎಲ್ಲೊವು ಕುಡೆಕುಂತ ಹೇಳ್ಕೆ ಸಾಧ್ಯ ಉಟ್ಟಾ? ನಾವು ಆಲೋಚನೆ ಮಾಡೊಕು!.

ವಾರಿಜ ಹೆಂಗ್ಸ್‌ನ ಕಷ್ಟ ನೋಡಿ ಯಾರೋ ಊರಿನವು ಪರಿಹಾರ ಬಂದ ಹಣನ ಪಂಚಾಯತ್‌ನವು ತಿಂದ್ ಹಾಕೊಳೊಂತ ತಳ್ಳಿ ಅರ್ಜಿ ಬರ್ದೊ. ಮೂರ್ ತಿಂಗ ಕಳ್ದ್ ತನಿಕೆ ಬಂದ ಆಫೀಸರ್ ಪಂಚಾಯತ್ ಕಚೇರಿಲಿ ಕುದ್ದ್ ತನಿಕೆ ನಡ್ಸಿ ಕೇಸ್ ಮೇಲೆ ಹೋಗದಂಗೆ ಪಂಚಾಯತ್ ನವುಕೆ ಸೂಚನೆ ಕೊಟ್ಟು ಕೂಡ್ಲೆ ಸಂಬಂದ ಪಟ್ಟವುಕೆ ಹಣ ಕೊಡೊಕುಂತ ಷರಾ ಬರ್ದ್ ಹೋದೊ. ಪಾಲ್ ಹೊಡೆಕೆ ಕಾಯತಿದ್ದೊವು ಮತ್ತೂ ಒಂದು ತಿಂಗ ದೂಡ್ಡೊ. ಅಷ್ಟೊತ್ತಿಗೆ ಪಂಚಾಯತ್‌ಗೆ ಓಟ್ ನಡ್ದ್ ಅಧ್ಯಕ್ಷ ಹರಿಯಣ್ಣನ ಕೈಲಿ ಎರ್ಡ್ ಸರ್ತಿ ಸೋತ ಕಾರ್ಯಪ್ಪಣ್ಣನವು ಹರಿಯಣ್ಣನ ಬಾರಿ ಓಟ್‌ಲಿ ಹಿಂದೆ ಹಾಕಿ ಗೆದ್ದ್ ಬಂದೊ.

ಹೊಸ ಪಂಚಾಯತ್ ಸಭೆ ನಡ್ದ್ ಸತ್ತವನ ಹೆಣ್ಣಿಗೆ ಬಂದ ಪರಿಹಾರದ ಹಣ ಇನ್ನೂ ಕೊಡದೆ ಉಳ್ಸಿದ್ ಯಾಕೆಂತ ಚರ್ಚೆ ಆಗಿ ದಾಕಲೆ ನೋಡ್ಕನ ಯಾರೋ ಎಡ ಹೆಬ್ಬೆಟ್ಟ್ ಹಾಕಿ ಹಣ ಪಡ್ದ ದಾಕಲೆ ಕಂಡದೆ. ಹಣ ದುರುಪಯೋಗ ಮತ್ತೆ ಮೋಸ ಮಾಡ್ದ್ ತಕ್ಷೀರಿಗೆ ಕ್ರಿಮಿನಲ್ ಅಪರಾದ ಕಲಂ 351ರ ಪ್ರಕಾರ ಕೋರ್ಟ್‌ಲಿ ದಾವೆ ದಾಕಲಾತ್. ಮುಖ್ಯ ಆರೋಪಿ ಗ್ರಾಮ ಪಂಚಾಯತ್ ಅಧ್ಯಕ್ಷರಾಗಿದ್ದ ಹರಿಯಣ್ಣ, ಎರಡನೇ ಆರೋಪಿ ಕಾರ್ಯದರ್ಶಿ ಮೋಹನಕುಮಾರ್, ಬಿಲ್ ಕಲೆಕ್ಟರ್ ಮಾದವ ಸೇರಿ ಮೂರ್ ಜನರ ಮೇಲೆ ಕೋರ್ಟ್‌ಲಿ ಕೇಸ್ ಸುರು ಆತ್. ಕ್ರಿಮಿನಲ್ ಕೇಸಾದ ಕಾರಣ ತಿಂಗಳಿಗೆ ಎರ್ಡ್ ವಾಯ್ದೆ ಆತಿತ್ತ್. ಕೇಸ್‌ಲಿ ಸಾಕ್ಷಿ ತನಿಖೆ, ದಾಖಲೆಗಳ ಪರಿಶೀಲನೆ ಮತ್ತೆ ವಿಚಾರ್‌ಣೆಂತ ಹಕ್ಕಲೆ ಹಕ್ಕಲೆ ನಾಲ್ಕ್ ವರ್ಸ್ ಕಳ್ತ್. ಎರ್ಡ್ ಕಡೆ ವಕೀಲ್‌ರ್‌ಗ ಮೂರ್ ಮೂರ್ ದಿನ ವಾದ, ಪ್ರತಿವಾದ ನಡ್ಸಿದೊ. ವಕೀಲ್‌ರ್‌ಗ ಕಕ್ಷಿದಾರರಿಗೆ ನೀವು ಕಂಡಿತ ಗೆದ್ದರೆಂತ ದೈರ ಹೇಳುದು ಕೋರ್ಟ್‌ಲಿ ಮಾಮೂಲು. ಪ್ರತಿ ವ್ಯಾದೆಗೆ ಹಾಜರಾಗಿ ಬೆಳಿಗ್ಗೆ ಹತ್ತ್ ಗಂಟೆಂದ ಹಿಂಬೊತು ಐದ್ ಗಂಟೆವರೇಗೆ ಕೋರ್ಟ್ ಜಗಲಿಲಿ ನಿತ್ತ್ ನಿತ್ತ್ ಸಾಕ್ ಸಾಕಾಗಿ ವಾದಿ ಪ್ರತಿವಾದಿಗ ಮುನ್ಸಿಫರಿಗೆ ಮನ್ಸಿಲೇ ಬೊಯ್ಯೊತಿದ್ದೊ. ಬಾಯಿ ಬುಟ್ಟು ಬೈದರೆ ಕೋರ್ಟ್ ನಿಂದನೆ ಕೇಸ್ ಇವರ ಮೇಲೆ ಬಿದ್ದದೆ. ಆ ಹೆದ್ರಿಕೆಗೆ ಮನ್ಸಿಲೇ ಸಾಪ ಹಾಕ್‌ತಿದ್ದೊ.

ಅಂತೂ ಇಂತೂ ಕೇಸ್ ವಾದ ಪ್ರತಿವಾದ ಆಲ್ಸಿದ ಜಡ್ಜರ್ ತೀರ್ಪುನ ಒಂದು ವಾರದ ಮಟ್ಟಿಗೆ ತಡೆ ಹಿಡ್ದ್ ನಿಲ್ಸೊಳೊ. ಸರ್ಕಾರಿ ವಕೀಲ ಯಂ. ಎಸ್. ಗೌಡ್ರು ಪಂಚಾಯತ್ ಅಧ್ಯಕ್ಷರಿಗೆ ಕ್ರಿಮಿನಲ್ ಕಲಂ ಪ್ರಕಾರ ಮೂರ್ ವರ್ಸ್ ಕಟಿಣ ಜೈಲ್ ಸಿಕ್ಷೆ ಖಂಡಿತಂತ ಬಾರಿ ದೈರಲಿ ಹೇಳ್‌ತಾವೊಳೊ. ತೀರ್ಪು ಬಾಕೆ ಇನ್ನ್ ಕಾದಷ್ಟ್ ದಿನ ಕಾಯಕಿಲ್ಲೆ.

ಒಂದ್‌ಕೈ ಪಟೇಲ್ರ್‌ಗೆ ಕೋವಿಲೈಸನ್ಸ್ ಸಿಕ್ಕಿತ್!

ಕಾಡ್‌ಮೊಗ್ರ ಗ್ರಾಮಕ್ಕೆ ಓಬಯ್ಯ ಗೌಡ್ರು ಪಟೇಲ್ರ್. ಊರ್ಲಿ ದೊಡ್ಡ ಜಮಿನ್ದಾರ. ಅಪ್ಪ ಕೃಷ್ಣ ಪಟೇಲ್ರ್ ಮಾಡಿ ಇಸಿದ ಐವತ್ತು ಎಕ್ರೆಂದ ಜಾಸ್ತಿ ಪಟ್ಟಾ ಬೂಮಿ ಇತ್ತ್. ಕೃಷ್ಣ ಗೌಡ್ರಿಗೂ ಊರ್ಲಿ ಒಳ್ಳೆ ಹೆಸ್ರ್ ಇತ್ತ್. ಪಟೇಲ್ರ್ ಆಗನ ಕಾಲಲಿ ತಸಿಲ್ದಾರ್‌ಂದ ಕಾಗಡೆ ಇರ್ವ ಗ್ರಾಮ ಮಟ್ಟದ ದೊಡ್ಡ ಅಧಿಕಾರಿ. ಪಟ್ಟಾ ಬೂಮಿ ಇದ್ದವ್ರ್‌ಂದ ಕಂದಾಯ ವಸೂಲಿ ಮಾಡಿ ಖಜಾನೆಗೆ ಕಟ್ಟುದು ಇವರ ಮುಕ್ಯ ಕೆಲ್ಸ. ಗ್ರಾಮ ಮಟ್ಟಲಿ ಪಟೇಲ್ರ್‌ಗೆ ಸಿವಿಲ್ ಮತ್ತೆ ಕ್ರಿಮಿನಲ್ ಎರ್ಡ್ ವಿಚಾರಲಿ ಸರ್ಕಾರಕ್ಕೆ ವರದಿ ಕೊಡುವ ಅಧಿಕಾರ ಇತ್ತ್. ಗ್ರಾಮದ ಪಟೇಲ್ರ್ ಅಧಿಕಾರ ತಿಳ್ಸುವ 'ಗ್ರಾಮ ಉದ್ಯೋಗಸ್ಥರ ಮನ್ಯೂಲ್' ಅಂತ ಹೆಸರಿನ ಒಂದು ಕಾನೂನು ಪುಸ್ತಕವೇ ಬ್ರಿಟಿಷ್ ಸರ್ಕಾರ ಕನ್ನಡಲಿ ಅಚ್ಚ್ ಹಾಕ್ಸಿ ಕೊಡ್‌ತಿತ್ತ್. ಅದ್ ಸುಮಾರ್ ಮುನ್ನೂರು ಪುಟದ ಪುಸ್ತಕ. ಗ್ರಾಮದ ದನಗಳ ದೊಡ್ಡಿ ದಾಕಲೆನೂ ಪಟೇಲ್ರ್ ಸ್ವಾಧೀನ ಇರ್ತಿತ್ತ್. ಗ್ರಾಮಲಿ ಕಳ್ಳತನ, ಹೊಡ್ದಾಟ, ಜಗಳ, ಕೊಲೆ ನಡ್ದರೆ ಪಟೇಲ್ರ್ ಮುಕಾಂತ್ರವೇ ರಿಪೋರ್ಟ್ ಪೋಲಿಸ್ ಟೇಸನ್‌ಗೆ ಹೋಕು. ಗ್ರಾಮಕ್ಕೆ ಆಗಾಗ ಬೇಟಿ ಕೊಡ್ವ ಕಂದಾಯ, ಸರ್ವೆ, ಪೋಲಿಸ್, ಇಲಾಕೆ ಅಧಿಕಾರಿಗ ಮದ್ಯಾಹ್ನದ ಊಟಕ್ಕೆ ಪಟೇಲ್ರಲ್ಲಿಗೆ ಬಾತಿದ್ದೊ. ಕೆಲ್ಸ ತುಂಬಾ ಇದ್ದರೆ ರಾತ್ರೆ ಅಲ್ಲೆ ಮಲ್ಗಿ ಮಾರ್ಣೆ ದಿನ ಹೋದು ಮಾಮೂಲು. ಹಂಗೆ ಹೋಕನ ಅವರ ಹೆಣ್ಣ್, ಮಕ್ಕಳಿಗೆ ಬೇಕಾದ ದನದ ತುಪ್ಪ, ಗಂಧಸಾಲೆ ಅಕ್ಕಿ, ಜೇನು, ರಸಬಾಳೆ ಹಣ್ಣು ಕಟ್ಟ್ ಕಟ್ಟಿ ಉಗ್ರಾಣಿನ ಕೈಲಿ ಹೊರ್ಸಿಗಂಡ್ ಹೋತಿದ್ದೊ. ಒಳ್ಳೆ ನಿಯತ್ತಿಲಿ ಇದ್ದರೆ ಗ್ರಾಮದ ಪಟೇಲ್ರ್‌ಗೆ ಮ್ಯಾಜಿಸ್ಟ್ರೇಟ್ ಅಧಿಕಾರ ಇತ್ತ್. ಗ್ರಾಮಲಿರುವ ಇನ್ನೊಬ್ಬ ಅಧಿಕಾರಿ ಶಾನ್‌ಬಾಗ್ರ್. ಪಟೇಲ್ರ್

ಮತ್ತು ಶಾನ್‌ಬಾಗ್ರ್ ಒಂದು ಗ್ರಾಮದ ಎರ್ಡ್ ಕಣ್ಣ್ ಇದ್ದಾಂಗೆ.

ಈಗ ನಮ್ಮ ಗ್ರಾಮದ ಪಟೇಲ್ ಓಬಯ್ಯ ಗೌಡ್ರ ವಿಸಯಕ್ಕೆ ಬರೋಮು. ಸುಮಾರ್ ಐದ್‌ಕಾಲ್ ಅಡಿ ಎತ್ತರದ ಎಣ್ಣೆಕಪ್ಪು ಸರೀರ, ಹೊಳೆವ ಕಣ್ಣ್‌ಗಳ ನೋಡ್ಕನ ಬಾರಿ ಚುರ್ಕು ಕಾಣ್ತಿದ್ದೊ. ಮಾತಿಲಿ ಯಾರಿಗೂ ಬುಟ್ಟು ಕೊಡಿಕಿಲ್ಲೆ. ಆಗನ ಕಾಲಲಿ ಪುತ್ತೂರು ಬೋರ್ಡ್ ಹೈಸ್ಕೂಲಿ ಒಂಬತ್ತನೇ ಕ್ಲಾಸ್ ಕಲ್ತೊಳೊ. ಅಪ್ಪ ಕೃಷ್ಣ ಗೌಡ್ರು ತೀರಿಹೋದ ಮೇಲೆ ವಾರೀಸ್ ಹಕ್ಕಿನ ಪ್ರಕಾರ ದೊಡ್ಡ ಮಂಜ ಓಬಯ್ಯ ಗೌಡ್ರಿಗೆ ಪಟೇಲ್ರ ಕೆಲ್ಸ ಸಿಕ್ಕಿತ್. ಓಬಯ್ಯ ಗೌಡ್ರು ಮೂರ್ ವರ್ಸಕೆ ಮುಂದೆ ಗ್ರಾಮ ಉದ್ಯೋಗಸ್ಥರ ಮಸ್ಕೂಲ್ ಪರೀಕ್ಷೆ ಪಾಸ್ ಮಾಡ್ಯೊಳೊ. ಪರೀಕ್ಷೆ ಪಾಸಾದರೆ ಮಾತ್ರ ಕೆಲ್ಸ ಸಿಕ್ತಿತ್. ಆಗ ಪಟೇಲ್ರ ಸಂಬಳ ತಿಂಗಳಿಗೆ ಇಪ್ಪತ್ತೆರ್ಡ್ ರೂಪಾಯಿ. ಉಗ್ರಾಣಿಗೆ ಇಪ್ಪತ್ ಮಾತ್ರ.

ತಾಲೂಕು ಕೇಂದ್ರ ಪುತ್ತೂರಿಂದ ಸುಮಾರ್ ನಲ್ವತ್ ಮೈಲ್ ದೂರಲಿರುವ ಗ್ರಾಮ ಕಾಪ್‌ಮೊಗ್ರ. ಮಲೇರಿಯಾ ಕಾಯಿಲೆ ಇಲ್ಲಿ ಹೆಚ್ಚಿನವ್ರಕೆ ಕಂಡ್ ಬಾತಿತ್. ಪುತ್ತೂರು ತಾಲೂಕು ಜಿಲ್ಲೆಲೇ ದೊಡ್ಡ ತಾಲೂಕು. ಈಗನ ಸುಳ್ಯ, ಪುತ್ತೂರು ಮತ್ತೆ ಬೆಳ್ತಂಗಡಿ ಎಲ್ಲಾ ಪುತ್ತೂರಿಗೆ ಸೇರಿತ್. ತಾಲೂಕಿಗೆ ಹೋಗಿ ಬಾಕೆ ಕನಿಷ್ಟ ಮೂರ್ ದಿನ ಬೇಕಾತಿತ್. ವರ್ಸಕ್ಕೊಮ್ಮೆ ನಡೆವ ಜಮಾಬಂದಿಲಿ ಗ್ರಾಮದ ಎಲ್ಲಾ ದಾಕಲೆಗಳ ತನಿಖೆ ಆತಿತ್. ಕಂದಾಯ ವಸೂಲಿ ಮತ್ತೆ ಖಜಾನೆಗೆ ಕಟ್ಟಿದ ಹಣದ ಲೆಕ್ಕ ಸರಿ ಆದರೆ ಬೇರೆ ಹೆಚ್ಚಿನ ತಕರಾರ್ ಇಲ್ಲೆ. ದುಡ್ಡ್ ತಿಂದ್ ಹಾಕಿದ್ ಕಂಡ್ ಬಂದರೆ ಅವರ ಕೆಲ್ಸವೇ ಹೋತಿತ್. ಈಗನಾಂಗೆ ಲಂಚ ಕೊಡ್ದ್ ತಕಂದು ಇತ್ತೆ. ಹೆಚ್ಚಿಂತೇಳ್ರೆ ಗುಮಾಸ್ತಂಗೆ ಬರ್ಕ್‌ಲಿ ಸಿಕರೇಟ್ ಒಂದು ಪಕೇಟ್ ಕೊಟ್ಟರೆ ಕೆಲ್ಸ ಕೂಡ್ಲೆ ಆತಿತ್. ಇಂತವರ್ಲಿ ಮಸ್ಕರೇಂಜರ್‌ಂತ ಹೆಸ್ರ್‌ನ ಗುಮಾಸ್ತ ಕೆಲ್ಸಲಿ ಬಾರಿ ಉಸಾರ್. ಸಿಕ್ರೇಟ್ ಕೊಟ್ರೆ ಮಧ್ಯಾಹ್ನ ಊಟ ಹೋಟೆಲ್‌ಲಿ ಅವೇ ಕೊಡ್ತಿದ್ದೊ.

ಓಬಯ್ಯ ಗೌಡ್ರು ಸುಮಾರ್ ಹತ್ ವರ್ಸ ಗ್ರಾಮದ ಪಟೇಲ್ರಾಗಿ ಒಳ್ಳೆ ಹೆಸರ್ ಮಾಡ್ದೊ. ಕೆಲವು ವರ್ಸ ಕಳೆಕನ ಆಗನ ಕಾಲದ ಚಟಗ ಸುರು ಆದೋ. ಪ್ರಾಣಿಗಳ ಬೇಟೆ, ರಾತ್ರೆ ಸಿಕಾರಿ, ಮೀನ್ ಹಿಡೆದು, ಕೋಳಿಕಟ್ಟ, ಕಳ್ಳ್ ಸರಾಯಿ ಗುತ್ತಿಗೆಂದ ಉಗ್ರಾಣಿ ಕೈಲಿ ತರ್ಸಿ ಕುಡೆದು ಮಾಡ್ತಿದ್ದೊ. ದಿನ ಹೋದಂಗೆ ಗುತ್ತಿಗೆಗೆ ಹೋಗಿ ರಾಜಾ ರೂಡಿಲಿ ಕುಡ್ದ್ ಬಾತಿದ್ದೊ. ಹಬ್ಬಕ್ಕೊಮ್ಮೆ ಹುಣ್ಣಿಮೆಗೊಮ್ಮೆ ಹಳ್ಳಲಿ ಮೀನಿದ್ದಲ್ಲಿ ಡೈನಾಮೇಟ್ ಹಾಕುವ ಹುಚ್ಚು ಸುರು ಆತ್. ಕಲ್ಲ್ ಒಡೆಕೆ ಉಪಯೋಗ ಮಾಡ್ವ ಡೈನಾಮೇಟ್‌ನ ದುಡ್ಡ್ ಕೊಟ್ಟು ಗುಟ್ಟಲಿ ತಾತಿದ್ದೊ. ಕೆಲವು ಸರ್ತಿ ತೋಟೆ ಹಾಕ್‌ಕನ ಕೈಲೇ ಹೊಡ್ದ್ ಹೋಗಿ ಕೆಲವರ ಪ್ರಾಣ ಹೋತಿತ್. ಊರಿನ ಗುಟ್ಟು ಗೊತ್ತಾಗದ ಹಾಂಗೆ ಗುಳಿಗನ ಪೆಟ್ಟ್ ಸಿಕ್ಕಿ ಸತ್ತದಂತ ಸುದ್ದಿ ಮಾಡಿ ಹೆಣ ಸುಟ್ಟು ಹಾಕ್‌ತಿದ್ದೊ. ದಿನಕ್ಕೆ ಐದಾರ್ ತೋಟೆ ಹಾಕಿವ ದಿನವೂ ಉಟ್ಟು. ಸುಬ್ರಹ್ಮಣ್ಯ ಪೋಲಿಸ್ ಔಟ್ ಪೋಸ್ಟ್‌ಲಿರುವ ಹೆಡ್‌ಕಾನ್ಸ್ಟೇಬಲ್ ಮೊಸೆ ಲಕ್ಷ್ಮರಾವ್ ಓಬಯ್ಯ ಗೌಡ್ರ ಆಪ್ತ ಮಿತ್ರ. ಪಟೇಲ್ರ ಕೇಳದೆ ಅಂವ ಯಾವುದೇ ಕ್ರಮ ತೆಗೆತಿತ್ತೆ.

ಜಿಸು ಸಂಕ್ರಮಣಕೆ ಎರ್ಡ್ ದಿನ ಮುಂದೆ ಐತಾರ. ವಾರಲಿ ಕಡು ದಿನ. ಪಟೇಲ್ರ್ ಮತ್ತೆ ಅವರ ದೋಸ್ತಿಗ ಐದಾರ್ ಜನ ಸೇರಿ ತೋಟೆ ಹಾಕಿ ಮೀನ್ ಓಡೆಕೆ ಕಾಪಿ ಕುಡ್ದ್ ಸುಮಾರ್ ಹನ್ನೊಂದ್ ಗಂಟೆಗೆ ಹಳ್ಳದ ಕಡೆ ಹೊರ್ಟೊ. ದಾರಿಲಿ ಸಿಕ್ಕಿದ ವಾಸುನ ಮನೇಲಿ ಎಲ್ಲವೂ ಒಂದೊಂದು ಗ್ಲಾಸ್ ಜೀಜದ ಸರಾಯಿ ಕುಡ್ದ್ ಕುಸಿಲಿ ಹೋದೊ. ಪಟೇಲ್ರ ದೋಸ್ತಿಗಳ ಪೈಕಿ ಮೂರ್ ನಾಕ್ ಜನ ಎಂಟ್ ಹತ್ತ್ ಆಳ್ ಗುಂಡಿಗೆ ಕಂತಿ ಮೀನ್ ಹೆರ್ಕಿ ತಾತಿದ್ದೊ. ಅವರ್ಲಿ ಸಣ್ಣ ಬಾಲಂತ ಹೇಳ್ವ ಇಪ್ಪತ್ತೆರ್ಡ್ ವರ್ಸದ ಹೈದ ನೀರ್ಲಿ ಐದ್ ನಿಮ್ಸ ಉಸರ್ ಕಟ್ಟಿ ಕಂತಿ ಮೀನ್ ತಾತಿತ್ತ್. ಅಂವ ಇಡೀ ಗ್ರಾಮಲೇ ಹೆಸರ್ ಪಡ್ದಿತ್. ಆ ಹಳ್ಳಲಿ ತಿರ್ಗಣೆ ಗುಂಡಿಂತ ದೊಡ್ಡ ಗುಂಡಿಲಿ ಯಾಗೋಳು ಕೂರ್ಲ್ ಮೀನ್‌ಗ ತುಂಬಾ ಇರ್ವ ಜಾಗೆ. ಇವರ ಗ್ರಾಚಾರ ಸರಿ ಇಲ್ಲದ ಕಾರ್ಣ ಇವ್ರು ತಿರ್ಗಣೆ ಗುಂಡಿ ಹಕ್ಕಲೆ ಹೋಗಿ ಮುಟ್ಟಿಕೆ ಹನಿಯ ಮುಂದೆ ಯಾರೋ ತೋಟೆ ಹಾಕಿ ಮೀನ್ ಓಡೆದು ದೂರಂದಳೇ ಕಂಡತ್. ಅವರ ನೋಡಿ ಪಟೇಲ್ರ್ ತಂಡ ಹಿಂದೆ ತಿರ್ಗಿದೊ. ಅದೇ ಹಳ್ಳಲಿ ಮೊಸಳೆ ಗುಂಡಿ, ಏಮೆ ಗುಂಡಿ, ಅರ್ಜಿಗುಂಡಿ, ಚಿಮುಲ್ ಗುಂಡಿಂತ ಮಾಮೂಲ್ ಮೀನ್ ಸಿಕ್ಕುವ ಕಡೆ ಹೊರ್ಟೊ. ಐದಾರ್ ಕಡೆ ತೋಟೆ ಹಾಕಿರೂ ಅರ್ದ ಸೇರ್ ಮೀನ್ ಸಿಕ್ಕಿತ್ಲೆ. ಹೆಚ್ಚಿನ ಕಡೆ ಪಟೇಲ್ರೇ ತೋಟೆ ಹಾಕಿದೊ.

ಒಂದು ಅಡಿ ಉದ್ದ ಇರ್‌ವ ತೋಟೆನ ತಂದ್ ಮೂರ್ ತುಂಡು ಮಾಡಿ ಅದ್‌ಕೆ ಕೇಪು ಮತ್ತೆ ಬತ್ತಿ ಇಸೊಕು. ತೋಟೆ ನೀರ್ಲಿ ಕಂತ್‌ಕೆ ಬೇಕಾದಷ್ಟ್ ಬಾರದ ಕಲ್ಲ್‌ನ ಕಟ್ಟಿ ಬತ್ತಿಗೆ ಕಿಚ್ಚಿ ಕೊಟ್ಟು ಬತ್ತಿ ಸುರ್ ಸುರ್‌ಂತ ಸಬ್ದ ಮಾಡ್ಕನ ನೀರಿಗೆ ಹಾಕೊಕು. ನೆನ್ಸಿದಾಂಗೆ ಎಲ್ಲ್ಯೂ ಮೀನ್ ಸಿಕ್ಕಿತ್ಲೆ. ಲೆಕ್ಕ ನೊಡ್ಕನ ಮದ್ಯಾಹ್ನ ಒಂದು ಗಂಟೆಗೆ ಒಟ್ಟು ಒಂಬತ್ ತೋಟೆ ಹಾಕಿದ್ದೊ. ಪಟೇಲ್ರ್ ಚಡ್ಡಿ ದೋಸ್ತಿ ಎಂಕಪ್ಪ ಬೇಡ ಬೇಡಂತ ತಡ್ದರೂ ಕೇಳದೆ ಒಂದು ಮೊಣ್ಕಾಲ್ ಉದ್ದ ನೀರಿಲಿದ್ದ ಕೇನೆ ಮಡಂಜಿನ ಆಸೆಲಿ ಗುಡ್ಡ್ ಬತ್ತಿ ಮಾಡಿ ತೋಟೆಗೆ ಕಲ್ಲ್ ಕಟ್ಟಿ, ಎಂಕಪ್ಪನ ಬಾಯಿಲಿದ್ದ ಬೀಡಿ ತುಂಡ್ ತಕಂಡ್ ಬತ್ತಿಗೆ ಕಿಚ್ಚಿ ಕೊಡುವ ಹೊತ್ತಿಗೆ ಬೀಡಿ ಕೆಟ್ಟ್ ಹೋತ್. ಇನ್ನೊಂದ್ ಹೊಸ ಬೀಡಿಗೆ ಕಿಚ್ಚಿ ಕೊಟ್ಟ್ ಬತ್ತಿಗೆ ತಾಂಗ್ಸಿದ ಕೂಡ್ಲೆ ಪಟೇಲ್ರ ಕೈಲೇ ತೋಟೆ ಹೊಡ್ಡೋತ್. ಮೋರೆ, ತಲೆ, ಎದೆ, ಕೈ, ಹೊಟ್ಟೆಗೆಲ್ಲ ಪೆಟ್ಟಾಗಿ ಬೋದ ತಪ್ಪಿ ಅಲ್ಲೇ ಬಿದ್ದ್ ಹೋದೊ.

ಅರ್ವತ್ ಎಪ್ಪತ್ತ್ ವರ್ಸಕೆ ಹಿಂದೆ ಸಮ್ಮೂರ್ಲಿ ಯಾವುದೇ ವಾಹನ ಇತ್ಲೆ. ತಾಲೂಕಿಲಿ ಸಂಪಾಜೆ ಪಟೇಲ್ರ್‌ಗೆ ಮಾತ್ರ ಆ ಕಾಲಲಿ ಸ್ವಂತ ಕಾರ್ ಇತ್ತ್. ಓಬಯ್ಯ ಪಟೇಲ್ರ್ ಅದೃಷ್ಟಂದ ಕಾಸರಗೋಡಿನ ಮರದ ವ್ಯಾಪಾರಿ ವರದಕಮ್ತಿಗಳ ಮಹಮಾಯಿ ಲೋರಿ ಕಾಡ್‌ಮೊಗ್ರಕ್ಕೆ ಕಂಡಿ ಮರ ತಕಂಡ್ ಹೋಕೆ ಬಾತಿತ್ತ್. ಹಂಗೆ ಬಂದ ಲಾರಿ ಡ್ರೈವರ್ ಕೃಷ್ಣ ಮಣಿಯಾಣಿಗೆ ದಮ್ಮಯ್ಯ ಹಾಕಿ ಅರ್ಧ ಮರ ಲೋಡಾದ ಮರನ ಕಾಲಿ ಮಾಡಿ ಪೆಟ್ಟಾದ ಪಟೇಲ್ರ್ ಸೀದಾ ಜಾಲ್ಸೂರ್ ಮಾರ್ಗಲಿ ಹೋಗಿ ಕಾಸರ್‌ಗೋಡ್ ಸರ್ಕಾರಿ ಆಸ್ಪತ್ರೆಗೆ ದಾಕಲು ಮಾಡ್ದೊ. ಡಾಕ್ಟರ್ ಶಂಕರನಾಯರ್ ಪರೀಕ್ಷೆ ಮಾಡಿ ಜೀವಕ್ಕೆ ಅಪಾಯ ಬಾಕಿಲೆಂತ ಹೇಳ್ದೊ. ಇಂಜೆಕ್ಷನ್, ಗಾಯಕೆ ಮುಲಾಮು, ಹೊಟ್ಟೆಗೆ ಕುಡೆವ ಮೊದ್ದುಂತ

ಎಂಟ್ ದಿನ ಕಳ್ತ್. ಹಚ್ಚಿಗೆ ಪೆಟ್ಟ್ ತಾಂಗಿದ ಬಲ್ದ ಕೈನ ಹುಣ್ಣು ಒಣಗ್‌ವ ಬದ್ಲ್ ರೇಸಿ ಆ
ಸುರು ಆತ್. ಮತ್ತೆ ಹತ್ತ್ ದಿನ ಮೊದ್ದ್ ಮಾಡ್ರು ಕೈನ ಗಡಿ ಗುಣ ಅತಿಲ್ಲೆ. ಕಣ್ಣಾನೂರ್‌ಂದ
ಬಂದ ಸರ್ಜನ್ ಡಾಕ್ಟ್ರ ನಂಬೂದ್ರಿಯವು ಪರೀಕ್ಷೆ ಮಾಡಿ ಕೈನ ರಟ್ಟೆಂದ ತುಂಡ್ ಮಾಡಿ
ತೆಗ್ದರೆ ಮಾತ್ರ ಜೀವ ಒಳಿದುಂತ ಸಲಹೆ ಕೊಟ್ಟೊ. ಅದೇ ದಿನ ರಾತ್ರೆ ಒಂಬತ್ತ್ ಗಂಟೆಗ
ಒಪರೇಶನ್ ಕೋಣೆಗೆ ಕರ್ಕಂಡ್ ಹೋದೊ. ಕೋಣೆಂದ ಹೊರಗೆ ಬಾಕನ ರಾತ್ರೆ ಒಂದು
ಗಂಟೆ ಕಳ್ದುಟು. ಮತಿ ಬಾಕನ ಮಾರ್ನೆ ದಿನ ಬೆಳಗ್ಗೆ ಹತ್ತ್ ಗಂಟೆ ಆತ್. ಆಸ್ಪತ್ರೆಲಿ ಮೂರ
ತಿಂಗ ಕಳ್ದ್ ಮನೆಗೆ ಬಂದೊ. ಮತ್ತೆ ಆರ್ ತಿಂಗ ಮನೆಂದ ಹೊರಗೆ ಹೋತಿಲ್ಲೆ.

ಗ್ರಾಮದ ಪಟೇಲ್ರ್ ಕೆಲ್ಸ ಮಾಡಿಕೆ ಹಂಗಾಮಿಯಾಗಿ ಬೇರೆವ್ರಕೆ ಬುಟ್ಟ್ ಕೊಟ್ಟೊ
ಆಸ್ಪತ್ರೆ ಕರ್ಚಿದಾಂಗಿ ಸಾಲ ಆತ್. ಪಟೇಲ್ರ್ ಕೃಷಿ ಹಿಂದೆ ಬೀತ್. ಪಟೇಲ್ರ್ ಪರಿಸ್ಥಿತಿ
ನೋಡಿ ಮನ್ಸ್‌ಲಿ ಕುಸಿ ಪಡುವ ವಿಘ್ನ ಸಂತೋಷಿಗ ಬಲ್ದ ಕೈ ತುಂಡಾದ ಕಾರ್ಣ ಅವರ
ಹದ್ನಾರ್‌ನೇ ಬೋರ್‌ನ ತೋಟೆ ಕೋವಿನ ಲೈಸೆನ್ಸ್ ರದ್ದ್ ಮಾಡೊಕುಂತ ಜಿಲ್ಲಾ
ಕಲೆಕ್ಟ್ರ್‌ಗೆ ತಕ್ಕ ಅರ್ಜಿ ಬರ್ದೊ. ಪಟೇಲ್ರ್ ಕೋವಿ ಮತ್ತೆ ಲೈಸನ್ಸ್ ಸಮೇತ ಕಡಬ
ಟೇಶನ್‌ಲಿ ಡಿಪಾಸಿಟ್ ಮಾಡೊಕುಂತ ಜಿಲ್ಲಾ ಕಲೆಕ್ಟ್ರ ಆದೇಶ ತಾಸಿಲ್ದಾರ್ ಮುಖಾಂತರ
ಪಟೇಲ್ರ್‌ಗೆ ಬಂದ್ ಮುಟ್ಟಿತ್. ಇಷ್ಟೊತ್ತಿಗೆ ತೋಟೆ ಹೊಡ್ದ್ ಒಂದು ವರ್ಸ ಕಳ್ದುಟು. ಕೈ
ಸರಿ ಇರ್ಕನ ಪಟೇಲ್ರ್ ಒಳ್ಳೆ ಈಡ್‌ಗಾರ. ಹಾರಿಕಂಡ್ ಹೋವ ಜೋರೆ ಹಕ್ಕಿನ ಪಂತ ಕಟ್ಟಿ
ಒಂಟೆ ಗುಂಡಿನ ತೋಟೆಲಿ ಹೊಡ್ದ್ ಬೀಳ್ಸಿಯೊಳೊ. ಕಿಡ್ಸ ಬೇಟೆಲಿ ನಾಕ್ ಜನ
ಹೊರ್‌ವಂತ ಕೋರೆ ದಾಡೆ ಇರ್ದ ಹಂದಿನ ಹೊಡ್ದ್ ಹಾಕೊಳೊ. ಒಮ್ಮೆ ಕರ್‌ಬುಡುವ
ಹಸ್‌ನ ಹಿಡ್ದ್ ಪಟ್ಟೆ ಹುಲಿನ ಮರಲಿ ಕಾದ್ ಕುದ್ದ್ ಹೊಡ್ದ್ ಕೊಂದೊಳೊ. ಕೋವಿ
ಲೆಸನ್ಸ್ ವಿಸಯಲಿ ಪಟೇಲ್ರ್ ಕುದ್ದಾಗಿ ಮಂಗ್ಳೂರಿಗೆ ಹೋಗಿ ಕಲೆಕ್ಟ್ರ ಬೇಟಿ ಮಾಡಿ
ಲೈಸೆನ್ಸ್ ರದ್ದ್ ಮಾಡ್‌ಕೆ ಬೊತ್ತ್‌ಂತ ಅರ್ಜಿ ಕೊಟ್ಟು ವಿಸಯ ವಿವರವಾಗಿ ಕಲೆಕ್ಟ್ರ
ಮನವರಿಕೆ ಮಾಡ್ದೊ. ನೀವ್ರಗೆ ನನ್ನ ಮಾತಿಲಿ ನಂಬಿಕೆ ಬಾತಾರ್ಲೆ ನೀವು ಹೇಳ್ದ್ ಜಾಗೆಲಿ
ನಿಮ್ಮ ಎದ್ರುಗೆ ಗುರಿಗೆ ಗುಂಡು ಹೊಡ್ದ್ ತೋರ್ಸ್‌ನಂತ ದೈರಲಿ ಹೇಳ್ದೊ. ಹುಸಿನಗೆ ನಗಾದ
ಕಲೆಕ್ಟ್ರ ಕನ್ನಡ್ಕನ ಮೇಜಿ ಮೇಲೆ ಇಸಿ ಇನ್ನ್ ನೀವು ಹೋಗಿಂತ ಕಳ್ಸ್ದೊ. ವಾರ ಕಳೆಕನ
ಪುತ್ತೂರು ಡಿಪ್ಟಿ ಕಲೆಕ್ಟ್ರ್‌ಗೆ ಒಂದು ಆದೇಶ ಬಾತ್. ಸದ್ರಿ ಓಬಯ್ಯ ಗೌಡ್ರ ಪುತ್ತೂರ
ತಾಲೂಕು ಆಫೀಸ್ ವಠಾರಲಿ ಸಾರ್ವಜನಿಕವಾಗಿ ಗುರಿಗೆ ಗುಂಡು ಹೊಡೆಕೆ ಅವಕಾ
ಕೊಡೊಕುಂತ ತಿಳ್ಸ್ದೊ. ಗುರಿಗೆ ಗುಂಡು ಸರಿಯಾಗಿ ತಾಂಗಿರೆ ಅವಂಗೆ ಲೈಸೆನ್
ಕೊಡೊಕು. ಗುರಿ ತಪ್ಪಿರೆ ಲೈಸೆನ್ಸ್ ರದ್ದ್ ಮಾಡಿ ಕೋವಿನ ಸರ್ಕಾರಕೆ ಮುಟ್ಟುಗೋಲ್
ಹಾಕೊಕುಂತ ಬಿಗಿ ಸೂಚನೆ ಇತ್ತ್. ಆದೇಶದ ಒಂದು ಪ್ರತಿ ಓಬಯ್ಯ ಗೌಡ್ರ ಮ
ವಿಳಾಸಕ್ಕೆ ಟಪ್ಪಾಲ್ ಮೂಲಕ ಬಾತ್. ಮೂರ್ ದಿನ ಕಳೆಕನ ಡಿಪ್ಟಿ ಕಲೆಕ್ಟ್ರ ಪೇದೆ ಬಂದ
ಸೋಮಾರ ಪುತ್ತೂರು ಕಚೇರಿಗೆ ಹಾಜರಾಕುಂತ ನೋಟಿಸ್ ಜಾರಿ ಮಾಡಿ ಹೋತ
ಪಟೇಲ್ರ ಕೋವಿನ ಕಡಬ ಎಸ್.ಐ ಪುತ್ತೂರು ಡಿಪ್ಟಿ ಕಲೆಕ್ಟ್ರ ಕಚೇರಿಗೆ ಕಳ್ಸುವ ವ್ಯವ
ಮಾಡ್ತ್. ಸುದ್ದಿ ಬಾಯಿಂದ ಬಾಯಿಗೆ ಹರ್ಡಿ ಡಿಪ್ಟಿ ಕಲೆಕ್ಟ್ರ ಆಫೀಸ್ ಎದ್ರ್ ಹತ್ತ್ ಗಂಟೆ

ಐನೂರ್ ಜನ ಸೇರಿದ್ದೊ. ಸೋಮಾರ ಪುತ್ತೂರ್ ಸಂತೆ. ಹೊತ್ತ್ ಆದಂಗೆ ಜನಗಳ ಗುಂಪು ಎರ್ಡ್ ಸಾವಿರಕ್ಕೆ ಹಕ್ಕಲೆ ಮುಟ್ಟಿತ್.

ಡಿಪ್ಟಿಕಲೆಕ್ಟ್ರ್ ಹನ್ನೊಂದ್ ಗಂಟೆಗೆ ಸರಿಯಾಗಿ ಗುರಿಗೆ ಗುಂಡು ಹೊಡೆವ ಸೂಚನೆ ಕೊಟ್ರೊ. ಡಿಪ್ಟಿಕಲೆಕ್ಟ್ರ್, ತಸಿಲ್ದಾರ್, ಸರ್ಕಲ್ ಇನ್ಸ್‌ಪೆಕ್ಟ್ರ್ ಸೇರ್ದಾಂಗೆ ಐದಾರ್ ಆಫೀಸರ್‌ಗ ಕೋರ್ಟ್ ಮೈದಾನಕೆ ಬಂದ್ ವೇದಿಕೆಲಿ ಕುದ್ದೊಳೊ. ಹನ್ನೊಂದ್ ಗಂಟೆಗೆ ಎರ್ಡ್ ನಿಮ್ಸಿ ಇರ್ಕನ ಓಬಯ್ಯ ಗೌಡ್ರ ಸಭೆ ಎದ್ರ್‌ಗೆ ಕರ್ದೊ. ಅಷ್ಟೊತ್ತಿಗೆ ಕಡಬ ಟೇಸನಿನ ಹೆಡ್‌ಕಾನ್ಸ್‌ಟೇಬಲ್ ಗೋಪಾಲರಾವ್ ಕಲೆಕ್ಟ್ರ ಎದ್ರ್‌ಲ್ಲಿ ಮೇಜಿ ಮೇಲೆ ಕೋವಿನೊಟ್ಟಿಗೆ ಒಂಟಿ ಗುಂಡು ಇರ್ವ ಮೂರ್ ತೋಟೆನೂ ಇಸಿ ಸೆಲ್ಯೂಟ್ ಹೊಡ್ದ್ ಕರೆಲಿ ನಿತ್ತತ್.

ಡಿಪ್ಟಿ ಕಲೆಕ್ಟ್ರ್ ಕೈ ತೋರ್ಸಿ ಓಬಯ್ಯ ಗೌಡ್ರು ಕೋವಿ ತಕಂಡ್ ಗುರಿಗೆ ಗುಂಡ್ ಹೊಡೆಕೆ ಸೂಚನೆ ಕೊಟ್ರೊ. ಯಾವ ಅಳ್ಕ ಇಲ್ಲದೆ ಎದೆ ಮುಂದೆ ಮಾಡಿ ಎದ್ರ್‌ಗೆ ಬಂದ್ ಕಲೆಕ್ಟ್ರ್‌ಗೆ ಕೈ ಮುಗ್ದ್ ಎಡ್ಟ್ ಕೈಲಿ ಕೋವಿಗೆ ತೋಟೆ ತುಂಬಿಸಿ ತಯಾರಾದೊ. ಕಲೆಕ್ಟ್ರ ಕುದ್ದಲ್ಲಿಂದ ಐವತ್ತ್ ಫೀಟ್ ದೂರಲಿರ್ವ ಹಲ್ಸಿನ ಮರಕೆ ಹತ್ತ್ ಫೀಟ್ ಎತ್ತರಲಿ ಒಂದು ಬೆಳಿ ರಟ್ಟಿನ ತುಂಡ್ ಕಟ್ಟಿದ್ದೊ. ದೂರಂದ ನೋಡ್ಕನ ಪಟೇಲ್ರ್‌ಗೆ ಒಂದು ಕೈ ಇಲ್ಲೆಂತ ಯಾರಿಗೂ ಗೊತ್ತಾತಿತ್ಲೆ. ಬಲ್ದ ಹೆಗಲ್ ಮೇಲೆ ಯಾಗೋಳ್ ಒಂದು ಬೆಳಿ ಸಾಲ್ ಇರ್ತಿತ್. ಕೋವಿನ ಎಡ್ದ ಕೈಲಿ ಗಟ್ಟಿ ಹಿಡ್ದ್ ಪಾತಿನ ಬಲ್ದ ಕೈ ಕಂಕ್‌ಳಲಿ ಒತ್ತಿ ಹಿಡ್ಕಂಡ್ ಕುದ್ರೆ ಎಳ್ದ್ ನಿತ್ರೊ. ಒಂದು ಕಣ್ಣ್ ಮುಚ್ಚಿ ಕೋವಿನ ನೊಣ ಗುರಿಗೆ ಸರಿ ಬಾವಂಗೆ ಹಿಡ್ದ್ ಮನ್ಸಿಲಿ ಸೀರಾಡಿ ದೆವ್ವನ ನೆನ್ಸಿ ಕಳ್ಳಂಗೆ ಕೈ ಹಾಕಿ ಹಾರ್ಸಿದ ಗುಂಡು ಸೀದಾ ಗುರಿನ ಮದ್ಯಕ್ಕೆ ತಾಂಗಿತ್. ಕಲೆಕ್ಟ್ರ ಸೇರಿದಾಂಗೆ ಅಲ್ಲಿ ಕೂಡ್ದ್ ಜನರ ಗುಂಪು ಐದ್ ನಿಮ್ಸಿ ಚಪ್ಪಾಳೆ ಹೊಡ್ದ್ ಕುಸಿ ಪಟ್ರೊ.

ಕಚೇರಿಗೆ ಹೋದ ಕಲೆಕ್ಟ್ರ ತಿಮ್ಮಪ್ಪ ಶೆಟ್ಟಿ ಗುಮಾಸ್ತನ ಕರ್ದ್ ಓಬಯ್ಯ ಗೌಡ್ರ್‌ಗೆ ಕೋವಿ ಲೈಸೆನ್ಸ್ ಕೊಡುವ ಆದೇಶ ತಯಾರ್ ಮಾಡ್ಕೆ ಸೂಚನೆ ಕೊಟ್ರೊ. ಅರ್ದ ಗಂಟೆಲಿ ಪಟೇಲ್ ಓಬಯ್ಯ ಗೌಡ್ರು ದಾಕಲೆಗೆ ಸಹಿ ಹಾಕಿ ಲೈಸೆನ್ಸ್ ಪಡ್‌ಕಂಡೊ. ಲೈಸೆನ್ಸ್ ಸಿಕ್ಕಿದ ಕುಸಿಲಿ ಪಟೇಲ್ರಿಗೆ ಬಲ್ದ ಕೈ ತುಂಡಾದ್ ಒಂದು ಗಳಿಗೆ ಮರ್ತೇ ಹೋತ್. ಕೋವಿ ಸಮೇತ ಮಾರ್ನೆ ದಿನ ಪಟೇಲ್ರ್ ಊರಿಗೆ ಮುಟ್ಟಿದೊ.

ಗುಳಿಗನ ಕೋಲ

ಮೂಲೆತೋಟ ಮ್ಯಾಲಪ್ಪ ಗೌಡ್ರ ಮನೆ ನಮ್ಮ ಬೈಲಿಲಿ ಕಾಡ್ ಕರೆಲಿರುವ ಒಂಟಿ ಮನೆ. ಅವರ ಮನೆ ದಾಟಿ ಮುಂದೆ ಹೋದರೆ ಕುಮಾರ ಪರ್ವತದ ಬುಡಲಿರ್‍ವ ಮಾರಿ ಗುಂಡಿಂತೇಳ್ವ್ ಕಾಡೊಳೆಗೆನ ಒಂದು ಕೃಷಿ ಭೂಮಿ ಉಟ್ಟು. ಆ ಜಾಗೆ ಕೈಯಿಂದ ಕೈಗೆ ಹೋಗಿ ಅಕೇರಿಗೆ ಮ್ಯಾಲಪ್ಪ ಗೌಡ್ರ ಸ್ವಾಧೀನ ಬಾತ್. ಸುತ್ತ ಕಾಡ್ ಇರ್‍ವ ಕಾರ್‍ಣ ಯಾವ ಕೃಷಿ ಮಾಡ್ರೂ ಪಸಲ್ ಕೈಗೆ ಬಾತಿತ್ಲೆ. ಕಾಡಾನೆ, ಕಾಟಿ, ಕಾಡ್‌ಹಂದಿ, ಕಡ್ವೆವೆ, ಕೆಂಪ, ಪ್ಯಪಂಜಿಂತ ಎಲ್ಲಾ ಕಾಡ್ ಪ್ರಾಣಿಗಳ ಪಾಲಾತಿತ್. ಮ್ಯಾಲಪ್ಪ ಗೌಡ್ರ ಹೆಣ್ಣಿನ ಅಕೇರಿ ತಮ್ಮ ಸೋಂಪಂಗೆ ಒಂದು ಸಣ್ಣ ಜಾಗ ಆಕುಂತ ಹುಡ್ಕುತಾ ಇದ್ದೊ. ಎಷ್ಟ್ ಹುಡ್ಕಿರೂ ಸರಿಯಾದ ಜಾಗೆ ಸಿಕ್ಕದ ಕಾರ್‍ಣ್ ಮಾರಿ ಗುಂಡಿಲಿ ಸೋಂಪಂಗೆ ಒಂದು ಸಣ್ಣ ಮನೆ ಕಟ್ಟಿ ಕುದ್ರಿಕೆ ಹೇಳ್ದೊ. ಸೋಂಪ ಗಟ್ಟಿ ಮುಟ್ಟಿನ ಜೀವ, ಕೃಷಿ ಕೆಲ್ಸಲಿ ಬಾರಿ ಜಿರ್ಸ. ಅದೇ ವರ್ಸ ಬಿಸು ಕಳ್ದ್ ಎಂಟರ್ಲಿ ಸೋಂಪ ಹೊಸ ಮನೆ ಒಕ್ಕಲಾತ್. ಸೋಂಪನ ಹೆಣ್ಣ್ ರಾಮಕ್ಕ ಮತ್ತೆ ಒಂದುವರೆ ವರ್ಸದ ಹೆಣ್ಣ್ ಕೂಸು ಸೇರಿ ಮೂರ್ ಜನ ಮಾತ್ರ, ಸೋಂಪನ ಹೊಸ ಮನೆಂದ ಗಟ್ಟಲಿ ಕೂಗ್ ಹಾಕಿರೆ ಮ್ಯಾಲಪ್ಪ ಗೌಡ್ರ ಮನೆಗೆ ಕೇಳ್ದು.

ಸೋಂಪ ಒಳ್ಳೆ ಕೆಲ್ಸಗಾರ. ಬೇಸಾಯ ಸಮಯಲಿ ಮಾತ್ರ ಹೊರಗಿನವರ ಕೆಲ್ಸಕ್ಕೆ ಕರೆತಿತ್. ಬಾಕಿದಿನ ಒಬ್ಬನೆ ರಾತ್ರೆ ಮಾಡ್ಕೊಳ್ಳಿ ಮಲ್ಗಿ ಕಾಡ್‌ಪ್ರಾಣಿಗಳ್‌ಂದ ಬೆಳೆನ ಕಾಯುವ ಕೆಲ್ಸ ಮಾಡ್ತಿತ್. ಸೋಂಪ ಹೊಸ ಮನೆ ಕಟ್ಟ್ ವರ್ಸ ಆತಾ ಬಂದದೆ. ಸಾಸ್ತ್ರ ಪ್ರಕಾರ ಹೊಸ ಮನೆಗೆ ಒಂದು ವರ್ಸದ ವರೇಗೆ ಯಾವುದೇ ದೆವ್ವ, ಪೀಡೆ, ಪಿಶಾಚಿಗಳ ಉಪದ್ರ ಇಲ್ಲೆಂತ ಹೇಳ್ಸಿ ಗ್ರಹಣ ಕಳ್ದ ಕೂಡ್ಲೆ ಸೋಂಪ ಅಮುನೋರ ಗುಡಿ ಬಟ್ರಲ್ಲಿಗೆ ಹೋಗಿ ಮಂತ್ರಿಸಿದ ಕಾಯಿ ತಂದ್ ಮನೆ ಮಾಡಿನ ಎದ್ರ್ ಬಾಗಲಿ ತಡೆ ಕಟ್ಟಿತ್. ನಿಡ್ಸಾಲ ತಿಂಗಳ್‌ಲಿ ಬಾವ ಚಂದ್ರ ಗ್ರಹಣ ಕಳ್ದ್ ಕೂಡ್ಲೆ ಹೊಸ ತಡೆ ತಕಂಡ್ ಹೋಕುಂತ ಬಟ್ರ್ ಆಗಳೇ ಹೇಳ್ದೊ.

ಎರ್ಡ್ ಮೂರ್ ತಿಂಗ ಕಳೆಕನ ಸೋಂಪನ ಸಾಂಕಿದ ಕಾಳು ನಾಯಿ ಮಂಗ್ಳಾರ ನಡು ಮದ್ಯಾಹ್ನ ಹೊತ್ತಿಗೆ ರಕ್ತ ಕಕ್ಕಿ ಮನೆ ಎದ್ರ್‌ಲಿರ್ವ ತೊಳ್ಸಿಕಟ್ಟೆ ಹಕ್ಕಲೆ ಬಿದ್ದ್ ಸತ್ತತ್. ಮನೆಲಿ ಮತ್ತೂ ಒಂದು ಗಂಡ್ ಒಂದು ಹೆಣ್ ನಾಯಿಗ ವೊಳೊ. ಹನಿಯ ದಿನ ಕಳೆಕನ ಬೇಸಗೆ ತಿಂಗ ತಿಂಗಳಿಡಿ ದಿನ ಸೋಂಪನ ಗಬ್ಬದ ಹಸ್‌ನ ಹುಲಿ ಹಿಡ್ತ್. ವಾರ ಕಳೆಕೆ ಮುಂದೆ ಮನೆಲಿ ಸಾಂಕಿದ ಕೊತ್ತಿ ಅಪಮೂರ್ತಲಿ ಸತ್ತತ್. ಹೀಂಗೆ ಮೇಲೆ, ಮೇಲೆ ಸಾಂಕಿದ ಪ್ರಾಣಿಗ ಸತ್ತದರ ನೋಡಿ ಸೋಂಪಂಗೆ ದೈರ ಕುಂದಿತ್. ನೆರೆ ಕರೆವರ ಇಚಾರ್ಸ್‌ಕನ ಒಳ್ಳೆ ಜೋಯಿಸಲ್ಲಿಗೆ ಹೋಗಿ ಒಂದು ಸರಿಯಾದ ಪ್ರಶ್ನೆ ಕೇಳ್ಬು ಒಳ್ಳೆದ್‌ಂತ ಕೆಲವು ಜನ ಹೇಳ್ದೊ. ನೀ ಕಟ್ಟಿದ ಮನೆ ಜಾಗೆ ಸರಿ ಇಲ್ಲೆ. ಅಯ್ತರ, ಮಂಗ್ಳಾರ ಮನೆ ಮೇಲೆ ರಾವು ಗುಳಿಗನ ಸಂಚಾರ ಉಟ್ಟ್‌ಂತ ದೂರದ ನಂಟ ನೇಮಿ ಹೇಳ್ತ್. ಅಂತೂ ಇಂತೂ ಸೋಂಪಂಗೆ ಕೈಕಾಲ್ ಬಿದ್ದೋತ್.

ಅದೇ ಐತಾರ ದಿನ ಸೋಂಪ ಸೀದಾ ಕಾಸರ್‌ಗೋಡಿನ ಕುಂಞರಾಮ ಕಣಿಯರಲ್ಲಿಗೆ ಹೋಗಿ ಮನೆಲಿ ನಡ್ದ ವಿಸಯನ ಹೇಳ್ತ್. ಸೋಂಪನ ಜನ್ಮ ನಕ್ಷತ್ರ ಕೇಳಿ ತಿಳ್ಕಂಡ್ ಒಂದು ದಪ್ಪದ ಮಲ್ಯಾಳ ಪುಸ್ತಕ ಬುಡ್ಸಿ ಎರ್ಡ್ ನಿಮ್ಸ ನೋಡ್ದೊ. ಪುಸ್ತಕ ಮುಚ್ಚಿ ಎರ್ಡ್ ಮೂರ್ ಶ್ಲೋಕ ಹೇಳಿ ಕಣ್ಣ್ ಮುಚ್ಚಿದೊ. ಹನಿಯ ಹೊತ್ತಿಲಿ ಮೂಡಕ್ಕೆ ಕೈ ಮುಗ್ದ್ ಚೀಲಲಿದ್ದ ಕವ್ಡೆನ ಕೈಲಿ ತೆಗ್ದ್ ಮಣೆ ಮೇಲೆ ಹಾಕಿದೊ. ಲೆಕ್ಕ ಮಾಡಿ ಹುಸಿನಗೆ ನೆಗಾಡಿ ಕಣಿಯರ್ ಹೇಳ್ದೊ. "ಮೊನ್ನರ ಜೀವಕ್ಕೆ ಬಾವ ಕಂಟಕ ಸುರ್‌ಗೆ ಮನೆ ಪ್ರಾಣಿಗಳಿಗೆ ಬಂದದೆ. ನಿನ್ನ ನಕ್ಷತ್ರ ಪ್ರಕಾರ ನಿಂಗೆ ಗುರು ಬಲ ಗಟ್ಟಿ ಉಟ್ಟು. ಆದ ಕಾರ್ಣ ನಿನ್ನ ಕುಟುಂಬಕ್ಕೆ ತೊಂದರೆ ಆಕಿಲ್ಲೆ. ನೀ ಕೂಡ್ಲೆ ನಿನ್ನ ಬೂಮಿಲಿ ಹಾಲ್ ಬಾವ ಮರದ ಬುಡಲಿ ಒಂದು ಗುಳಿಗನ ಕಲ್ಲ್ ಹಾಕಿ ಕೋಲ ಕೊಡೊಕು". ಸದ್ಯದ ಮಟ್ಟಿಗೆ ಒಂದು ತಡೆ ಕೊಟ್ಟು ಮನೆಗೆ ಮೂರ್ ಸುತ್ತ್ ತಂದ್ ಕುಬೋಳ್‌ಲಿ ಕಟ್ಟಿಕೆ ಹೇಳ್ದೊ. ಅಲ್ಲಿಂದ ಹೊರ್ಟ್ ಸೋಂಪ ಸೀದಾ ಮನೆಗೆ ಮುಟ್ಟುಕನ ಕತ್ತಲೆ ಏಳ್ ಗಂಟೆ ಆವುಟು.

ಊರ್‌ನ ಜಾತ್ರೆ ಕಳ್ದ್ ಸುಗ್ಗಿ ತಿಂಗ ಹನ್ನೆರ್ಡ್ ಅಯ್ತಾರ ಕತ್ತಲೆಗೆ ಸೋಂಪನ ಮನೆಲಿ ಗುಳಿಗನ ಕೋಲಂತ ನಿಗಂಟ್ ಆತ್. ಬೂತ ಕಟ್ಟ್‌ವ ಮಾಂಕುನ ಕಂಡ್ ಮಾತಾಡಿ ಕೋಲಕ್ಕೆ ಬೇಕಾದ ಎಲ್ಲಾ ಸಾಮಾನ್‌ಗಳ ಜೋಡ್ನೆ ಮಾಡ್ಕೆ ಸುರ್ ಆತ್. ಬೂತದ ದಿನಕೆ ಬೇಕಾದ ವಾಲ್ಗದವು ಬೂತ ಕಟ್ಟುವವನ ಕಡೆವೇ ವೊಳೊ. ಐವತ್ತ್, ಅರ್ವತ್ ಊರಿನವು ಸೇರ್ವೊಂತ ಅಂದಾಜಿ ಮಾಡಿ ಊಟಕ್ಕೆ ಕೋಳಿ ಇಡ್ಲಿ ತಯಾರ್ ಮಾಡ್ದೊ. ಸೋಂಪನ ಸಣಪ ರಾಂಪ ಗೌಡ್ರು ಅಡ್ಗೆಲಿ ಹೆಸ್ರ್‌ವಾಸಿ, ಒತ್ತಾಯ ಮಾಡಿ ಕರೆಕನ ರಾಂಪಣ್ಣ ಅಡಿಗೆ ಮಾಡ್‌ವ ಜವಾಬ್ದಾರಿ ವಹಿಸಿಕಂದೊ. ರಾಂಪಣ್ಣಂಗೆ ಅಡಿಗೆ ಒಲೆಗೆ ಕಿಚ್ಚಿ ಮಾಡ್ಕೆ ಮುಂದೆ ಒಂದು ಕ್ವಾಟ್‌ರ್ ಕೊಡೊಕು. ಆಮೇಲೆ ಅಡಿಗೆ ಎಲ್ಲಾ ಮಾಡಿ ಮುಗ್ದ ಮೇಲ್ ಮತ್ತೊಂದು ಕುಪ್ಪಿ ಕೈಲಿ ಕೊಟ್ಟರೆ ಮತ್ತೆ ತಿರ್ಗಿ ನೋಡ್ದುಬೇಡ.

ಬೂತ ಕಟ್ಟುಂವ ಮತ್ತೆ ವಾಲ್ಗದೊವು ಕತ್ತಲೆ ಆಕನ ಸೋಂಪನ ಮನೆಗೆ ಬಂದ್ ಮುಟ್ಟಿದೊ. ಬಂದಾಂಗೆ ಮನೆವು ಕೊಟ್ಟ ಕಣ್ಣ ಚಾಯ ಕುಡ್ದ್ ವಾಲ್ಗ ಹಿಡೆಕೆ ಸುರು ಮಾಡ್ದೊ. ಮೋಂಟಂಗೆ ಹೆಣ್ಣ್ ವಾಲ್ಗ ಉರ್ಗುದರ್ಲಿ ಒಳ್ಳೆ ಹೆಸ್ರಿತ್ತ್. ಅಂವ ಸುಮಾರ್ ಮೂವತ್ತ್ ವರ್ಸಂದ ವಾಲ್ಗ ಹಿಡೆತ ಉಟ್ಟು. ಮೊದುವೆ, ಕಲ್ಲುರ್ಟಿ ಕೋಲ, ಗುಳಿಗನ

ಕೋಲ, ಪುರ್ಸನ ಕಟ್ಟಿಕನ ಇವನ ವಾಲ್ಗದ ಸೆಟ್ಟ್‌ನ ಕರೆತಿದ್ದೊ. ಅಂವನ ತಮ್ಮ ಅಂಗಾರಂದ್ ಗಂಡ್ ವಾಲ್ಗ. ದೋಲು ಮತ್ತೆ ಚಂಡೆ ಬೊಡೆಕೆ ಇಬ್ಬರು ಹುಡ್ಗರ್. ಈ ವಾಲ್ಗದೊವು ಕ್ರಮ ಪ್ರಕಾರ ವಾಲ್ಗ ಕಲ್ತ್‌ವು ಅಲ್ಲ. ಅಪ್ಪಂದ ಮಂಜ ಹೀಂಗೆ ಕುಟುಂಬ ಪಾರಂಪರ್ಯ ಬಂದ ವಿದ್ಯೆ. ಸಾಮಾನ್ಯ ನಾಲ್ಕೈದ್ ದಾಟಿಗಳ ಮಾತ್ರ ಉರ್ಗ್‌ಕೆ ಬಾತಿತ್ತ್. ರೇಡಿಯೋಲಿ ಬಾವ ಸಿನೆಮಾ ಹಾಡ್‌ಗಳ ಕೇಳಿ ಕೇಳಿ "ಮೇರೆ ಮನ್ ಕಿ ಗಂಗಾ ತೇರೆ ಮನ್‌ಕಿ ಜಮುನಾಂತ" ಒಂದು ಹಿಂದಿ ಹಾಡಿನ ಅಬ್ಬೆಸ ಮಾಡಿ ಉರ್ಗುದ್ ಬಾರಿ ಲಾಯಿಕ್ ಕೇಳ್‌ತ್ತಿತ್ತ್. ಯಂ.ಎಸ್ ಸುಬ್ಬಲಕ್ಷ್ಮಿ ಹಾಡ್‌ವ ವೆಂಕಟೇಶ್ವರ ಸುಪ್ರಬಾತದ ಎರ್ಡ್ ಸಾಲ್ ಉರ್ಗ್‌ದು ಮಾಮೂಲ್. ಐದಾರ್ ನಿಮ್ಸ ವಾಲ್ಗ ಉರ್ಗಿ ನಿಲ್ಸಿದೊ. ಅಷ್ಟೊತ್ತಿಗೆ ಅಲ್ಲಿದ್ದ ಸೀತಾರಾಮ ಐದ್ ಕಂಬೇಡಿ ಮೇಲೆ ಮೇಲೆ ಹೊಡ್ಸಿತ್. ಬೂತ ಕಟ್ಟೊವು ಬಂದೊಳೊಂತ ಊರಿನವ್ರುಕೆ ಕೊಡುವ ಸುರ್‌ನ ಸೂಚನೆ.

ಮನೆ ಎದ್ರ್ ತೊಳ್ಸಿಕಟ್ಟೆ ಹಕ್ಕಲೆ ತೋರ್ಣಕಟ್ಟಿ ಕಾಲ್ ದೀಪ ಹೊತ್ಸಿ ಮನೆವು ಕೈ ಮುಗ್ದ್ ದೆವ್ವ ಕಟ್ಟವಂಗೆ ಎಣ್ಣೆ ಕೊಟ್ಟವೆ. ಹಳ್ಳಲಿ ಮಿದ್ ಬಂದ ಮಾಂಕು ಗುಳಿಗನ ಕೋಲ ಕಟ್ಟಿಕೆ ತಯಾರಿ ಸುರು ಮಾಡ್ತ್. ಅಂಗಳದ ಒಂದು ಕರೆಲಿ ಕುದ್ದ್ ಮೋರೆಗೆ ಅರ್ದಳ, ಉದ್ದನಾಮ, ಕಣ್ಣ್ ಸುತ್ತ ಕಪ್ಪು ಬಣ್ಣ ಹಾಕಿಕೆ ಒಂದು ಗಂಟೆ ಹಿಡ್ತ್. ಮೋರೆಗೆ ಅರ್ಸಿಣ ಕೆಂಪು ಬಣ್ಣ ಎದ್ದ್ ಕಾಂಬಕೆ ಹಾಕಿಟು. ಸೊಂಟಕೆ ಅಣಿಕಟ್ಟಿ ಅಕೇರಿಗೆ ಕಾಲಿಗೆ ಗಗ್ಗರ ಜಿಗ್ದ್ ಕಟ್ಟಿತ್. ಎಲ್ಲಾ ತಯಾರಾದ ಮೇಲೆ ಅಂಗಳಲಿ ಅತ್ತ ಇತ್ತ ಎರ್ಡ್ ಸುತ್ತ್ ಹಾಕಿತ್. ಗುಳಿಗನ ಆಯುಧ ತ್ರಿಸೂಲನ ಎಡ್ದ್ ಕೈಲಿ, ಕಿಚ್ಚಿ ಹೊತ್ತ್‌ವ ಸೂಟೆನ ಬಲ್ದ ಕೈಲಿ ಹಿಡ್ದ ನಿತ್ತಲ್ಲೆ ಮೂರ್ ನಾಲ್ಕ್ ಹಜ್ಜೆ ಹಿಂದೆ ಮುಂದೆ ಹೋತ್. ಗುಳಿಗನ ಕೋಲ ಕೊಡುವ ಮನೆವು, ನೆಂಟರಿಸ್ಟರ್, ಕುಟುಂಬದವು, ನೆರೆಕರೆವು ಎಲ್ಲಾ ಮನೆ ಎದ್ರ್ ಸುತ್ತ ನಿತ್ತೊ. ದೆವ್ವ ಕಟ್ಟಿಕನ ಹೇಳಿಕಂಕೆ ಅಬ್ಬೆಸ ಇರ್ವ್ ನಾಗಪ್ಪ ಗೌಡ್ರು ಮುಂದೆ ಬಂದೊ. ಎಲ್ಲವೂ ಕಾಲ್ ದೀಪಕ್ಕೆ ಕೈ ಮುಗ್ದ್ ನಿತ್ತೊ. ನಾಗಪ್ಪ ಎಲ್ಲವುಕೂ ಅಕ್ಕಿ ಕೊಟ್ಟು ಹೇಳಿಕಂಕೆ ಸುರ್ ಮಾಡ್ತ್. "ಸ್ವಾಮಿ ಗುಳಿಗರಾಜ ಈ ಮನೆ ಯಜಮಾನ ಸೋಂಪ ಕಷ್ಟ ಕಾಲಲಿ ಕಣಿಯರ್ ಹೇಳ್ದಂಗೆ ನಿಂಗೆ ಒಂದ್ ಕೋಲ ಕೊಟ್ಟನೆಂತ ಹರ್ಕೆ ಹೊತ್ತ್‌ಟು. ಕೊಟ್ಟ ಹರ್ಕೆಲಿ ಸಾವಿರ ತಪ್ಪು ಇರ್ದು. ತಪ್ಪುನ ಬುಟ್ಟು ಒಪ್ಪು ಮಾಡಿಕಂಡ್ ಸೋಂಪನ ಕುಟುಂಬಕೆ ದನ ಕರ್‌ಗಳಿಗೆ, ಅಲ ಫಲಕೆ, ನೆರೆ ಕರೆವುಕೆ ಹಾಂಗೂ ಇಡೀ ಊರಿಗೆ ಐಶ್ವರ್ಯ ಆರೋಗ್ಯನ ನೀ ಕೊಡೊಕುಂತ ಕೈ ಮುಗ್ದ್ ಪ್ರಾರ್ಥನೆ ಮಾಡ್ತ್. ಅವನ ಹೇಳಿಕಂಡ್ ಮುಗೇವವರೇಗೆ ಎಲ್ಲವೂ ದೆವ್ವದ ಎದ್ರ್ ಎರ್ಡ್ ಕೈ ಜೋಡ್ಸಿ ನಿತ್ತ್ ಕಂಡಿದ್ದೊ. ಅಷ್ಟ್ ಹೇಳಿ ಎಲ್ಲವೂ ದೆವ್ವದ ಮೇಲೆ ಕೈಲಿದ್ದ ಅಕ್ಕಿನ ಹಾಕ್‌ವೆ. ಅಷ್ಟೊತ್ತಿಗೆ ದರ್ಶಬಾಕೆ ಸುರು ಆತ್. ಗಟ್ಟಿಲಿ ಮೂರ್ ಆರ್ಬಟೆ ಕೊಟ್ಟ್ ತ್ರಿಸೂಲನ ಸುತ್ತ ತಿರ್ಗಿಸಿತ್. ಕೈಲಿದ್ದ ಸೂಟೆನ ಜೋರ್‌ಲಿ ಅತ್ತಿತ್ತ ಬೀಸಿ ಕಿಚ್ಚ್ ಹೊತ್ತ್‌ವಂಗೆ ಮಾಡಿ ಕುಣ್ಕಂಡ್ ತೊಳ್ಸಿ ಕಟ್ಟೆಗೆ ಮೂರ್ ಸುತ್ತ್ ಬಾತ್. ಕಣ್ಣ್‌ನ ಸುತ್ತ ತಿರ್ಗಿಸಿ ಸಿಟ್ಟ್ ಬಂದಂಗೆ ಮಾಡಿ ಮನೆ ಯಜ್‌ಮಾನ ಸೋಂಪ ನಿತ್ತಲ್ಲಿಗೆ ಹೋಗಿ ಅವನ ಮೋರೆ ಹಕ್ಕಲೆ ಸೂಟೆನ ಬೀಸಿತ್. ಹೆದ್ರಿದ ಸೋಂಪ ಎರ್ಡ್ ಹಜ್ಜೆ ಹಿಂದೆ ಹೋಗಿ ಕೈ ಮುಗ್ದ್ ನಿತ್ತತ್. ನನ್ನಂದ ತಿಳಿಯದೆ ಬಂದ ತಪ್ಪುಗಳ ಮಾಪು ಮಾಡೊಕುಂತ ದೆವ್ವದ ಎದ್ರ್ ಬೇಡಿಕಂತ್. ಅಕ್ಕಿ ಹಾಕಿ ದೆವ್ವಕೆ ದರ್ಸನ ಬಾವ ಹೊತ್ತಿಗೆ ವಾಲ್ಗ, ದೋಲು, ಚಂಡೆನ ದೊಡ್ಡ ಸಬ್ದ ಮಾಡಿ ಹೊಡೆಕೆ ಸುರು ಮಾಡ್ತೊ.

ನಾಲ್ಕೈದ್ ನಿಮ್ಶ ಚಂಡೆ ಪೆಟ್ಟಿಗೆ ಸರಿಯಾಗಿ ಹಜ್ಜೆ ಹಾಕಿ ಕುಣ್ದ್ ಆರ್ಬಟೆ ಕೊಟ್ಟತ್ತ್. ಅಷ್ಟೊತ್ತಿಗೆ ದೆವ್ವ ನೋಡ್ಕೆ ಬಂದ ಸುಂದರಂಗೆ ದರ್ಸನ ಸುರು ಆತ್. ಅವನ ಕರೆಗೆ ತಕಂಡ್ ಹೋಗಿ ಮಲ್ಗ್‌ಸಿ ಮೋರೆಗೆ ನೀರ್ ಹಾಕಿದೊ. ಐದ್ ನಿಮ್ಶಲಿ ಸುಂದರ ಎದ್ದ್ ಕುದ್ದತ್. ವಾಲ್ಗ ಚಂಡೆ ಪೆಟ್ಟ್ ಜೋರ್ ಜೋರ್ ಹೊಡ್ದವೆ. ಅಂಗಳದ ಒಳಗ ಹನಿಯ ಹೊತ್ತ್ ಕುಣ್ದ್ ಎದ್ರ್ ಬಂದ್ ಬೆಂಡ ಬೇಕುಂತ ಕೈಲಿ ತೋರ್ಲಿತ್. ಅರ್ತ ಮಾಡಿಕಂಡ್ ಸೋಂಪ ಜೋಡು ಬೆಂಡ ಒಟ್ಟೆ ಮಾಡಿ ಎದ್ರ್ ಹಿಡ್ತ್. ಕರೆಲಿ ಕುದ್ದ್ ದೆವ್ವ ಬೆಂಡದ ನೀರ್ ಕುಡ್ದ್ ಬೊಬ್ಬೆಲ್ ಆರ್ಸಿಗಂತ್.

ಕುದ್ದಲ್ಲಿಂದ ಎದ್ದ್ ಮೂಡಕೆ ಕೈ ಮುಗ್ದ್ ಒಂದು ಆರ್ಬಟೆ ಕೊಟ್ಟು ಓಂದಕೆ ಕುಣಿಕೆ ಸುರು ಮಾಡ್ತ್. ಹತ್ತ್ ನಿಮ್ಶ ಕಳ್ದ್ ಮನೆವರ ಎದ್ರಿಗೆ ಬಂದ್ ನುಡಿ ಕೊಡಿಕೆ ಸುರು ಮಾಡ್ತ್. ನೀವು ಕೊಟ್ಟ ಕೋಲಂದ ನಂಗೆ ಬಾರಿ ಸಂತೋಸು ಆವುಟ್. ನಿಮ್ಮ ಕುಟುಂಬ. ನೆಂಟರಿಷ್ಟರ್‌ಗೆ ದನ ಕರ್‌ಗಳಿಗೆ ಕೃಷಿ ಬೂಮಿ ರಕ್ಷಣೆ ಮಾಡಿ ನಿಮ್ಮ ಆಯಸ್. ಆರೋಗ್ಯ ಸಂಪತ್ತ್‌ನ ಯಾಗೋಳ್ ಕಾಪಾಡ್‌ನೆಂತ ಹೇಳ್ತ್. ಅಲ್ಲಿದ್ದ ಎಲ್ಲವೂ ದೆವ್ವಕೆ ತಲೆ ಬೊಗ್ಸಿ ಕೈ ಮುಗ್ದೊ.

ತೋರ್ಣದ ಒಳಗೆ ಇಸಿದ ಮೂರ್ ಮೂಲೆ ಬಲಿಗೆ ದೊಡ್ಡ ಕರ್ಣಿಕ್ಕೆ ಹೂಂಜನ ತಲೆ ಕ್ಯೊದ್ ಗುಳಿಗಂಗೆ ರಕ್ತ ಬಿಂದ್ ಕೊಟ್ಟೊ. ಸೇರ್ದ್ ಎಲ್ಲೊವುಕೂ ಗಂದಪ್ರಸಾದ ಕೊಟ್ಟೊ.

ಮ್ಯಾಲಪ್ಪ ಗೌಡ್ರ ಮೂರ್ನೆ ಮಂಜ ಬಾಲಕೃಷ್ಣ ಮತ್ತೆ ಅದೇ ಬೈಲಿನ ಮೋಹನಂತ ಬಿ.ಎ ಕಲೆವ ಹುಡ್ಗರ್ ಬಂದಿದ್ದೊ. ಊಟ ಮಾಡಿ ಎಲಾಡಿಕೆ ತಿಂಬಕೆ ಎಲ್ಲವು ಅಂಗಳಲಿ ಸೇರ್ದೊ. ಆಗ ಬಾಲಕೃಷ್ಣ ಒಂದು ಪ್ರಶ್ನೆನ ಅಲ್ಲಿದ್ದವರ ಮುಂದೆ ಇಸಿತ್. "ಬೂತಕ್ಕೆ ಕೋಳಿ ತಲೆ ಕೊಯ್ಯೊದು ಸರಿಯೋ ತಪ್ಪೊಂತ". ಚರ್ಚೆ ಆಕನ ಕೆಲವು ಪ್ರಾಯಲಿ ಹಿರಿಯವು ಇದ್ ನಾವು ಎಷ್ಟೊ ವರ್ಸಂದ ನಡ್ಕಂಡ್ ಬಂದ ಸಂಪ್ರದಾಯ ಇದರ ಬುಡುದು ಸರಿಯಲ್ಲಂತ ಹೇಳ್ದೊ. ಕೋಳಿ ತಲೆ ಕ್ಯೊದ್ ರಕ್ತ ಬಿಂದ್ ಕೊಟ್ಟತ್ಲಾರ್ ಬೂತಕ್ಕೆ ಸಿಟ್ಟ್ ಬಂದ್ ನಾವುಗೆ ಉಪದ್ರ ಕೊಡ್ದು ಕಂಡಿತಂತ ಭಯ ಭಕ್ತಿಲಿ ಕೆಲವು ಜನ ಹೇಳ್ದೊ. ಅಚೆ ಬೈಲ್‌ಲಿ ಗುಳಿಗಂಗೆ ದೇವ ಕ್ರಿಯೆಲಿ ಕೋಲ ನಡ್ದದೆಂತ್ ನಾರ್ಣಪ್ಪ ಗಟ್ಟಲಿ ಹೇಳ್ತ್. ಕೊಲೇಜಿಲಿ ಕಲೆವ ಮೋಹನಂಗೆ ತಡೆಕೆ ಬೊತ್ತದೆ ಹೇಳ್ತ್ "ನೋಡಿ. ಮೊನ್ಸರ. ಪ್ರಾಣಿಗಳ. ಪಕ್ಷಿಗಳ ಅಲ್ಲದೆ ಎಲ್ಲಾ ಜೀವ ಜಂತುಗಳ ಸೃಷ್ಟಿ ಮಾಡ್ದ್ ದೇವ್ರ್. ಸೃಷ್ಟಿ ಮಾಡ್ದವಂಗೆ ಮಾತ್ರ ಕೊಲ್ಲುವ ಹಕ್ಕ್‌ಂತ ನಮ್ಮ ಸಾಸ್ತ್ರಗ ಹೇಳ್‌ವೆ. ದೇವ್ರ್ ಸೃಷ್ಟಿ ಮಾಡ್ದ ಕೋಳಿನ ನಾವು ತಲೆ ಕ್ಯೊದ್ ಅದರ ಜೀವ ತೆಗ್ದರೆ ನಮ್ಮ ಜೀವಕ್ಕೆ ಸುಕ ಹೇಂಗೆ ಸಿಕ್ಕಿದೆ? ಮೊನ್ಸಲಿಗೆ ಜೀವ ಸೃಷ್ಟಿ ಮಾಡ್ವ ಸಕ್ತಿ ಇಲ್ಲೆ. ಆದ ಕಾರ್ಣ ಯಾವ ಜೀವನೂ ತೆಗೆಕೆ ಬೊತ್ತ್. ಒಂದು ಜೀವನ ತೆಗ್ದ್ ಇನ್ನೊಂದ್ ಜೀವಕ್ಕೆ ಕಂಡಿತ ಸುಕ ಸಿಕ್ಕದ್‌ಂತ ಎವರ್ಸಿ ಹೇಳ್ತ್. ಅಲ್ಲಿದ್ದವುಕೆ ಮೋಹನನ ಮಾತ್ ಕೇಳಿ ಉತ್ತರ ಕೊಡ್‌ಕೆ ಆತ್ಲೆ. ಕೆಲವು ಜನ ಮೋಹನನ ಮಾತ್ ಸರಿಂತ ಹೇಳ್ದೊ. ಊರ್ನ ಹಿರಿಯವು ಮುಂದೇನ್ ಮಾಡ್ದುಂತ ಆಲೋಚನೆಲಿ ಬಿದ್ದೊಳೊ.

ಕನ್ಸಾದ್ರೂ ಸತ್ಯ!

ಯಾರಲ್ಲಿ? ಅವರ ಎಳ್ದ್ ತನ್ನಿಂತ ಗಡ್ಸ್ ದನಿಲಿ ಇನ್ಸ್‌ಪೆಕ್ಟರ್ ಈಶ್ವರಯ್ಯ ಡ್ಯೂಟಿಲಿದ್ದ ಪಿ.ಸಿ ಪರಮೇಶ್ವರಂಗೆ ಕರ್ದ್ ಹೇಳ್ತ್. ಇನ್ಸ್‌ಪೆಕ್ಟರ್ ಕೋಣೆ ಬಾಗ್‌ಲ್‌ಲಿ ನಿತ್ತ್ ಸೆಲ್ಯೂಟ್ ಹೊಡ್ದ್ ಒಂದು ಹಜ್ಜೆ ಮುಂದೆ ಇಸಿಟು ಅಷ್ಟೆ. ಕೈಲಿದ್ದ ಪೇಪರ್‌ವೈಟ್‌ನ ಮೇಜಿಗೆ ಗುದ್ದಿ, ಹಿಡ್ದ್ ತಂದವರ ವಿವರ ಕೇಳ್ತ್.

ನಾವು ನಿನ್ನೆ ಮದ್ಯರಾತ್ರೆ ಹಿಡ್ಟ್ ತಂದ ಐದ್ ಜನರ್ಲಿ ಇಬ್ಟೊರು ಕಾಲೇಜಿಲಿ ಕಲೆವ ಹುಡ್ಗರ್. ಒಬ್ಬ ಪ್ರಿಂಟಿಂಗ್ ಪ್ರೆಸ್‌ಲಿ ಕೆಲ್ಸ ಮಾಡ್ವ ಹರಿಜನ. ಮತ್ತಿಬ್ಬರ್ಲಿ ದೇವಸ್ಥಾನಲಿ ಕೆಲ್ಸ ಮಾಡ್ವ ಗುಮಾಸ್ತ ವಾಸಪ್ಪ ಗೌಡ, ಮತ್ತೆ ದೇವಸ್ಥಾನದ ಜಮಾ ಕರ್ಚೆ ಬರೆವ ಸನತ್ ಬಟ್ರ್ಂತ ಪಿ.ಸಿ ಹೇಳ್ತ್. ವಿವರ ತಿಳ್ಕಂಡ್ ಇನ್ಸ್‌ಪೆಕ್ಟರ್ ವಿಚಾರ್ಣೆ ಮಾಡ್ಕೆ ಕಾಲೇಜ್ ಹುಡ್ಗರ ಕರ್ತ್. ಅಂಗಿ ಪೇಂಟ್ ತೆಗ್ದ್ ಒಳ ಚಡ್ಡಿಲಿ ಬಂದ ಹುಡ್ಗರ ಕಣ್ಣ್ ಕೆಕ್ಕರ್ಸಿ ನೋಡಿ ಒಂದು ಸಿಕ್ರೇಟ್ ಹೊತ್ಸಿ ಬಾಯಿಗೆ ಇಸಿ ಹೊಗೆ ಬುಡ್‌ಕೆ ಸುರುಮಾಡ್ತ್. ಏನೂ ಪ್ರಶ್ನೆ ಮಾಡ್ಕೆ ಹೋಗದೆ ನೂರ್ ನೂರ್ ಬಸ್ಕಿ ತೆಗೆಕೆ ಕುದ್ದಲ್ಲಿಂದಳೇ ಹೇಳ್ತ್. ಪೋಲಿಸ್ ಪರಮೇಶ್ವರ ಕೈಲಿ ಲಾಟಿ ಹಿಡ್ಕಂಡ್ ಲೆಕ್ಕ ಮಾಡ್ಕೆ ಅವರ ಹಕ್ಕಲೆ ನಿತ್ತತ್. ಹುಡ್ಗರ್ ಐವತ್ತ್, ಅರ್ವತ್ತ್ ಬಸ್ಕಿ ತೆಗ್ದೂ ಎಪ್ಪತ್ತಕ್ಕೆ ಮುಟ್ಟ್‌ಕನ ಕಾಲ್ ಸೋತ್ ಹೋಗಿ ಕುದ್ದರೆ ಎದ್ರಿಕೆ ಕಷ್ಟ ಆತಿತ್ತ್. ಅಷ್ಟೊತ್ತಿಗೆ ಹನಿಯ ಲಾಚಾರ್ ಇದ್ದ ವೇಣು ತಲೆತಿರ್ಗಿ ಇನ್ಸ್‌ಪೆಕ್ಟರ್ ಮೇಜಿನ ಮೇಲೆ ಬಿದ್ದೋತ್. ಇದರ ನೋಡಿ ಹುಡ್ಗರ ಒಂಟಿ ಕಾಲ್‌ಲಿ ನಿಲ್ಲಕೆ ಹೇಳ್ತ್.

ವಾಸಪ್ಪ ಗೌಡ್ರು ಮತ್ತೆ ಸನತ್ ಬಟ್ರ ಒಟ್ಟಿಗೆ ಕರ್ತ್. ಹೆಸ್ರ್, ವಿಳಾಸ ಎಲ್ಲ ಬರ್ಕಂಡ್ ಯಾವ ವಿಚಾರ್ಣೆ ಮಾಡ್ಕೆ ಹೋಗದೆ ಇಬ್ಬರ ಲಾಕಪಿಗೆ ಹಾಕಿಕೆ ಹೇಳ್ತ್. ಆಕೇರಿಗೆ ಹರಿಜನ ಸೇಸಪ್ಪನ ಒಳಗೆ ಕರ್ತ್. ಅಂವ ಕೋಣೆ ಒಳೆಗೆ ಬಂದಾಂಗೆ ಹಿಂದೆಂದ ಸೇಸಪ್ಪನ ಸೊಂಟಕ್ಕೆ ಬೂಡ್ಸ್‌ಲಿ ಒದ್ದತ್. ಒದ್ದ ಬರಕ್ಕೆ ಒಂದು ಮೂಲೆಗೆ ಹೋಗಿ ಬೀತ್. ಅಲ್ಲಿಂವ

ಕಷ್ಟಲಿ ಎದ್ದ್ ನಿತ್ತ ಸೇಸಪ್ಪಂಗೆ ಸುಮಾರ್ ಅಡ್ಡ ಸವಾಲ್ ಪ್ರಶ್ನೆ ಹಾಕಿ ಬರ್‍ಕಂಡತ್. ರಾತ್ರೆ ಓಡ್ಸ್ಟ್ ತಂದವುಕ್ಕೆ ಮಾರ್ನೆ ದಿನ ಮಧ್ಯಾಹ್ನ ಒಂದುವರೆ ಗಂಟೆವರೇಗೆ ನೀರ್ ಕೂಡ ಕುಡೆಕೆ ಕೊಟ್ಟತ್ಲೆ.

1975ನೇ ಇಸ್ವಿ ಜೂನ್ ತಿಂಗಳ 25ನೇ ತಾರೀಕ್‌ಗೆ ಆಗನ ಪ್ರಧಾನ ಮಂತ್ರಿ ಇಂದಿರಾಗಾಂಧಿ ತುರ್ತುಪರಿಸ್ಥಿತಿ ಕಾನೂನು ಜಾರಿ ಮಾಡ್ತ್. ಲೋಕ ಸಭೆಗೆ ನಡ್ದ ಚುನಾವಣೆಲಿ ಭ್ರಷ್ಟಾಚಾರ ಮಾಡಿಟುಂತ ಅಲಹಾಬಾದ್ ಹೈಕೋರ್ಟ್‌ಲಿ ದಾಖಲಾದ ಕೇಸಿಲಿ ಆರೋಪ ಸಾಬೀತಾದ ಕಾರ್ನ ಇಂದಿರಾಗಾಂಧಿ ಪ್ರಧಾನಿ ಪಟ್ಟ ಕಳ್ಕಂಬ ಸ್ಥಿತಿ ಬಾತ್. ಅಷ್ಟಲ್ಲದೆ ಮುಂದೆ ಆರ್ ವರ್ಸ ಯಾವುದೇ ಚುನಾವಣೆಗೆ ನಿಲ್ಲದಾಂಗೆ ನಿರ್ಬಂಧ ಹೇರಿ ನ್ಯಾಯಾಲಯ ತೀರ್ಪು ಕೊಟ್ಟತ್.

ಪ್ರಜಾತಂತ್ರ ದೇಶಲಿ ಕೋರ್ಟ್ ಆದೇಶನ ಎಲ್ಲವು ಕಡ್ಡಾಯ ಪಾಲಿಸೊಕು. ಆದರೆ ಅಧಿಕಾರ ಬುಟ್ಟ್ ಕೊಡ್ಕೆ ಒಪ್ಪದ ಇಂದಿರಾಗಾಂಧಿ ಅಧಿಕಾರ ಉಳ್ಸಿಕಂಬ ಉದ್ದೇಶಲಿ ದೇಶದ ಮೇಲೆ ತುರ್ತುಪರಿಸ್ಥಿತಿ ಕಾನೂನು ಜಾರಿ ಮಾಡ್ತ್. ಕಾಂಗ್ರೇಸ್ ಪಕ್ಷದವರ ಬುಟ್ಟ್ ಎಲ್ಲಾ ವಿರೋಧ ಪಕ್ಷದ ನಾಯಕರ ವಿಚಾರ್ಣೆ ನಡ್ಸದೆ ಜೈಲಿಗೆ ಹಾಕಿತ್. ಸರ್ಕಾರದ ತಪ್ಪುನ ವಿರೋಧಿಸಿದ ಪತ್ರಿಕೆಗಳ ಕಚೇರಿಗೆ ಬೀಗ ಬೀತ್. ಸರ್ಕಾರದ ಪರ ಇರ್ವ ಪೇಪರ್‌ಗ ಇಂದಿರಾಗಾಂಧಿನ ಹೊಗ್ಳಿ ದೊಡ್ಡ ದೊಡ್ಡ ಸುದ್ದಿಗಳ ಬರೆತಿದ್ದೊ. ಆಲ್ ಇಂಡಿಯಾ ರೇಡಿಯೋ ಹೋಗಿ ಆಲ್ ಇಂದಿರಾ ರೇಡಿಯೋ ಆತ್. ಇಂಡಿಯಾ ಎಂದರೆ ಇಂದಿರಾ, ಇಂದಿರಾ ಎಂದರೆ ಇಂಡಿಯಾಂತ "ಆಗನ ಕಾಂಗ್ರೇಸ್ ಪಕ್ಷದ ಅಧ್ಯಕ್ಷರ್ ಇಂದಿರಾಗಾಂಧಿನ ಹೊಗಳಿ ಅಟ್ಟಕೆ ಏರ್ಸಿತ್. ನಾಗರಿಕರಿಗೆ ಜೀವರಕ್ಷಣೆ ಹಕ್ಕೊ ಇಲ್ಲೆಂತ ಆಗನ ಕಾನೂನು ಮಂತ್ರಿ ಬಹಿರಂಗ ಹೇಳಿಕೆ ನೀಡ್ತ್". ರಾಜಕಾರಣಿಗಳ ಅಲ್ಲದೆ ಕೆಲವು ಸಾಂಸ್ಕೃತಿಕ ಸಂಘಟನೆಗಳ ಸಾ ನಿಷೇಧ ಆತ್. ದೇಶಲೇ ದೊಡ್ಡ ಸಂಘಟನೆ ಆಗಿದ್ದ ಆರ್.ಎಸ್.ಎಸ್ ನ ಕೂಡಾ ನಿಷೇಧ ಮಾಡ್ದೊ. ಇಂದಿರಾ ಗಾಂಧಿಗೆ ಹೆದ್ರಿಕೆ ಇದ್ದದ್ ರಾ.ಸ್ವ ಸಂಘದ ಮೇಲೆ. ತುರ್ತುಪರಿಸ್ಥಿತಿ ವಿರೋಧಿಸಿ ಹೋರಾಟ ಮಾಡ್ವ ಸಕ್ತಿ ಯಾವುದೇ ರಾಜಕೀಯ ಪಕ್ಷಗಳಿಗೆ ಇತ್ಲೆ. ಆದರೆ ರಾ.ಸ್ವಸಂಘಕ್ಕೆ ದೇಶದ ಗ್ರಾಮಮಟ್ಟದವರೇಗೆ ಜನ ಸಂಪರ್ಕ ಇತ್ತ್. ರಾ.ಸ್ವಸಂಘನ ನಿರ್ಮೂಲ ಮಾಡೊಕುಂತ ಒಳ ಉದ್ದೇಶ. ಒಂದೆ ಇಂದಿರಾ ಗಾಂಧಿನ ಅಪ್ಪ ನೆಹರು ಕೂಡ ಸಂಗದ ಕಡು ವಿರೋಧಿ. ಮಹಾತ್ಮಾ ಗಾಂಧಿ ಕೊಲೆ ಪ್ರಕರಣನ ದುರುದ್ದೇಶಂದ ಸಂಘದ ಮೇಲೆ ಹೊರ್ಸಿ ಸಂಘದ ನಿಷೇಧ ಮಾಡಿದ್ದೊ. ಆದರೆ ಸರ್ಕಾರ ಆಪಾದನೆ ಸಾಬೀತ್ ಮಾಡಿಕೆ ಸೋತ್ ಹೋಗಿ ಸಂಘದ ಮೇಲೆನ ನಿಷೇಧನ ಬೇಸರತ್ ಹಿಂದೆ ತೆಗ್‌ದೋ. ಅದೇ ಕುತಂತ್ರನ ಇಂದಿರಾಗಾಂಧಿ ಮಾಡ್ತ್.

ಎಲ್ಲಾ ರಾಜಕೀಯ ಪಕ್ಷಗಳ ನಾಯಕರೊಟ್ಟಿಗೆ ರಾ.ಸ್ವಸಂಘದ ಮುಂದಾಳುಗಳ ಮೇಲೆ 'ಮೀಸಾ' ಕಾಯಿದೆ ಪ್ರಕಾರ ವಿಚಾರ್ಣೆ ಇಲ್ಲದೆ ಜೈಲಿಗೆ ಹಾಕಿದೊ. ಅಷ್ಟೊತ್ತಿಗೆ ಸಮಾಜವಾದಿ ನಾಯಕ ಲೋಕ ನಾಯಕ ಜಯಪ್ರಕಾಶ ನಾರಾಣರ ಮುಂದಾಳ್‌ತನಲಿ ತುರ್ತುಪರಿಸ್ಥಿತಿ ವಿರೋಧಿಸಿ ಚಳುವಳಿ ಸುರು ಆತ್. ಈ ಚಳುವಳಿ ರಾ.ಸ್ವಾಸಂಘ ಪೂರ್ಣ ಬೆಂಬಲದ ಮೂಲಕ ಸುರ್ ಆತ್. ಹಳ್ಳಿ ಹಳ್ಳಿಗಳ್‌ಲಿ ಸರ್ಕಾರದ ವಿರೋಧಿ ಪ್ರತಿಭಟನೆ ನಡೆಕೆ ಸುರ್ ಆತ್. ಅಂತ ಒಂದು ಸತ್ಯಾಗ್ರಹಲಿ ಭಾಗವಹಿಸಿದ ಆಪಾದನೆ ಹೊರ್ಸಿ ವಾಸಪ್ಪ ಗೌಡ್ರ ಮತ್ತೆ ಅವರ ದೋಸ್ತಿಗಳ ಸ್ಥಳೀಯ ಕಾಂಗ್ರೇಸ್ ಪುಡಾರಿಗ ಪಿತೂರಿ ಮಾಡಿ ಪೋಲಿಸ್

ಮೂಲಕ ರಾತ್ರೋರಾತ್ರಿ ಎರೆಸ್ಟ್ ಮಾಡ್ಸಿದೊ. 'ಮೀಸಾ' ಕಾಯಿದೆ ಪ್ರಕಾರ ವಾಸಪ್ಪ ಗೌಡ್ರ ಯಾವ್ರುದೇ ವಿಚಾರ್ಣೆ ನಡ್ಸದೆ ಬಳ್ಳಾರಿ ಸೆಂಟ್ರಲ್ ಜೈಲಿಗೆ ಕಳ್ಸಿದೊ. ನಮ್ಮ ಸುಳ್ಯ ತಾಲೂಕಿಲಿ ಮೀಸಾ ಕಾನೂನು ಪ್ರಕಾರ ಜೈಲಿಗೆ ಹೋದವು ವಾಸಪ್ಪ ಗೌಡ್ರು ಒಬ್ಬನೆ.

ತುರ್ತು ಪರಿಸ್ಥಿತಿ ಸಮಯ ರಾ.ಸ್ವಾ.ಸಂಘ ಮೂಲಕ ಸರ್ಕಾರದ ವಿರುದ್ಧ ಚಳವಳಿ ಪ್ರತಿಭಟನೆ ನಡ್ಸಿದವರ ಸಂಖ್ಯೆ ಒಂದೆ 1942ರ ಕ್ವಿಟ್ ಇಂಡಿಯಾ ಚಳವಳಿಲಿ ಜೈಲಿಗೆ ಹೋದವರ ಸಂಖ್ಯೆಂದ ಎರ್ಡ್ ಪಾಲ್ ಇತ್ತ್. ತುರ್ತುಪರಿಸ್ಥಿತಿ ಸಮಯ ಕಾಂಗ್ರೇಸಿನ ಹೊಡಿ ಪುಡಾರಿಗ ವಿರೋಧ ಪಕ್ಷದ ವಿರುದ್ಧ ಸುಳ್ಳು ಆರೋಪ ಮಾಡಿ ಅದರ ಕಾರ್ಯಕರ್ತರಿಗೆ ಪೋಲಿಸರ ಮೂಲಕ ಚಿತ್ರಹಿಂಸೆ ಕೊಟ್ಟು ಜೀವ ತೆಗ್ದ ಪ್ರಕರಣಗಳೂ ವರದಿ ಆವುಟು. ಅಂಗವಿಕಲರಾದವರ ಸಂಖ್ಯೆ ಸಾವಿರಾರ್. ಕಾಂಗ್ರೇಸ್‌ನ ರಾಕ್ಷಸ ಕೆಲ್ಸನ ಇಡಿ ಚಿತ್ರ 'ಶಾ' ಕಮಿಷನ್ ವರದಿಲಿ ನೋಡ್ರೆ ಗೊತ್ತಾದೆ. ಜನತಾ ಪಕ್ಷ ಅಧಿಕಾರ ಬಂದರೂ ಸ್ವಲ್ಪ ಸಮಯಲಿ ರಾಜಕೀಯ ಕುತಂತ್ರದ ಪರಿಣಾಮ ಬಿದ್ದ್ ಹೋತ್. ಮತ್ತೆ ಅಧಿಕಾರ ಹಿಡ್ದ್ ಇಂದಿರಾ ಕಾಂಗ್ರೇಸ್ ಶಾ ಕಮಿಷನ್ ರಿಪೋರ್ಟ್‌ನ ಹಿಂದೆ ತಕಂತ್. ತುರ್ತುಪರಿಸ್ಥಿತಿಲಿ ಕಾಂಗ್ರೇಸ್‌ನವು ಮಾಡ್ದ ಅನ್ಯಾಯ ಮುಂದೆನ ಪೀಳಿಗೆಗೆ ಗೊತ್ತಾಗದಂಗೆ ಅಡಂಗ್ಸಿಕೆ ಮಾಡ್ದ ಕುತಂತ್ರ ನಡ್ತ್. ಕೆಲವು ಶ್ರೀಮಂತರ್ ಏರೆಸ್ಟ್ ಆಗದಾಂಗೆ ಅಧಿಕಾರಿಗಳಿಗೆ ಮತ್ತೆ ರಾಜಕೀಯ ನಾಯಕರಿಗೆ ದೊಡ್ಡ ದೊಡ್ಡ ಸೂಟ್‌ಕೇಸ್ ಕೊಟ್ಟು ಬಚಾವಾದೊ.

1975 ನವಂಬರ ತಿಂಗಂತ ಕಂಡದೆ, ಸುಳ್ಯ ಸರ್ಕಾರಿ ಹೈಸ್ಕೂಲ್‌ಲಿ ತಾಲೋಕಿನ ಯುವಜನ ಮೇಳ ಏರ್ಪಡ್ಸಿದ್ದೊ. ಈ ಸಭೆಗೆ ಮಂತ್ರಿ ಮೈಲಿನೊಟ್ಟಿಗೆ ದೊಡ್ಡ ದೊಡ್ಡ ಕಾಂಗ್ರೇಸ್ ಲೀಡರ್‌ಗಳೂ ಬಂದಿದ್ದೊ. ಮಂತ್ರಿಗಳ ಭಾಷಣಲಿ ರಾ.ಸ್ವಾ.ಸಂಘನ ನಿಂದನೆ ಮಾಡಿ ಮಾತಾಡ್ಕೆ ಸುರು ಆತ್. ಸಭೆಲಿ ಅಲ್ಲಲ್ಲಿ ಕುದ್ದಿದ್ದ ಸಂಘದ ಸ್ವಯಂ ಸೇವಕರ ಭಾರತ್ ಮಾತಾಕಿ ಜೈ! ವಂದೇ ಮಾತರಂ! ಇಂದಿರಾಗಾಂಧೀಗೆ ದಿಕ್ಕಾರಂತ ಘೋಷಣೆ ಹಾಕಿಕೆ ಸುರು ಮಾಡ್ದೊ. ಸಭೆಲಿ ಗಲಾಟೆ ಸುರು ಆತ್. ಮಂತ್ರಿಗಳ ಹಕ್ಕಲೆ ಕುದ್ದಿದ್ದ ಕಾಂಗ್ರೇಸ್ ಕಾರ್ಯದರ್ಶಿ ಶಂಕರ ಭಟ್ರ್ ಹೆದ್ರಿ ಕಿಟಕಿಂದ ಹಾರಿ ಓಡಿ ಹೋದೊಂತ ಸುದ್ದಿ ಆತ್. ಮತ್ತೆ ವಿಚಾರ್ಸ್‌ಕನ ಅದ್ ಸರಿ ಅಲ್ಲಂತ ಗೊತ್ತಾತ್. ಘೋಷಣೆ ಹಾಕಿದ ಸಂಘದವರ ಪೋಲೀಸಿನವು ಎರೆಸ್ಟ್ ಮಾಡಿ ಸ್ಟೇಶನ್‌ಗೆ ತಂದ್ ಕೂಡಿ ಹಾಕಿದೊ. ಕೆಲವ್ರುಕೆ ಲಾಠಿ ಪೆಟ್ಟಿನ 'ಸಮ್ಮಾನ' ಸಿಕ್ಕಿತ್. ಕೆಲವ್ರುಕೆ ನೆಲಲಿ ಕುದ್ರಿಸಿ 'ರೋಲರ್' ಸೇವೆ ನಡ್ತ್. ಗಟ್ಟಿಮುಟ್ಟಿನ ಮೂರ್ ನಾಕ್ ಜನ ಹುಡ್ಗರಿಗೆ 'ಏರೋಪ್ಲೇನ್' ಭಾಗ್ಯ ಸಿಕ್ಕಿತ್.

ಅದೇ ಸಂದರ್ಭ ಸ್ಟೇಶನ್‌ಲಿ ಒಬ್ಬ ಮುಸ್ಲಿಂ ಮುಕ್ರಿನ ಹಿಡ್ದ್ ತಂದ್ ಲಾಕಪ್ಪಿಗೆ ಹಾಕಿದ್ದೊ. ಸಂಘದವರ ನೋಡಿ ಅಂವಂಗೆ ಹನಿಯ ಅಂಜಿಕೆ ಆತ್. ಆದ್ರೂ ಅಂವ ಹಕ್ಕಲೆನ ಪಕ್ಕಿಂದ ಬಾಂಗ್ ಕೇಳ್ಕನ ಕುದ್ದಲ್ಲೆ ನಮಾಜ್ ಮಾಡ್ವ 'ಸಾಸ್ತ್ರ' ಮಾಡ್ತಿತ್. ಹಿಂಗೆ ಮಾತಾಡ್ಕನ ಸಂಘದ ಬಗ್ಗೆ ಅಂವಂಗೆ ಹೆದ್ರಿಕೆ ಉಟ್ಟುಂತ ಗೊತ್ತಾತ್. ಅಲ್ಲಿದ್ದ ಸಂಘದ ಕಾರ್ಯಕರ್ತರ್ ಸಂಘದ ಬಗ್ಗೆ ಮೇಲೆ ಮೇಲೆನ ಮಾಹಿತಿ ಕೊಟ್ಟೊ. ಸಂಘದವ್ರು ಮುಸ್ಲಿಮ್ ವಿರೋಧಿಗಂತ ಹೇಳ್ದ ಅಪಪ್ರಚಾರನ ಕೇಳಿ ಕೇಳಿ ಅಂವಂಗೆ ಪಕ್ಕ ಸಂಘದವರ ಮಾತಿಲಿ ನಂಬಿಕೆ ಬಾತಿಲ್ಲೆ. ಅಲ್ಲಿದ್ದ ಒಬ್ಬ ಹನಿಯ ತಿಳ್ದ ಸ್ವಯಂಸೇವಕ ಹೇಳ್ತ್, "ನೋಡಿ ಸಂಘದ ಮುಖ್ಯ ಉದ್ದೇಶನ ಒಂದೇ ಸಬ್ದಲಿ ಹೇಳುದಾದರೆ ಹಿಂದುಗಳ ಸಂಘಟನೆ ಮಾಡ್ದುಂತ ಹೇಳಕ್". ಸಂಘಟನೆ ಯಾಕಂತೇಳ್ರೆ ಒಗ್ಗಟ್ಟ್ ಇಲ್ಲದೆ ನಮ್ಮ ದೇಸ ಸಾವಿರ ವರ್ಸ ವಿದೇಶದವರ ದಾಳಿಗೆ ಸಿಕ್ಕಿ ಗುಲಾಮಗಿರಿಲಿ

ಇತ್ತ್. ಈ ದೇಶಲಿ ವಾಸಮಾಡ್ವ ಎಲ್ಲವೂ ಓಂದುಗಳೆ. ಮುಸ್ಲಿಮ್, ಕ್ರಿಶ್ಚನ್ ಎಲ್ಲರ ಓರಿಯವು ಒಂದು ಕಾಲಲಿ ಓಂದುಗಳೆ. ದಾಳಿಕಾರರ ಆಡಳಿತದ ಕಷ್ಟ ಪರಿಸ್ಥಿತಿಲಿ ಕೆಲವು ಬಲಾತ್ಕಾರ ಮತಾಂತರ ಆದೊ ಅಷ್ಟೆ. ಮತಾಂತರಂದ ದೇವರ ಪೂಜೆ ಮಾತ್ರ ಬದ್ಲಾತ್. ಪೂರ್ವಜರ ದೇಶ, ಸಂಸ್ಕೃತಿ ಬದ್ಲಾತಿಲ್ಲೆ. ಆದ ಕಾರ್‍ಣ ಮುಸ್ಲಿಮರ್ ಓಂದುಗಳ ದ್ವೇಷ ಮಾಡ್ದರ್ಲಿ ಓಂದುಗ ಮುಸ್ಲಿಮರ ದ್ವೇಷ ಮಾಡ್ದರ್ಲಿ ಅರ್ತ ಇಲ್ಲೆಂತ ವಿವರ್ಸಿ ಹೇಳ್ದೊ. ಇದರ ಕೇಳಿ ಮುಕ್ರಿಗೆ ದೈರ ಬಾತ್. ಆಗ ಮುಕ್ರಿ ಹೇಳ್ತ್, "ನನ್ನ ಅಪ್ಪನ ಅಜ್ಜ ಚೆಟ್ಟೇಗೌಡ, ಟಿಪ್ಪುಸುಲ್ತಾನ ಸೈನ್ಯಲಿ ಸಿಪಾಯಿ ಆಗಿದ್ದೊ. ನಮ್ಮ ಓರಿಯವರ ಮೂಲ ಮಂಡ್ಯ ಜಿಲ್ಲೆಗೆ ಸೇರ್ದ ನಾಗಮಂಗಲ ತಾಲೂಕು. ಟಿಪ್ಪುಸುಲ್ತಾನ್ ಬಲತ್ಕಾರ ಮಾಡಿ ನಮ್ಮ ಓರಿಯವರ ಮುಸ್ಲಿಮ್ ಮತಕ್ಕೆ ಸೇರ್ಸಿತ್. ಆದ ಕಾರ್‍ಣ ಈಗ ನನ್ನ ಹೆಸ್ರ್ ಮಹಮದ್ ಗೌಸ್ ಆವುಟುಂತ ಬಾಯಿ ಬುಟ್ಟು ಸತ್ಯನ ಹೊರಗೆ ಹಾಕಿತ್".

ರಾಮಣ್ಣ ಗೌಡಂತ ಅಲ್ಲಿದ್ದ ಒಬ್ಬ ಸ್ವಯಂಸೇವಕನ ಹಕ್ಕಲೆ ಮಾತಾಡ್ಕನ ಮುಕ್ರಿ ನಮ್ಮ ಮುಸ್ಲಿಮ್ ಮತವೇ ಶ್ರೇಷ್ಠ. ಪ್ರಪಂಚಲಿರುವ ಬೇರೆ ಎಲ್ಲಾ ಮತಗ ಸುಳ್ಳು. ನಮ್ಮ ಗ್ರಂಥನ ನಂಬಿರೆ ಮಾತ್ರ ಸ್ವರ್ಗ ಸಿಕ್ಕುದುಂತ ಹೇಳ್ತ್. ನಂಬದವರ ಒಂದೊ ಇಸ್ಲಾಂಗೆ ಸೇರುವಂಗೆ ಮಾಡೊಕು ಇಲ್ಲೆಂತಾದರೆ ಅವರ ನಾಶ ಮಾಡೊಕುಂತ ನಮ್ಮ ಧರ್ಮಲಿ ಹೇಳ್ದಂತ ದೈರಲಿ ಹೇಳ್ತ್. ಆಗ ಹಕ್ಕಲಿದ್ದ ಸುಂದರ ಗೌಡ ಹೇಳ್ತ್ "ನೋಡಿ ಸ್ಯಾಬ್ರೆ, ಎಲ್ಲಾ ಮೊನ್ಸ್‌ರ ದೇವ್‌ರೇ ಸೃಷ್ಟಿ ಮಾಡ್ದ್. ದೇವರ್ ಒಬ್ಬನೇಂತ ನಾವು ಓಂದುಗ ನಂಬುವೆ, ನೀವೂ ಹೇಳ್ದು ಅದರ್ನೆ. ದೇವ್ರ್ ಒಬ್ಬ ನಾಮ ಹಲವುಂತ ನಮ್ಮ ನಂಬಿಕೆಂತ ಹೇಳ್ತ್. ಡಿಲ್ಲಿಗೆ ಹೋಕೆ ಒಬ್ಬ ವಿಮಾನಲಿ ಹೋದೆ, ಇನ್ನೊಬ್ಬ ರೈಲ್‌ಲಿ ಪ್ರಯಾಣ ಮಾಡ್ದೆ. ಮತ್ತೊಬ್ಬ ಬಸ್ಸಿಲಿ ಹೋಗಿ ಮುಟ್ಟದೆ. ಗುರಿ ಎಲ್ಲವದೂ ಒಂದೆ. ದಾರಿಗ ಮಾತ್ರ ವ್ಯತ್ಯಾಸ ಅಷ್ಟೆಂತ ವಿವರ್ಸಿ ಹೇಳ್ಕನ ಮುಕ್ರಿ ಹೌದುಂತ ತಲೆ ಆಡ್ಸಿತ್.

1947ನೇ ಇಸ್ವಿಲಿ ನಮ್ಮ ಭಾರತ ದೇಸನ ತುಂಡು ಮಾಡಿ ಮುಸ್ಲಿಮರಿಗೆ ಪ್ರತ್ಯೇಕ ಪಾಕಿಸ್ತಾನ ಆತ್. ಆದ್ರೂ ಇಂದಿನವರೇಗೆ ಅಲ್ಲಿ ಪ್ರಜಾಪ್ರಭುತ್ವ ಗಟ್ಟಿ ಆತಿಲ್ಲೆ. ಪಾಕಿಸ್ತಾನ ಆದ್ರೂ ನಮ್ಮ ದೇಶಲಿ ಮುಸ್ಲಿಮ್ ಸಮಸ್ಯೆ ಪರಿಹಾರ ಆತಿಲ್ಲೆ. ಇನ್ನೂ ಕೂಡಾ ಮುಸ್ಲಿಮರ ಸಮಸ್ಯೆಗೆ ಓಂದುಗ ಕಾರ್‍ಣಂತ ಅಪಪ್ರಚಾರ ಆತಾ ಉಟ್ಟು. ಇದ್ ತಪ್ಪು ಮುಸ್ಲಿಮರ ಅಭಿವೃದ್ಧಿಗೆ ಅವುಕೆ ಸಾಮಾನ್ಯ ಶಿಕ್ಷಣ ಕೊಡೊಕು. ಮುಸ್ಲಿಂ ಹೆಣ್ಣ್‌ಮಕ್ಕ ಹೆಚ್ಚಿನ ಸಂಖ್ಯೆಲಿ ಶಿಕ್ಷಣ ಪಡ್ದರೆ ಹತ್ತ್ ವರ್ಸಲಿ ಮುಸ್ಲಿಮರ ಸರ್ವಾಂಗೀಣ ಅಭಿವೃದ್ಧಿ ಆದೇಂತ ಸಮದಾನಲಿ ಹೇಳ್ದೊ.

ಅಷ್ಟೊತ್ತಿಗೆ ಎಲ್ಲಾ ವಿವರ ತಿಳ್ದ್ ಆಕನ ಮುಕ್ರಿಗೆ ನಂಬಿಕೆ ಬಾತ್. ನಾ ಕೂಡಾ ಓಂದುಂತೇಳುವ ಒಂದು ನಂಬಿಕೆ ಅವನ ಮನ್ಸಿಲಿ ಗಟ್ಟಿ ಆತ್. ಜಾಮೀನ್ ಪಡ್ದ್ ಸ್ಟೇಶನ್‌ಂದ ಹೊರಗೆ ಬಾಕನ ಎಲ್ಲವೂ ಭಾರತ್ ಮತಾಕಿ ಜೈ!, ವಂದೇ ಮಾತರಂ! ಘೋಷಣೆ ಹಾಕ್‌ಕನ ಅವರೊಟ್ಟಿಗೆ ಮುಕ್ರಿನೂ ಜೈ ಹಾಕಿತ್. ಅಷ್ಟೊತ್ತಿಗೆ ನನ್ನ ಬೆನ್ನಿಗೆ ಏನೋ ಕಚ್ಚಿ ಇಸಿದಂಗೆ ಬೇನೆ ಆತ್. ಕಂಣ್ ಬುಟ್ಟು ನೋಡ್ಕನ ಬೆಳ್ಗ್ ಗಂಟೆ ಏಳ್‌ವರೆ ಕಳ್ದುಟು. ಆಗ ಗೊತ್ತಾತ್ ಇದೆಲ್ಲ ನಂಗೆ ಕಂಡದ್ ರಾತ್ರಿ ನಿದ್ದೆ ಮಾಡ್ಕನ ಬಿದ್ದ ಕನ್ಸ್‌ಲಿಂತ.

ಪಾಕಿಸ್ತಾನ ಯುದ್ದ

1965 ಸೆಪ್ಟಂಬರ್ ತಿಂಗಂತ ನನ್ನ ನೆನ್‌ಪು. ರಾತ್ರೆ ಎಂಟ್ ಗಂಟೆಗೆ ನಾ ಬೆಂಗ್ಳೂರು ಕೆಂಪೇಗೌಡ ಬಸ್ ನಿಲ್ದಾಣಲಿ ಇಳ್ದೆ. ಅಷ್ಟರ ವರೇಗೆ ನಾ ಬೆಂಗ್ಳೂರು ನೋಡ್ತಿಲ್ಲೆ. ನಮ್ಮ ಬಸ್ ಸುಳ್ಯ, ಮಡಿಕೇರಿ, ಮೈಸೂರು. ಮಂಡ್ಯಕ್ಕಾಗಿ ಬೆಂಗ್ಳೂರು ಮುಟ್ಟಿತ್. ಆ ಸರ್ಕಾರಿ ಬಸ್ಸಿಲಿ ಹಿಂದೆನ ಸೀಟಿಲಿ ಜಾಗೆ ಸಿಕ್ಕಿತ್. ನಮ್ಮೂರಿಂದ ಬೆಂಗ್ಳೂರು ಬಸ್ ಚಾರ್ಜ್ ಆಗ ರೂ. ನಲ್ವತ್ ಮಾತ್ರ. ನಮ್ಮ ಬಸ್ ಎಕ್ಸ್‌ಪ್ರೆಸ್‌ಂತ ಬೋರ್ಡ್ ಹಾಕಿರೂ ಮಡಿಕೇರಿವರೇಗೆ ಕೈ ಒಡ್ದಲ್ಲಿ ಜನಗಳ ಹತ್ಸುದು, ಇಳ್ಸುದು ನಡೆತಾ ಇತ್ತ್. ಕನ್ನಡ ಜಿಲ್ಲೆಲಿ ಸೆಟ್ಟಿ ಬಸ್, ಮಿಸ್ಕಿತ್ ಬಸ್. ಪಿ.ವಿ ಬಸ್. ಆದಿಕಾವೇರಿ ಬಸ್, ಕೆ.ಪಿ ಗೌಡ್ರ ಸುಬ್ರಹ್ಮಣ್ಯೇಶ್ವರ ಬಸ್‌ಗ ಸರ್ವೀಸ್ ಹೊಡೆತಿದ್ದೊ.

ಅಂದ್ ನಮ್ಮ ಬಸ್ ಮಂಡ್ಯ ಪೇಟೆಗೆ ಮುಟ್ಟ್‌ಕನ ಆರ್‌ಗಂಟೆ ಕಳ್ದ್‌ಟು. ಆದ್ರೂ ಎಲ್ಲಿಯೂ ಪೇಟೆಲಿ ಲೈಟ್ ಬೆಳ್ಕ್ ಕಂಡತಿಲ್ಲೆ. ಅಂಗ್‌ಡಿ. ಹೋಟೆಲ್‌ಗ ಸಣ್ಣ ಜೀರೋ ಬಲ್ಬು ಬೆಳ್ಕಿಲಿ ವ್ಯವಹಾರ ಮಾಡ್ತಿದ್ದೊ. ಬಸ್ ಸ್ಟೇಂಡಿಲಿ ಜೀದಿ ಬೆಳ್ಕ್ ಇತ್ಲೆ. ಏನ್‌ಂತ ನಂಗೆ ಅರ್ತ ಆತಿಲ್ಲೆ. ನಮ್ಮ ಬಸ್ ಡ್ರೈವರ್ ಕೂಡಾ ಬಸ್ಸಿನೊಳಗೆ ಲೈಟ್ ಹಾಕಿತ್ಲೆ. ಬಸ್‌ನ ಹೆಡ್‌ಲೈಟಗೂ ಮುಕ್ಕಾಲ್ ಬಾಗಕ್ಕೆ ಕಪ್ಪು ಕಾಗದ ಅಂಟ್ಸಿದ್ದೊ. ಸಣ್ಣ ಬೆಳ್ಕ್‌ಲಿ ಬಸ್ ಓಡ್ತಿತ್. ನನ್ನ ಬಲಕ್ಕೆ ಕುದ್ದ ಜಂಟ್ಲ್ ಮೇನ್‌ನಂಗೆ ಕಾಂಬವನೊಟ್ಟಿಗೆ ಪೇಟೆಲಿ ಎಲ್ಲೂ ಬೆಳ್ಕ್ ಕಾಂಬೋದಿಲ್ಲೆ ಏನ್‌ಂತ ವಿಚಾರ್ಸಿದೆ. ಅಂವ ಇಂಗ್ಲೀಸ್‌ಲಿ "ಐ ಡೋಂಟ್ ನೋಂತ" ಮೋರೆಗೆ ಹೊಡ್ದಂಗೆ ಹೇಳಿ ಚೀಲಲಿದ್ದ ಬಾಟ್ಲಿ ನೀರ್ ತೆಗ್ದ್ ಗಟಗಟಂತ ಕುಡಿಕೆ ಸುರು ಮಾಡ್ತ್. ನಮ್ಮ ಎದ್ರ್‌ಂದ ಬಾತಿದ್ದ ಬಸ್‌ಗಳ ಕನ್ನಡಿಗೆ ಕಪ್ಪು ಕಾಗದ ಅಂಟ್ಸಿದ್ ಕಾಂಬೊತಿತ್. ಎತ್ತ ನೋಡ್ರು ಕರಿಗೂಡು ಕತ್ತಲೆ ಮಾತ್ರ. ಹತ್ತ್ ಹದಿನೈದ್ ಮಾಳಿಗೆ ಕಟ್ಟಡಗಳ್ಲಿಸಾನೂ ಬೆಳ್ಕ್ ಇತ್ಲೆ.

ಬೆಂಗ್ಳೂರುಗೆ ಸುರು ಹೋದ ನಂಗೆ ಬಸ್‌ಸ್ಟೇಂಡಿಲಿ ಇಳಿಕನ

ಯಾವ ದಿಕ್ಕಿಗೆ ಹೋದುಂತ ಗೊತ್ತಾಗದೆ ಕಣ್ಣ್ ಕಟ್ಟಿದಾಂಗೆ ಆತ್. ಕನ್ನಡ ಜಿಲ್ಲೆಂದ ಬೆಂಗ್ಳೂರುಗೆ ಹೋದ ಹೆಚ್ಚಿನವು ಬಸ್‌ಸ್ಟೇಂಡಿನ ಹಕ್ಕಲೆ ಇರ್ವ ಎನ್.ಎಂ.ಸಿ ಹೋಟೆಲ್‌ಲಿ ರೂಂ ಬಾಡಿಗೆ ಮಾಡ್ತಿದ್ದೊ. ಕತ್ತಲೆಲಿ ಬಸ್‌ಸ್ಟೇಂಡಿಂದ ಹೊರಗೆ ಮಾರ್ಗಕೆ ಬಂದ್ ಸಾಲ್‌ಲಿ ನಿತ್ತ್ ಒಂದು ರಿಕ್ಷಾದವನೊಟ್ಟಿಗೆ ಎನ್.ಎಂ.ಸಿ ಹೋಟೆಲಿಗೆಂತ ಹೇಳಿ ರಿಕ್ಷಾಕ್ಕೇ ಹತ್ತಿ ಕುದ್ದೆ. "ಆಮ, ಆಮಂತ" ಹೇಳ್ದ ತಮಿಳ್ ರಿಕ್ಷಾ ಡ್ರೈವರ್ ಕೈಲಿ ಸ್ಟಾರ್ಟ್ ಲಿವರ್‌ನ ಎಳ್ದ್ ಬುರ್‌ಂತ ಹೊರ್ಟತ್. ಐದ್ ನಿಮ್ಷದ ದೂರಕೆ ಇಪ್ಪತ್ತೈದ್ ರೂಪಾಯಿ ವಸೂಲ್ ಮಾಡ್ತ್.

ಹೋಟೆಲ್‌ಲಿ ಐವತ್ತ್ ರೂಪಾಯಿಗೆ ಸಿಂಗಲ್ ರೂಂ ಸಿಕ್ಕಿತ್. ಹೋಟೆಲ್ ಮೆನೇಜರ್ ಉಡ್‌ಪಿ ಕಡೆಂದ ಬಂದವ ಹರಿಪ್ರಸಾದ ಭಟ್‌ಂತ ಹೆಸ್ರ್. ತುಳು ಮಾತಾಡ್ತಾ ಇತ್ತ್. ಅವನೊಟ್ಟಿಗೆ ವಿಚಾರ್ಸಿಕನ ಹತ್ತ್ ದಿನದ ಹಿಂದೆ ಪಾಕಿಸ್ತಾನದ ಸೈನ್ಯ ಕಾಶ್ಮೀರನ ಹಿಡೆಕೆ ಜಮ್ಮು, ಕಾಶ್ಮೀರಂದ ಹಿಡ್ದ್ ಗುಜರಾತಿನ ಕಚ್ಛ್ ಪ್ರದೇಶದವರೆಗೆ ಅಲ್ಲಲ್ಲಿ ಗಡಿ ದಾಟಿ ದಾಳಿ ಮಾಡ್ಕೆ ಸುರು ಮಾಡ್ಕೊಳೊಂತ ಗೊತ್ತಾತ್. ಇದ್‌ಕ್ಕೆ ನಮ್ಮ ಸೈನ್ಯ ಪಾಕಿಸ್ತಾನದ ಸೈನಿಕರಿಗೆ ಗುಂಡಿನ ಮೂಲಕ ಉತ್ತರ ಕೊಟ್ಟೊ. ನಮ್ಮ ಭೂ ಸೇನೆಗೆ ಮುಂದೆ ಹೋಕೆ ಏರ್‌ಫೋರ್ಸ್ ವಿಮಾನ ಶತ್ರುಗಳ ಮೇಲೆ ಬಾಂಬು ಹಾಕಿ ದಾರಿ ಮಾಡಿಕೊಡ್ತಿದ್ದೊ. ನ್ಯಾಟ್, ಮಿಗ್ ನಮ್ಮ ಯುದ್ಧ ವಿಮಾನಗ ಪಾಕಿಸ್ತಾನ ಪ್ರದೇಶಕ್ಕೆ ಹುಕ್ಕ್ ಬಾಂಬು ದಾಳಿ ಮಾಡ್ತಿದ್ದ ವಾರ್ತೆ ರೇಡಿಯೋ ಮತ್ತೆ ಪೇಪರ್‌ಲಿ ಬಾತಿತ್ತ್. ಯುದ್ಧ ಹಕ್ಕಲೆ ಹಕ್ಕಲೆ ಇಪ್ಪತ್ತೈದ್ ದಿನ ನಡ್ತ್. ಪಾಕಿಸ್ತಾನದ ದೊಡ್ಡ ನಗರ ಲಾಹೋರ್‌ನ ನಮ್ಮ ಸೈನ್ಯ ವಶಕ್ಕೆ ತಕಂತ್. ಮಾರ್ಣೆದಿನ ಎಲ್ಲಾ ಪೇಪರ್‌ಗ ಲಾಹೋರ್ ನಗರದ ಸ್ವಾಗತ ಕಮಾನ್‌ನ ಫೋಟೋ ಎದ್ರ್ ಪುಟಲಿ ಹಾಕಿ ನಮ್ಮ ಸೈನಿಕರ ಕಾರ್ಯನ ಹೊಗ್‌ಳಿ ಬರ್ದೊ. ಅ ಸಮಯಲಿ ಪಾಕಿಸ್ತಾನದ ಯುದ್ಧ ವಿಮಾನಗ ಬೆಂಗಳೂರಿಗೂ ಬಾಂಬು ದಾಳಿ ಮಾಡ್ವ ಹೆದ್ರಿಕೆ ಇತ್ತ್. ಎಚ್.ಎ.ಎಲ್ ಸೇರಿ ಯುದ್ಧ ಸಾಮಾಗ್ರಿ ತಯಾರ್ ಮಾಡ್ವ ದೊಡ್ಡ ದೊಡ್ಡ ಕಾರ್ಖಾನೆಗ ಬೆಂಗ್ಳೂರುಲಿ ಇದ್ದೊ. ಭಾರತದ ವಾಯುಸೇನೆನ ಮುಖ್ಯ ತರಬೇತಿ ಕೇಂದ್ರವೂ ಬೆಂಗಳೂರು. ಈ ಅಪಾಯಂದ ಬೆಂಗ್ಳೂರುನ ರಕ್ಷಣೆ ಮಾಡ್ಕೆ ರಾತ್ರೆ ಹೊತ್ತ್ ಪೇಟೆಲಿ ದೀಪ ಹೊತ್ತಿಸ್ಕೆ ಬೊತ್ತ್‌ಂತ ಕಾನೂನು ಜಾರಿ ಮಾಡ್ದೊ. ಇದ್ಕೆ ಬ್ಲೇಕ್‌ಔಟ್ ಮಾಡ್ದುಂತ ಕರ್ದ್‌ವೆ. ಯಾವ ವಾಹನವೂ ಹೆಡ್‌ಲೈಟ್ ಹಾಕಿಕೆ ಬೊತ್ತ್. ಅಷ್ಟಲ್ಲದೆ ಟಾರ್ಜ್‌ಲೈಟಿನ ಬೆಳ್ಕೂ ಹೊರಗೆ ಬೀಳ್‌ಕಾಗದ್. ದೂರಂದ ನೋಡ್ಕನ ರಾತ್ರೆ ಹೊತ್ತು ಬೆಂಗ್ಳೂರು ಒಂದು ಸಣ್ಣ ಪೇಟೆನಂಗೆ ಕಾಂಬತಿತ್ತ್.

ಆಗ ಸುಮಾರ್ ರಾತ್ರೆ ಒಂಭತ್ತುವರೆ ಗಂಟೆ ಸಮಯ ನಾ ಹೋಟ್ಲ್‌ಲಿ ಊಟ ಮಾಡ್ತಿದ್ದೆ. ಹೋಟೆಲ್ ಒಳಗೆ ಸಣ್ಣ ಬೆಳ್ಕ್‌ಲಿ ವ್ಯಾಪಾರ ನಡೆತಾ ಇತ್ತ್. ಅಷ್ಟೊತ್ತಿಗೆ ನಗರಸಭೆ ಸೈರನ್ ಸಬ್ದ ಬಾತ್. ಈ ಸಬ್ದ ಐದ್ ನಿಮ್ಷಲಿ ನಿತ್ತತ್. ರಾತ್ರೆ ಹೊತ್ತ್ ಪಾಕಿಸ್ತಾನದ ಯುದ್ಧ ವಿಮಾನಗ ಬಾಂಬು ದಾಳಿ ಮಾಡ್ರೆ ಸಾಮಾನ್ಯ ಜನ ಏನ್ ಮಾಡೊಕುಂತ ಪೋಲಿಸಿನವು ಬೀದಿ ಬೀದಿಲಿ ಮಾಹಿತಿ ಕೊಡ್ತಾ ಹೋತಿದ್ದೊ ಗಡ. ಸೈರನ್ ಸಬ್ದ ಕೇಳ್ದ ಕೂಡ್ಲೇ ರಕ್ಷಣೆಗಾಗಿ ಸುರಕ್ಷಿತ ಜಾಗೆಗೆ ಹೋಗಿ ನಿಲ್ಲೊಕು. ಯಾವುದೇ ಬೆಳ್ಕ್ ಹಾಕಿಕೆ ಬೊತ್ತ್. ಒಂದಕೆ ಸೈರನ್ ಸಬ್ದ ಬಂದ ಮೇಲೆ ಅಪಾಯ ಇಲ್ಲೆಂತ ಸೂಚನೆ ಇತ್ತ್. ವಾಹನಗ ಎಲ್ಲೇ ಇದ್ದರೂ ಕೂಡ್ಲೆ ಲೈಟ್ ಕೆಡ್ಸಿ ಅಲ್ಲೆ ನಿಲ್ಲೊಕುಂತ ಪೋಲಿಸ್ ಸೂಚನೆ

ಇತ್ತ್. ಆ ದಿನ ರಾತ್ರೆ ಎರ್ಡ್ ಮೂರ್ ಸರ್ತಿ ಸೈರನ್ ಸಬ್ದ ಬಾತ್. ನಿಜವಾದ ವಿಮಾ
ದಾಳಿನ ಸಂದರ್ಭ ಜನಗ ಯಾವುದೇ ಹೆದ್ರಿಕೆ ಇಲ್ಲದೆ ಧೈರಲಿ ಇರೊಕುಂತ ಒಂದು
ರೀತಿನ ತರಬೇತಿ ಇದ್. ದೇವರ ದಯೆಂದ ಬೆಂಗ್ಳೂರಿಗೆ ವಿಮಾನ ದಾಳಿ ನಡ್ತಿಲ್ಲೆ
ಪಾಕಿಸ್ತಾನದ 'ಸೇಬರ್ ಜೆಟ್' ಯುದ್ಧ ವಿಮಾನಗ ಪಂಜಾಬ್ ಗಡಿ ಭಾಗಲಿರುವ ಅಮೃತಸ
ಪಟ್ಟಣದ ಮೇಲೆ ಬಾಂಬು ದಾಳಿ ಮಾಡಿ ನಷ್ಟ ಕಷ್ಟ ಆತ್. ಸೈನಿಕರ್ ಮತ್ತೆ ಸಾಮಾನ
ಜನಗಳೂ ಅಪಾಯಕ್ಕೆ ಸಿಕ್ಕಿ ಹಾಕಿದೊ.

ಪಾಕಿಸ್ತಾನದ ಈ ಹುಚ್ಚಾಟಕ್ಕೆ ನಮ್ಮ ವಿಮಾನ ಪಡೆ ಸರಿಯಾದ ಬುದ್ಧಿ ಕಲ್ಸಿತ್. ನಮ
ವಾಯುಪಡೆ ವಿಮಾನಗ ಪಾಕಿಸ್ತಾನದ ಸೇಬರ್ ಜೆಟ್ ವಿಮಾನಗಳ ಗುಬ್ಬಿ ಹಕ್ಕಿಗ
ಬೀಳ್ಸಿದಂಗೆ ಹೊಡ್ದ್ ಕೆಡ್ಗಿದೊ. ಅಮೇರಿಕಾ ದೇಶ ಪಾಕಿಸ್ತಾನಕ್ಕೆ ಕೊಟ್ಟ ಪ್ಯಾಟನ್ ಟ್ಯಾಂಕ್‌ಗ
ನಮ್ಮ ಸೈನಿಕರ್ ಫಿರಂಗಿ ಗುಂಡ್ ಹಾರ್ಸಿ, ಕಾಯಿಗೆ ಕಲ್ಲ್ ಹೊಡ್ದ್ ಹೊಡಿ ಮಾಡ್ವಂಗ
ಹೊಡಿ ಹೊಡಿ ಮಾಡ್ದೊ. ಶತ್ರುಗಳ ಯುದ್ದ ಟ್ಯಾಂಕ್‌ಗಳ ವಶ ಪಡ್ಸಿ ಪಂಜಾಬಿನಿಂದ
ಎಳ್ದ್ ತಂದ್ ಡಿಲ್ಲಿಲಿ ಸಾರ್ವಜನಿಕರಿಗೆ ಪ್ರದರ್ಶನಕ್ಕೆ ಇಸಿದ್ದೊ. ಈ ಯುದ್ದಲಿ ಪಾಕಿಸ್ತಾ
ಮುನ್ನೂರಕ್ಕೂ ಹೆಚ್ಚಿನ ಯುದ್ದ ಟ್ಯಾಂಕ್‌ಗಳ ಕಳ್ಕಂಡತ್. ಅಮೇರಿಕಲಿ ತಯಾರಾದ ಬಾ
ಹೆಸ್ರ್ ಹೋದ ಪ್ಯಾಟನ್ ಟ್ಯಾಂಕ್‌ಗ ಕುಂಬಾರನ ಮಣ್ಣಿನ ಮಡ್ಕೆನಾಂಗೆ ಹೊಡಿ ಹೊಡಿ
ಆದ್ದರ ನೋಡಿ ಅಮೇರಿಕಕ್ಕೂ ತಲೆ ಕಾಗಡೆ ಹಾಕುವಂಗೆ ಆತ್. ಹಳ್ಳಿ ಜನಗ ಪಾಕಿಸ್ತಾನದ
ಹುಚ್ಚಾಟ ನೋಡಿ ಚೊಟ್ಟೆ ಮೊನ್ಸ ಮರ ಹತ್ತಿಕೆ ಪ್ರಯತ್ನ ಮಾಡ್ದಂಗೆಂತ ತಮಾಸ
ಮಾಡ್ತಿದ್ದೊ. ಬಾಲ ಸುಟ್ಟ ಕೊತ್ತಿನಂಗಾದ್ರೂ ಪಾಕಿಸ್ತಾನ ಬುದ್ದಿ ಕಲೆವ ಮನ್ಸಿಲ್ಲೆ. ಭಾರತದ
ಮೇಲೆ ದ್ವೇಶಲೇ ಹುಟ್ಟಿದ ಪಾಕಿಸ್ತಾನ, ದ್ವೇಶನವೇ ಸಾಧಿಸುತ್ತ ಉಟ್ಟು. ಅಂತೂ ಸೆಪ್ಟಂಬರ
ಇಪ್ಪತ್ತ ಮೂರಕ್ಕೆ ಸಂಯುಕ್ತ ರಾಷ್ಟ್ರ ಸಂಸ್ಥೆನ ಮಧ್ಯಸ್ಥಿಕೆಲಿ ಭಾರತ ಏಕಪಕ್ಷೀಯ ಕದನ
ವಿರಾಮ ಘೋಷಣೆ ಮಾಡ್ತ್.

1962ನೇ ಇಸ್ವಿಲಿ ಚೀನಾ ಆಕ್ರಮಣ ಮಾಡಿ ನಮ್ಮ ದೇಶದ ಪೂರ್ವಭಾಗಲಿ ಸಾವಿರಾರ
ಚ.ಮೈಲ್ ಭೂಮಿನ ಬಲಾತ್ಕಾರ ಮಾಡಿ ಸ್ವಾಧೀನ ಮಾಡ್ತ್. ಹಿಂದಿ ಚೀನೀ ಭಾಯಿ
ಭಾಯಿ ಘೋಷಣೆ ಹೊಡ್ದ ಪ್ರಧಾನಿ ನೆಹರು ಮೋಸ ಹೋಗಿ ಅದೇ ಪಶ್ಚಾತ್ತಾಪಲಿ ತೀರಿ
ಹೋದೊ. ಅನಿವಾರ್ಯ ಪರಿಸ್ಥಿತಿಲಿ ಲಾಲ್‌ಬಹುದೂರ್ ಶಾಸ್ತ್ರಿಗ ಪ್ರಧಾನ ಮಂತ್ರಿ
ಆದೊ. 1965 ಪಾಕಿಸ್ತಾನ ಯುದ್ದಲಿ ನಮ್ಮ ದೇಶ ಯುದ್ದ ವಿಮಾನಗ ಯುದ್ದ ಟ್ಯಾಂಕ್‌ಗ
ಸೇರಿ ಸುಮಾರು ನಾಲ್ಕ್ ಸಾವಿರ ವೀರ ಸೈನಿಕರ್ ಹೋರಾಟಲಿ ದೇಶಕ್ಕಾಗಿ ಬಲಿದಾನ
ಮಾಡ್ದೊ.

ಪ್ರಧಾನಿ ಶಾಸ್ತ್ರಿಗ ನೋಡಿಕೆ ಸಣ್ಣ ಮೊನ್ಸ್‌ನಂಗೆ ಕಂಡರೂ ಯುದ್ದ ಸಮಯಲಿ ಕತ್ತಿಗೆ
ಕತ್ತಿಂದಲೇ ಉತ್ತರ ಕೊಡುವ ದೃಢ ನಿರ್ಧಾರ ಮಾಡಿ ಪಾಕಿಸ್ತಾನ ಹೀನಾಯ ಸೋಲು
ಕಂಡತ್. ದೇಶಕ್ಕೆ ಆರ್ಥಿಕವಾಗಿ ದೊಡ್ಡ ಹೊಡ್ತ ಬೀತ್. ಸೈನಿಕರಿಗೆ ಸಹಾಯ ಮಾಡ
ಕೆಲ್ಸಲಿ ದೇಶದ ಪ್ರಜೆಗಳೂ ಕೈ ಜೋಡ್ಸೊಕುಂತ ಕರೆಕೊಟ್ಟೊ. ಪ್ರಧಾನಿಗಳ ಮನವಿಗೆ ಪ್ರತಿ
ಸೋಮಾರ ರಾತ್ರಿ ಉಪಾಸ ಮಾಡಿ ಉಳ್ಸಿದ ಹಣನ ಯುದ್ದ ಫಂಡಿಗೆ ದೇಣಿಗೆ
ದೇಶಕ್ಕೆ ಕಷ್ಟ ಬಂದರೆ ನಾವೆಲ್ಲ ಒಂದಾಗಿ ಕೆಲ್ಸ ಮಾಡೊಕುಂತ ಒಂದು ಹೊಸ ವಾತಾ
ನಿರ್ಮಾಣ ಆತ್.

ಕದನ ವಿರಾಮದ ಪರಿಣಾಮ ರಷ್ಯಾ ದೇಶದ ತಾಸ್ಕೆಂಟ್ ನಗರಲಿ 1966 ಜನವರಿ 10ಕ್ಕೆ ಭಾರತ ಪಾಕಿಸ್ತಾನ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದೊ. ಪ್ರಧಾನಿ ತಾಸ್ಕೆಂಟ್‌ಗೆ ಹೊರಟ್ ಡೆಲ್ಲಿಲಿ ವಿಮಾನ ಹತ್ತ್‌ಕಾಕನ ಯಾರೊ ಒಬ್ಬ ಪತ್ರಕರ್ತ ಒಂದು ಪ್ರಶ್ನೆ ಕೇಳ್ತ್. ನೋಡಿ ಪ್ರಧಾನಿಗಳೆ ನೀವು ಬರೆ 5 ಅಡಿ 2 ಇಂಚ್ ಎತ್ತರದ ಸಣ್ಣ ಆಳ್ ಆದರೆ ಪಾಕಿಸ್ತಾನದ ಅಧ್ಯಕ್ಷ ಜ। ಅಯೂಬ್ ಕಾನ್ 6 $^1/_2$ ಅಡಿ ಎತ್ತರದ ದೈತ ವ್ಯಕ್ತಿ. ನೀವು ಹೇಂಗೆ ಅವನೊಟ್ಟಿಗೆ ಮಾತ್ ಕತೆ ನಡ್ಸಿರೆಂತ ಒಂದು ಕುಹಕದ ಸವಾಲ್ ಹಾಕಿತ್. ಆಗ ಶಾಸ್ತ್ರಿಗ ಕೊಟ್ಟ ಉತ್ತರ ಪತ್ರಕರ್ತಂಗೆ ಮಾತ್ರ ಅಲ್ಲ ಅಯೂಬ್ ಖಾನ್‌ಗೂ ಹಳೆ ಮೆಟ್ಟಿಲಿ ಹೊಡ್ದಂಗೆ ಆತ್. ಶಾಸ್ತ್ರಿಗ ಹೇಳ್ದೊ, "ನೀವು ಹೇಳ್ದ್ ಸರಿ, ನೋಡ್ಕನ ಅಜಗಜಾಂತರ ಕಂಡದೆ, ಆದರೆ, ಅಯೂಬ್ ಖಾನ್ ನನ್ನೊಟ್ಟಿಗೆ ಮಾತಾಡ್ಕನ ಯಾಗೋಳು ತಲೆ ತಗ್ಗಿಸಿ ಮಾತಾಡ್ದೆ. ನಾ ಮಾತಾಡ್ಕನ ತಲೆ ಎತ್ತಿ ಮಾತಾಡ್ನೆಂತ" ಉತ್ತರ ಕೊಟ್ಟೊ. ನಮ್ಮ ಪ್ರಧಾನಿಗಳ ಆತ್ಮ ವಿಶ್ವಾಸ ಅಷ್ಟ್ ಗಟ್ಟಿ ಇತ್.

ಒಪ್ಪಂದಕ್ಕೆ ಸಹಿ ಹಾಕಿದ ರಾತ್ರಿ ಕೋಣೆಲಿ ಮಲ್ಗಿದಲ್ಲೇ ಹಾರ್ಟ್‌ಫೈಲ್ ಆಗಿ ಶಾಸ್ತ್ರಿಗ ತೀರಿ ಹೋದೊಂತ ಸುದ್ದಿ ಬಾತ್. ಇಡೀ ದೇಸಕ್ಕೆ ಅವರ ಸಾವುನ ಸುದ್ದಿ ಕೇಳಿ ದಿಗ್ಭ್ರಮೆ ಆತ್. ನಮ್ಮ ದೇಶದ ದುರಾದೃಷ್ಟಂದ ಯುದ್ದಲಿ ಗೆದ್ದ ಪ್ರಧಾನಿ ಹೆಣ ಆಗಿ ದೇಸಕ್ಕೆ ಬಂದೊ. ಪಾಕಿಸ್ತಾನ ಸಂಪೂರ್ಣ ಸೋಲ್ಸಿ ಹಿಂದೆ 1962ರಲ್ಲಿ ಚೀನಾದ ಕೈಲಿ ಸೋತ ನಮ್ಮ ದೇಸ ಪುನಃ ಪ್ರಪಂಚದ ಎದ್ರ್ ತಲೆ ಎತ್ತಿ ನಿಲ್ವಂಗೆ ಆತ್. 1947, 1965 ಮತ್ತೆ 1971 ಈ ಮೂರ್ ಸರ್ತಿ ನಡ್ದ ಪಾಕಿಸ್ತಾನ, ಭಾರತ ಯುದ್ದಲಿ ಪಾಕಿಸ್ತಾನ ಪೂರಾ ಸೋತು ಹೋದರೂ ನಮ್ಮ ಪುಕ್ಕಲ್ ರಾಜಕಾರಣಿಗ ಮಾತ್‌ಕತೆ ಒಪ್ಪಂದದ ಸಮಯ ಮೇಜಿನ ಮೇಲೆ ಯಾಗೋಳು ಸೋಲುತಿದ್ದೊ. ಸಾವಿರಾರ್ ಸೈನಿಕರ್ ಬಲಿದಾನ ಆದ್ರೂ ದೇಸದ ಸಮಸ್ಯೆಗೆ ಪರಿಹಾರ ಸಿಕ್ಕಿತ್ಲೆ. ಕಾಶ್ಮೀರ ಸಮಸ್ಯೆನ ಪರಿಹರ್ಸಿಕೆ ಸಿಕ್ಕಿದ ಮೂರ್ ಅವಕಾಶಗಳ ನಮ್ಮ ದೇಸ ಕಳ್ಕಂಡತ್. 1971ರ ಬಂಗ್ಲಾ ದೇಶದ ವಿಮೋಚನೆ ಯುದ್ದಲಿ ಹಕ್ಕಲೆ ಹಕ್ಕಲೆ 1 ಲಕ್ಷ ಪಾಕಿಸ್ತಾನಿ ಸೈನಿಕರ್ ಸೆರೆ ಸಿಕ್ಕಿರೂ ಶಾಂತಿ ಒಪ್ಪಂದಲಿ ನಾವು ಸೋತು ಹೋಗಿ ಈಗಳೂ ಪೆಟ್ಟ್ ತಿಂಬತಾವೊಳೊ. ಒಂದು ದೇಸದ ರಾಜಕಾರಣಿಗಳಿಗೆ ದೇಸ ಭಕ್ತಿ ಕಮ್ಮಿ ಆದರೆ ಎಂತ ಅನಾಹುತ ಆದೇಂತ ನಮ್ಮ ದೇಸವೇ ಒಂದು ಸಾಕ್ಷಿ.

ನಮ್ಮ ಮುಂದೆನ ಪೀಳಿಗೆ ರಾಜಕಾರಣಿಗಳ ಈ ಹುಂಬತನ ನೋಡಿ ಸಾಪ ಹಾಕುದರ್ಲಿ ಸಂಸಯವೇ ಇಲ್ಲೇ. ಪುಕ್ಕಲ್, ಬ್ರಷ್ಟ , ವಂಶ ವಾರಿಸ್ ಹಕ್ಕ್‌ನ ಪ್ರತಿಪಾದನೆ ಮಾಡ್‌ವ ಮುಂದಾಳ್‌ಗಳ ಜಾಗೆಲಿ ದೇಶಭಕ್ತ ನಾಯಕರ್ ಆಡಳಿತಕ್ಕೆ ಬಂದರೆ ಸಮಸ್ಯೆಗಳಿಗೆ ಪರಿಹಾರ ಕಾಂಬಕೆ ಸಾಧ್ಯ. ಇಂತ ಪರಿಸ್ಥಿತಿ ಯಾಗ ಬಂದದೆಂತ ಕಾದ್ ನೋಡೊಮು.

ಜೋನಿಬೆಲ್ಲ



ಕುಂಞೇಟಿ ಶಿವರಾಮ ಗೌಡ

ಕುಂಞೇಟಿ ಶಿವರಾಮ ಮಾಸ್ಟ್ರ ಅರೆಬಾಸೆಲಿ ಬರ್‌ದ
ಜೋನಿಬೆಲ್ಲ ಕತೆಗ. ಒಂದೊಂದು ಕತೆನೂ ಒಂದೆ ಉಸಿರಿಲಿ
ಓದಿ ಮುಗ್‌ಸುವ ಚಿಕ್ಕ ಚೊಕ್ಕ ಕಥನಗ
ಇವನ್ನ ಕತೆಗಳಂತಲೂ, ಲಲಿತ ಪ್ರಬಂದಗಳಂತಲೂ
ಹೇಳಕ್. ಬೆಟ್ಟದೂರಿನ ಹತ್ತಾರು ಕುಟುಂಬ ಒಟ್ಟಾಗಿ
ಬದುಕುವ ಗ್ರಾಮೀಣ ಚಿತ್ರಣ ಇದರ್ಲಿ ಕಂಡದೆ
ಒಟ್ಟಾಗಿ ಹೂಡುವ ಇಲ್ಲಿನ ಗದ್ದೆಗೋರಿ-ಹೊಸ್ತೂಟ-
ಕಬ್ಬಿನಾಲೆ-ಕಿಡ್ಡಸಬೇಟೆ-ಗುಳಿಗಕೋಲ ಇಲ್ಲಿ ನಡ್‌ದದೆ
ಮುಗಿಯದ ಪಾಲ್‌ಪಂಚಾತಿಗೆ ರಾತ್ರಿ ಮೊದ್‌ವೆ ದಿಬ್ಬಣದ
ಗಾಡಿ ಹೊರ್‌ಟದೆ
ಒಂಟಿಕೈಲಿ ಈಡ್ ಹೊಡ್‌ದ್ ಕೋವಿ ಲೈಸೆನ್ಸ್ ಪಡ್ದ
ಪಟೇಲರ್ ಇಲ್ಲಿ ಒಳೊ. ಜೊತೆಗೆ ಅಡ್‌ಕೆ ಕಳ್ಳ ಅಣ್ಣಪ್ಪ-
ಗುಂಡಿಗೆ ಬಿದ್ದ ಗುಡ್ಡಪ್ಪ-ಪೂಜಾರಿ ನಾರ್ಣಪ್ಪ-ಉಗ್ರಾಣಿ
ಸೋಂಪ-ಹೊಸ್ತೂಟದ ಹೊನ್ನಪ್ಪ ಬಾವ- ಊರಲ್ಲಿ
ಹಲವರೊಳೊ
ಅಚ್ಚ ಅರೆಗನ್ನಡಲಿ ಸೊಚ್ಚ ಮಲೆನಾಡ ಜನಜೀವನದ
ರಸಪಾಕ ಜೋನಿಬೆಲ್ಲ. ಇತ್ತೀಚೆನ ಅರೆಬಾಸೆಯ ಹೊಸ ಕೃತಿ

ಮುನ್ನುಡಿಯಿಂದ...

ಪ್ರಕಾಶನ : ವ್ಯಾಸ ಸೇವಾ ಟ್ರಸ್ಟ್ (ರಿ.)